
ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜುಲೈ 6 ಗುರುವಾರ 2023
ಸಂಪುಟ: 44 | ಸಂಚಿಕೆ: 81 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಕುಮಾರಣ್ಣನ ಕೈಯ್ಯಲ್ಲಿದೆ ಭ್ರಷ್ಟಾಚಾರದ 'ಪೆನ್‌ಡ್ರೈವ್'

50 ಲಕ್ಷದಿಂದ 10 ಕೋಟಿವರೆಗೆ ಲಂಚ ವಹಿವಾಟು


● ಇಂಧನ ಇಲಾಖೆ ಭ್ರಷ್ಟಾಚಾರದ ಮಾಹಿತಿ ಇರುವ ಪೆನ್‌ಡ್ರೈವ್ ಪ್ರದರ್ಶನ ● ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಈಗಲೂ ನನಗೆ ರೂಂ ಇದೆ ● ನಾನೇನು ರೌಡಿಗಳಿಗೆ ಬಾಟಲಿ ನೀಡಿ, ಟೆಂಟಲ್ಲಿ ನೀಲಿಚಿತ್ರ ಪ್ರದರ್ಶಿಸಿ ಕಾಸು ಮಾಡಿಲ್ಲ



ಬೆಂಗಳೂರು, ಜು.5(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಕೆಲ ಪ್ರಭಾವಿ ಸಚಿವರು, ವರ್ಗಾವರ್ಗಿಗೆ 50 ಲಕ್ಷ ರೂನಿಂದ 10 ಕೋಟಿ ರೂ.ವರೆಗೂ ಲಂಚ ಪಡೆಯುತ್ತಿದ್ದಾರೆ ಎಂದು ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಬಲವಾಗಿ ಆರೋಪಿಸಿದ್ದಾರೆ.

ಇಂಧನ ಸೇರಿದಂತೆ ಕೆಲವು ಇಲಾಖೆಗಳಲ್ಲಿ ನಡೆದಿರುವ ಭ್ರಷ್ಟಾಚಾರದ ತುಣುಕುಗಳನ್ನು ಒಳಗೊಂಡ ಪೆನ್‌ಡ್ರೈವ್ ಅನ್ನು ಮಾಧ್ಯಮಗಳ ಮುಂದೆ ಪ್ರದರ್ಶಿಸಿ, ಇದಕ್ಕೆ ಸದನದಲ್ಲಿ ಸಭಾನಾಯಕರು ಉತ್ತರ ಕೊಡಲಿ ಎಂದರು. ಕುಮಾರಸ್ವಾಮಿ ಖಾಲಿ ಬುಟ್ಟಿ ಇಟ್ಟುಕೊಂಡು ಹಾವು ಇದೆ ಎಂದು ತೋರಿಸುತ್ತಿದ್ದಾರೆ ಎಂದು ಕೆಲವು ಸಚಿವರು ಮತ್ತು ಕಾಂಗ್ರೆಸ್ ನಾಯಕರು ವ್ಯಂಗ್ಯವಾಡಿದ್ದರು. ಇದರಿಂದ ಕೆರಳಿದ ಕುಮಾರಸ್ವಾಮಿ ನಾನು ಖಾಲಿ ಬುಟ್ಟಿ ಇಟ್ಟುಕೊಂಡಿಲ್ಲ. ● 9ನೇ ಪುಟಕ್ಕೆ

10 ವರ್ಷದ ಭ್ರಷ್ಟಾಚಾರವೂ ತನಿಖೆಯಾಗಲಿ...



ಬೆಂಗಳೂರು, ಜು.5(ಕೆಎಂಶಿ)–2013ರಿಂದ 2023ರವರೆಗೆ ಕೇಳಿ ಬಂದ ಎಲ್ಲಾ ಭ್ರಷ್ಟಾಚಾರ ಹಗರಣಗಳ ತನಿಖೆ ನಡೆಸಲಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿನ 40% ಕಮಿಷನ್ ಪ್ರಕರಣವನ್ನು ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಕಾಂಗ್ರೆಸ್‌ನವರು ಒಂದೂವರೆ ವರ್ಷದಿಂದ ಆರೋಪ ಮಾಡುತ್ತಿದ್ದಾರೆ. ಇಲ್ಲಿಯವರೆಗೂ ದಾಖಲೆ ಕೊಟ್ಟಿಲ್ಲ. ಸರ್ಕಾರ ನಿಜವಾಗಲೂ ಭ್ರಷ್ಟಾಚಾರದ ವಿರುದ್ಧ ಇದ್ದರೆ, 2013ರಿಂದ 2023 ಮಾರ್ಚ್‌ವರೆಗಿನ ಎಲ್ಲಾ ಪ್ರಕರಣಗಳ ಬಗ್ಗೆ ತನಿಖೆ ಮಾಡಬೇಕು. ಕೇವಲ ಸೆಲೆಕ್ಟೀವ್ ಆಗಿ ರಾಜಕೀಯ ಪ್ರೇರಿತವಾಗಿ ತನಿಖೆ ಮಾಡಿದರೆ ಹೇಗೆ ಎಂದು ಪ್ರಶ್ನಿಸಿದರು. ಬಿಬಿಎಂಪಿ ಇತರ ಇಲಾಖೆ ವಿರುದ್ಧದ 40% ಕಮಿಷನ್ ಕುರಿತಾದ ಪ್ರಕರಣಗಳು ಲೋಕಾಯುಕ್ತಾದಲ್ಲಿವೆ. ಅವುಗಳನ್ನು ತನಿಖೆ ನಡೆಸಲಿ ಎಂದು ಹೇಳಿದರು. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪದ ವಿರುದ್ಧ ಮುನಿರತ್ನ ಮಾನನಷ್ಟ ಮೊಕದ್ದಮೆ ಹಾಕಿದ್ದಾರೆ. ಇನ್ನೂ ಅದಕ್ಕೆ ಅವರು ದಾಖಲೆಯಾಗಲಿ, ಉತ್ತರವಾಗಲೀ ನೀಡಿಲ್ಲ ಎಂದರು.

ಈ ವರ್ಷವೇ ಎಲ್ಲಾ ಗ್ಯಾರಂಟಿಗಳ ಜಾರಿ ಗ್ಯಾರಂಟಿ

● ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಈಗಾಗಲೇ ಶಕ್ತಿ, ಗೃಹಲಕ್ಷ್ಮಿ, ಅನ್ನಭಾಗ್ಯ ಜಾರಿಯಾಗಿವೆ ● ನವಂಬರ್‌ನಲ್ಲಿ ಯುವನಿಧಿ ಜಾರಿ ಶತಸಿದ್ಧ ● ಬಿಜೆಪಿ ತಂದಿದ್ದ ನಿಲುವಳಿ ಸೂಚನೆ ಪೂರ್ವಭಾವಿ ಪ್ರಸ್ತಾಪದ ವೇಳೆ ಭರವಸೆ ● ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ; ಮಾತಿನ ಚಕಮಕಿ



ಬೆಂಗಳೂರು, ಜು.5(ಕೆಎಂಶಿ)– ಪ್ರಸಕ್ತ ಆರ್ಥಿಕ ವರ್ಷದಲ್ಲೇ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿಯೇ ತೀರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಘೋಷಣೆ ಮಾಡಿದ್ದಾರೆ.

ಅಧಿಕಾರಕ್ಕೆ ಬರುವ ಮುನ್ನ ನಾವು ಜನತೆಗೆ ನೀಡಿದ್ದ ಮಾತನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ. ಅದರಲ್ಲಿ ಯಾವುದೇ ಲೋಪವಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ತಂದಿದ್ದ ನಿಲುವಳಿ ಸೂಚನೆ ಪೂರ್ವಭಾವಿ ಪ್ರಸ್ತಾಪದ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ಮುಖ್ಯಮಂತ್ರಿ ಅವರು, ಈಗಾಗಲೇ ಶಕ್ತಿ, ಗೃಹಜ್ಯೋತಿ ಹಾಗೂ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದ್ದೇವೆ. ಕುಟುಂಬದ ಯಜಮಾನಿಗೆ ಮಾಸಿಕ 2000 ರೂ. ನೀಡುವ ಗೃಹಲಕ್ಷ್ಮಿ ಯೋಜನೆ ಆಗಸ್ಟ್ ತಿಂಗಳಿನಿಂದ ಜಾರಿಗೆ ಬರಲಿದೆ. ಆ ತಿಂಗಳಿನಿಂದಲೇ ಅವರ ಖಾತೆಗೆ ಹಣ ವರ್ಗಾವಣೆಯಾಗಲಿದೆ.

ಈ ತಿಂಗಳ ಮಧ್ಯ ಭಾಗದಿಂದ ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ನಡೆಯಲಿದೆ. ನಿರುದ್ಯೋಗಿಗಳಿಗೆ ಮಾಸಿಕ ಮೂರು ಸಾವಿರ ರೂ. ನೀಡುವ ಯುವನಿಧಿ ಯೋಜನೆ ನವಂಬರ್ ತಿಂಗಳಿನಿಂದ ಜಾರಿಯಾಗಲಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಡಿಪ್ಲೊಮಾ ಮತ್ತು ವಿವಿಧ ಪದವಿಗಳನ್ನು ಪಡೆದವರು ಆರು ತಿಂಗಳ ಒಳಗಾಗಿ ಉದ್ಯೋಗ ಸಿಗದಿದ್ದರೆ, ಅಂಥವರನ್ನು ಗುರುತಿಸಿ ನಿರುದ್ಯೋಗ ಭತ್ಯೆ ನೀಡಲಾಗುವುದು. ನಮಗೆ ಎಷ್ಟುಮಂದಿ ನಿರುದ್ಯೋಗಿಗಳು ಇದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ. ಯೋಜನೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ● 9ನೇ ಪುಟಕ್ಕೆ

'ಅನ್ನಭಾಗ್ಯ'ಕ್ಕೆ ಜು.10ರಂದು ಅಧಿಕೃತ ಚಾಲನೆ





ಬೆಂಗಳೂರು: ಕಾಂಗ್ರೆಸ್ ಸರ್ಕಾರ ಜನತೆಗೆ ನೀಡಿರುವ 5 ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆ ಈಗಾಗಲೇ ಜಾರಿಗೆ ಬಂದಿದ್ದು, ಅನ್ನ ಭಾಗ್ಯ ಯೋಜನೆಗೆ ಇದೇ ಜುಲೈ 10ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಜುಲೈ 10ರಂದು ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ಅನ್ನ ಭಾಗ್ಯ ಯೋಜನೆಗೆ ಚಾಲನೆ ನೀಡಿದ ನಂತರ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅನ್ನ ಭಾಗ್ಯ ಫಲಾನುಭವಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿ ನೀಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ ಕೇಂದ್ರ ಸರ್ಕಾರದಿಂದ ಅಕ್ಕಿ ದೊರೆಯದ ಕಾರಣ ಈಗಾಗಲೇ ವಿತರಿಸುತ್ತಿರುವ 5 ಕೆಜಿ ಜೊತೆಗೆ ತಾತ್ಕಾಲಿಕವಾಗಿ ಕೆಜಿಗೆ 34 ರೂಪಾಯಿಗಳಂತೆ 5ಕೆಜಿಗೆ 170 ರೂಗಳಂತೆ ಪ್ರತಿ ವ್ಯಕ್ತಿಯ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು ವರ್ಗಾಯಿಸುವುದಾಗಿ ಸರ್ಕಾರ ಪ್ರಕಟಿಸಿದೆ. ಜುಲೈ 10ರಂದು ಅಕ್ಕಿ ಪೂರೈಕೆ ಜೊತೆಗೆ ಹಣವನ್ನು ಫಲಾನುಭವಿಗಳ ಖಾತೆಗೆ ಹಾಕುವ ಪ್ರಕ್ರಿಯೆ ಸರ್ಕಾರದಿಂದ ಆರಂಭವಾಗಲಿದೆ.

ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಕಡ್ಡಾಯ: ಈ ಹಣ ನೇರವಾಗಿ ಕುಟುಂಬದ ಯಜಮಾನನ ಖಾತೆಗೆ ಜಮೆಯಾಗುತ್ತದೆ. ಹಣಕ್ಕೆ ಆಧಾರ್ ಲಿಂಕ್ ಕಡ್ಡಾಯವಾಗಿರುತ್ತದೆ. ಅನ್ನಭಾಗ್ಯದ ಹಣ ನಿಮ್ಮ ಬ್ಯಾಂಕ್ ಖಾತೆಗೆ ಜಮೆ ಆಗಬೇಕಾದರೆ ಬ್ಯಾಂಕ್ ಖಾತೆ ● 9ನೇ ಪುಟಕ್ಕೆ

ಸಂಚಾರ ನಿಯಮ ಉಲ್ಲಂಘನೆ

ಶೇ.50 ದಂಡ ಪಾವತಿಸಲು ಸೆ.9ರವರೆಗೆ ಮತ್ತೆ ಅವಕಾಶ



ಮೈಸೂರು, ಜು.5(ಆರ್‌ಕೆ)– ಸಂಚಾರ ನಿಯಮ ಉಲ್ಲಂಘನೆ ಸಂಬಂಧ ಇ–ಚಲನ್‌ನಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಶೇ.50ರಷ್ಟು ದಂಡ ಪಾವತಿಸಲು ಸರ್ಕಾರ ಮತ್ತೊಂದು ಅವಕಾಶ ಕಲ್ಪಿಸಿದೆ.

ಈ ಸಂಬಂಧ ಇಂದು ಆದೇಶ ಹೊರಡಿಸಿರುವ ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ವಿ.ಎಸ್.ಪುಷ್ಪ, ಪೊಲೀಸ್ ಇಲಾಖೆಯ ಸಂಚಾರ ವಿಭಾಗದ ಇ–ಚಲನ್‌ನಲ್ಲಿ 2023ರ ಫೆಬ್ರವರಿ 11ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ ಶೇ.50ರ ರಿಯಾಯಿತಿಯೊಂದಿಗೆ ಬಾಕಿ ಇರುವ ದಂಡ ಪಾವತಿಸಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಈ ರಿಯಾಯಿತಿಯು 2023ರ ಸೆ.9ರವರೆಗೆ ಮಾತ್ರ ಅನ್ವಯವಾಗುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಸಾರ್ವಜನಿಕರು ಈ ಅವಕಾಶ ಬಳಸಿಕೊಂಡು ಬಾಕಿ ಇರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಇತ್ಯರ್ಥಗೊಳಿಸಿಕೊಳ್ಳುವಂತೆ ತಿಳಿಸಲಾಗಿದೆ. ಸಂಚಾರ ನಿಯಮ ಉಲ್ಲಂಘನೆ ಮಾಡಿದ ವಾಹನ ಮಾಲೀಕರಿಗೆ ಪ್ರಕರಣ ಇತ್ಯರ್ಥಗೊಳಿಸಲು ಇದೀಗ ಮತ್ತೊಂದು ಅವಕಾಶ ಸಿಕ್ಕಿದಂತಾಗಿದ್ದು, ಈ ಹಿಂದೆಯೂ ಸರ್ಕಾರ ಶೇ.50ರಷ್ಟು ರಿಯಾಯಿತಿ ನೀಡಿದಾಗ ವಾಹನಗಳ ಮಾಲೀಕರು ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಮುಗಿಬಿದ್ದು ದಂಡ ಪಾವತಿಸಿ ಬಾಕಿ ಇ–ಚಲನ್ ● 9ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ವಾಹನಗಳ ಸ್ಪೀಡ್‌ಗೆ ಬ್ರೇಕ್

● ಅಪಘಾತ ತಡೆಗೆ ಕಟ್ಟುನಿಟ್ಟಿನ ಕ್ರಮ ● ಅತೀ ವೇಗದ ವಾಹನ ಚಾಲಕರ ವಿರುದ್ಧ ಪ್ರಕರಣ ದಾಖಲು



ಮೈಸೂರು, ಜು. 5– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಅಪಘಾತಗಳನ್ನು ನಿಯಂತ್ರಿಸಲು ಮುಂದಾಗಿರುವ ಪೊಲೀಸ್ ಇಲಾಖೆ ಈ ರಸ್ತೆಯಲ್ಲಿ ವಿವಿಧ ವಾಹನಗಳಿಗೆ ವೇಗದ ಮಿತಿ ನಿಗದಿಗೊಳಿಸಿದ್ದಲ್ಲದೇ, ಅತೀ ವೇಗವಾಗಿ ಚಲಿಸುವ ವಾಹನ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ.

ಎಕ್ಸ್‌ಪ್ರೆಸ್‌ವೇನಲ್ಲಿ ಟ್ರಕ್‌ಗಳಿಗೆ 80 ಕಿಲೋಮೀಟರ್, ಕಾರು ಮತ್ತು ಬಸ್‌ಗೆ 100 ಕಿಲೋಮೀಟರ್ ಹಾಗೂ ಓವರ್ ಟೇಕ್ ಮಾಡುವಾಗ 120 ಕಿಲೋಮೀಟರ್ ವೇಗವನ್ನು ಮಿತಿಗೊಳಿಸಿ, ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ಅಲ್ಲದೇ, ರಾಮನಗರ ಜಿಲ್ಲಾ ಪೊಲೀಸರು ಎಕ್ಸ್‌ಪ್ರೆಸ್‌ವೇನಲ್ಲಿ ಗಸ್ತು ವಾಹನದೊಂದಿಗೆ ಸಂಚರಿಸುತ್ತಾ ಅತೀ ವೇಗವಾಗಿ ಚಲಿಸುವ ವಾಹನಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸುತ್ತಿದ್ದಾರೆ. ಈ ಸಂಬಂಧ ನಿನ್ನೆ (ಮಂಗಳವಾರ) ಟ್ವೀಟ್ ಮಾಡಿರುವ ಎಡಿಜಿಪಿ ಅಲೋಕ್‌ಕುಮಾರ್ ಅವರು, ಸ್ಪೀಡ್ ರೀಡರ್ ಗನ್ ಮೂಲಕ ಚಿತ್ರಿಸಲಾದ ವೇಗದ ಮಿತಿ ಉಲ್ಲಂಘಿಸಿ ಚಲಿಸುತ್ತಿರುವ ವಾಹನ ಚಿತ್ರವನ್ನು ಪೋಸ್ಟ್ ಮಾಡಿದ್ದು, ಎಕ್ಸ್‌ಪ್ರೆಸ್‌ವೇನಲ್ಲಿ ಅಪಘಾತಗಳನ್ನು ● 9ನೇ ಪುಟಕ್ಕೆ

ಪೊಲೀಸರ ವೇಗದ ಮಿತಿ ಕ್ರಮಕ್ಕೆ ವಾಹನ ಚಾಲಕರ ಆಕ್ಷೇಪ

ಮೈಸೂರು, ಜು. 5– ಅಪಘಾತಗಳ ತಡೆಗಾಗಿ ಎಕ್ಸ್‌ಪ್ರೆಸ್‌ವೇನಲ್ಲಿ ವೇಗದ ಮಿತಿ ನಿಗದಿ ಹಾಗೂ ಅತೀ ವೇಗದ ಚಾಲನೆ ಮಾಡುವ ಚಾಲಕರ ವಿರುದ್ಧ ಪ್ರಕರಣ ದಾಖಲಿಸುತ್ತಿರುವ ಬಗ್ಗೆ ಎಡಿಜಿಪಿ ಅಲೋಕ್ ಕುಮಾರ್ ಅವರು ಮಾಡಿರುವ ಟ್ವೀಟ್‌ಗೆ ಅನೇಕ ಸಾರ್ವಜನಿಕರು ರೀಟ್ವೀಟ್ ಮಾಡಿ ಪೊಲೀಸರ ಕ್ರಮಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಶ್ಯಾಂಸುಂದರ್ ಎಂಬುವರು ಮಾಡಿರುವ ರೀಟ್ವೀಟ್‌ನಲ್ಲಿ ಎಕ್ಸ್‌ಪ್ರೆಸ್‌ವೇನಲ್ಲಿ ಬ್ಯಾರಿಕೇಡ್ ಅಳವಡಿಸಿ ಸಂಚಾರಕ್ಕೆ ನಿರ್ಬಂಧ ವಿಧಿಸಿರುವುದು ಅಪಾಯಕಾರಿ ಎಂದರೆ, ಪ್ರೀತಂ ರಾವ್ ಎಂಬುವರು "ಪ್ಲೀಸ್ ರೀನೇಮ್ ಇಟ್ ಯ್ಯಾಸ್ ಸ್ಲೋವೇ" (ದಯವಿಟ್ಟು ಈ ರಸ್ತೆಗೆ ಸ್ಲೋವೇ ಎಂದು ಮರುನಾಮಕರಣ ಮಾಡಿ) ಎಂದು ಕುಟುಕಿದ್ದಾರೆ. ವಿಂಗ್ ಮ್ಯಾನ್ ಎಂಬುವರು "ನೈಸ್ ಇಂಡಿಯಾ ಈಸ್ ದಿ ಓನ್ಲಿ ● 9ನೇ ಪುಟಕ್ಕೆ

ಕೊಡಗಲ್ಲಿ ಮುಂದುವರೆದ ಗಾಳಿ, ಮಳೆ ಆರ್ಭಟ

● ಮರ ಬಿದ್ದು ಬಸ್ ಜಖಂ, ಬೈಕ್ ಸವಾರ ಪಾರು ● ತ್ರಿವೇಣಿ ಸಂಗಮ ಜಲಾವೃತ; ಭಕ್ತರ ಪ್ರವೇಶಕ್ಕೆ ನಿರ್ಬಂಧ



'ಆರೆಂಜ್' ಅಲರ್ಟ್

ವಿವಿಧ ಭಾಗಗಳಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಜು.6ರ ಬೆಳಗ್ಗೆ 8.30ರವರೆಗೆ ಪ್ರಸಕ್ತ ಮುಂಗಾರಿನಲ್ಲಿ 2ನೇ ಬಾರಿಗೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಈ ಅವಧಿಯಲ್ಲಿ 115.6 ಮಿ.ಮೀಟರ್‌ನಿಂದ 204.4 ಮಿ.ಮೀಟರ್ ಮಳೆಯಾಗುವ ಸಾಧ್ಯತೆಗಳಿವೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.



ಮಡಿಕೇರಿ, ಜು.5–ಕೊಡಗು ಜಿಲ್ಲೆಯಲ್ಲಿ ಗಾಳಿ ಸಹಿತ ಮಳೆ ಆರ್ಭಟ ಮುಂದುವರೆದಿದ್ದು, ಕೆಲವು ಕಡೆಗಳಲ್ಲಿ ಮರ ಬಿದ್ದು ಹಾನಿ ಸಂಭವಿಸಿರುವ ಬಗ್ಗೆ ವರದಿಯಾಗಿದೆ.

ಬುಧವಾರ ಬೆಳಗ್ಗೆ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ರಸ್ತೆಯ ಕಾಯಿಮಾನಿ ಬಳಿ ಚಲಿಸುತ್ತಿದ್ದ ಖಾಸಗಿ ಬಸ್ ಮೇಲೆ ಸಿಲ್ವರ್ ಮರ ಉರುಳಿ ಬಿದ್ದು, ಜಖಂ ಆಗಿದೆ. ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಮಡಿಕೇರಿ–ಸೋಮವಾರಪೇಟೆ ರಸ್ತೆಯ ಕುಂಬೂರು ಬಳಿ ರಸ್ತೆಬದಿ ಮರ ಬಿದ್ದು, ಬೈಕ್ ಸವಾರ ಕೂದಲೆಳೆಯ ಅಂತರದಿಂದ ಪ್ರಾಣಾಪಾಯದಿಂದ ಪಾರಾದ ಘಟನೆಯೂ ನಡೆದಿದೆ. ಮರ ಬೀಳುತ್ತಿರುವುದನ್ನು ಅರಿತು ಬೈಕ್‌ನಿಂದ ಹಾರಿ ಸವಾರ ಅಪಾಯ ತಪ್ಪಿಸಿಕೊಂಡಿದ್ದು, ಮರದ ಅಡಿಗೆ ಸಿಲುಕಿ ಬೈಕ್ ಸಂಪೂರ್ಣ ನಜ್ಜುಗುಜ್ಜಾಗಿದೆ. ಇನ್ನು ಗ್ರಾಮೀಣ ಭಾಗಗಳಲ್ಲಿ ಮರಗಳು ಮುರಿದು ಬಿದ್ದು ವಿದ್ಯುತ್ ಕಂಬ ಮತ್ತು ತಂತಿಗಳಿಗೆ ಹಾನಿಯಾಗಿರುವ ಬಗ್ಗೆಯೂ ವರದಿಯಾಗಿದೆ. ಚೆಸ್ಕಾಂನಿಂದ ದುರಸ್ತಿ ಕಾರ್ಯವೂ ಭರದಿಂದ ಸಾಗಿದ್ದು, ವಿದ್ಯುತ್ ಮರು ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ.

'ತ್ರಿವೇಣಿ ಸಂಗಮ' ಭರ್ತಿ: ಬ್ರಹ್ಮಗಿರಿ ಬೆಟ್ಟಸಾಲು, ತಲಕಾವೇರಿ, ಕೋರಂಗಾಲ, ಚೇರಂಗಾಲ, ಕೋಳಿಕಾಡು ಮತ್ತಿತರ ಕಡೆಗಳಲ್ಲಿ ಮಂಗಳವಾರ ರಾತ್ರಿಯಿಂದ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಬುಧವಾರ ಬೆಳಗಿನ ಜಾವ ಭಾಗಮಂಡಲದ ತ್ರಿವೇಣಿ ಸಂಗಮ ಭರ್ತಿಯಾಗಿದೆ.

ಸಂಗಮದ ನಾಗನಕಟ್ಟೆವರೆಗೆ ನೀರು ತುಂಬಿದ್ದು, ಭಕ್ತರ ಪ್ರವೇಶ ನಿಷೇಧಿಸಲಾಗಿದೆ. ಸಂಗಮಕ್ಕೆ ತೆರಳುವ ಮೆಟ್ಟಿಲಿನ ಬಳಿ ಭಾಗಮಂಡಲ ಪೊಲೀಸರು ಬ್ಯಾರಿಕೇಡ್ ಅಳವಡಿಸಿದ್ದಾರೆ. ಕಾವೇರಿ ನದಿ ಪಾತ್ರದ ಗ್ರಾಮಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಕಾರಣ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಏರಿಕೆಯಾಗಿದೆ. ಇದೇ ಜೂನ್ ತಿಂಗಳ ಅಂತ್ಯದವರೆಗೂ ತ್ರಿವೇಣಿ ಸಂಗಮದಲ್ಲಿ ನೀರಿನ ಪ್ರಮಾಣ ತೀರಾ ಕ್ಷೀಣಿಸಿತ್ತು. ಪರಿಣಾಮವಾಗಿ ಭಕ್ತರು ಪುಣ್ಯ ಸ್ನಾನಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು.

ಮಳೆ ವಿವರ: ಬುಧವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಮಡಿಕೇರಿ ತಾಲೂಕಿನ ಭಾಗಮಂಡಲಕ್ಕೆ ದಾಖಲೆಯ 78.2 ಮಿ.ಮೀ ಮಳೆಯಾಗಿದ್ದರೆ, ವಿರಾಜಪೇಟೆ ತಾಲೂಕಿನ ಶ್ರೀಮಂಗಲ ವ್ಯಾಪ್ತಿಯಲ್ಲಿ 53.2 ಹಾಗೂ ಸೋಮವಾರಪೇಟೆ ವ್ಯಾಪ್ತಿಯ ಶಾಂತಳ್ಳಿ ವ್ಯಾಪ್ತಿಯಲ್ಲಿ 66 ಮಿ.ಮೀ ಮಳೆ ಸುರಿದಿದೆ. ಜಿಲ್ಲೆಯಲ್ಲಿ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ 36.43 ಮಿ.ಮೀ. ಮಳೆಯಾಗಿದ್ದರೆ, ಕಳೆದ ವರ್ಷ ಇದೇ ದಿನ 65.83 ಮಿ.ಮೀ. ಮಳೆಯಾಗಿತ್ತು. ಜನವರಿಯಿಂದ ಇಲ್ಲಿಯವರೆಗಿನ ಮಳೆ 393.32 ಮಿ.ಮೀ ಸುರಿದಿದ್ದರೆ, ಕಳೆದ ವರ್ಷ ಇದೇ ಅವಧಿಯಲ್ಲಿ 956.83 ಮಿ.ಮೀ ಮಳೆಯಾಗಿತ್ತು.

ಗ್ರಾಪಂ ಪಿಡಿಓ ಹುದ್ದೆ ಶೀಘ್ರವೇ ಭರ್ತಿ



ಬೆಂಗಳೂರು, ಜು.5(ಕೆಎಂಶಿ)–ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಲಿ ಇರುವ ಪಂಚಾಯಿತಿ ಅಭಿವೃದ್ಧಿ (ಪಿಡಿಓ) ಅಧಿಕಾರಿಗಳ ನೇಮಕಾತಿಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಬಸನಗೌಡ ದದ್ದಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗ್ರಾಮ ಪಂಚಾಯಿತಿಗಳಿಗೆ 6021 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 5361 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಪ್ರಸ್ತುತ 660 ಹುದ್ದೆಗಳು ಖಾಲಿ ಇವೆ. ನೇರ ನೇಮಕಾತಿ ಕೋಟಾ ಅಡಿಯಲ್ಲಿ 385 ಹುದ್ದೆಗಳು ಖಾಲಿ ಇದ್ದು, ಈ ಪೈಕಿ 150 ಹುದ್ದೆಗಳ ನೇಮಕಾತಿ ಪ್ರಗತಿಯಲ್ಲಿದೆ ಎಂದರು. ನೇರ ನೇಮಕಾತಿ ಅಡಿಯಲ್ಲಿ ಬರುವ ಎಲ್ಲಾ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಲಾಗುವುದು. ವಿಶೇಷವಾಗಿ 371 ಜೆ ವ್ಯಾಪ್ತಿಗೆ ಒಳಪಡುವ ಹೈದರಾಬಾದ್–ಕರ್ನಾಟಕಕ್ಕೆ ಅಗತ್ಯವಿರುವ ಹುದ್ದೆಗಳನ್ನು ನೇಮಕ ● 9ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ ಮೆಚ್ಚಿಸಲು ಕಾಂಗ್ರೆಸ್ ವಕ್ತಾರರಿಂದ ಹೆಚ್‌ಡಿಕೆ ಮೇಲೆ ವಾಗ್ದಾಳಿ



ಜೆಡಿಎಸ್ ವಕ್ತಾರ ರವಿ ಚಂದ್ರೇಗೌಡ ಆರೋಪ

ಮೈಸೂರು, ಜು.5(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೆಚ್ಚಿಸಲು ಕಾಂಗ್ರೆಸ್ ವಕ್ತಾರರಾದ ನಾಗರಾಜ್ ಯಾದವ್ ಮತ್ತು ಆರ್.ಲಕ್ಷ್ಮಣ್ ಅವರು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಮೇಲೆ ವಾಗ್ದಾಳಿ ನಡೆಸುತ್ತಿದ್ದಾರೆ ಎಂದು ಜೆಡಿಎಸ್ ರಾಜ್ಯ ವಕ್ತಾರ ಎನ್.ಆರ್. ರವಿಚಂದ್ರೇಗೌಡ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧ ಲಘುವಾದ ಪದ ಬಳಸಿ ಸುದ್ದಿಗೋಷ್ಠಿ ಮಾಡುತ್ತಿರುವ ಕಾಂಗ್ರೆಸ್ ರಾಜ್ಯ ವಕ್ತಾರರಾದ ನಾಗರಾಜ ಯಾದವ್ ಹಾಗೂ ಲಕ್ಷ್ಮಣ್ ಅವರು ತಮ್ಮ ಸರ್ಕಾರದ ತಪ್ಪುಗಳ ಬಗ್ಗೆಯೂ ಮಾತನಾಡಲಿ. ಕುಮಾರಸ್ವಾಮಿ ಅವರು ವೈಎಸ್‌ಟಿ ಟ್ಯಾಕ್ಸ್ ಎಂದು ಹೇಳಿದ್ದು, ಯತೀಂದ್ರ ಸಿದ್ದರಾಮಯ್ಯ ಅವರ ಬಗ್ಗೆ ಯಾವ ಮಾತನ್ನು ಆಡಿಲ್ಲ. ಯತೀಂದ್ರ ಅವರ ಹೆಸರನ್ನು ತಂದು ನೀವು ಮಾರ್ಕೆಟಿಂಗ್ ಮಾಡುತ್ತಿದ್ದೀರಾ? ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಅವರ ಸರ್ಕಾರದ ಅವಧಿಯಲ್ಲಿ ಅವರ ವಿರುದ್ಧ ಯಾವುದಾರೂ ಒಂದು ವರ್ಗಾವಣೆಯ ಆರೋಪವಿದ್ದರೆ ಸಾಬೀತುಪಡಿಸಿ ಎಂದು ಅವರು ಈಗಾಗಲೇ ಸವಾಲಾಕಿದ್ದಾರೆ. ಆದರೆ, ಲಕ್ಷ್ಮಣ್ ಅವರು ಮಾಜಿ ಮುಖ್ಯಮಂತ್ರಿಗಳಿಗೆ ಸವಾಲು ಹಾಕುವ ಮುಂಚೆ ಘನತೆಯಿಂದ ಸವಾಲು ಹಾಕಿ. ಚುನಾವಣೆಯಲ್ಲಿ ನೀಡಿದ ಗ್ಯಾರಂಟಿಗಳನ್ನು ಸಮರ್ಪಕವಾಗಿ ಈಡೇರಿಸದೆ, ಆಪ್ತರಾದ ಕೆಂಪಯ್ಯನವರ ಮೂಲಕ ಸಭೆ ನಡೆಸುತ್ತಿರುವುದರ ಉದ್ದೇಶವೇನು. ಆರೋಪಗಳಿಗೆ ದಾಖಲೆ ಕೇಳುವ ನೀವು ಶೇಕಡ 40 ಭ್ರಷ್ಟಾಚಾರ ಆರೋಪಗಳಿಗೆ ಯಾವ ದಾಖಲೆ ನೀಡಿದ್ದೀರಾ? ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ನಗರ ಘಟಕದ ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ ಎನ್.ಆರ್.ಕ್ಷೇತ್ರದ ಅಧ್ಯಕ್ಷ ಎಂ.ಎನ್.ರಾಮು ಮತ್ತು ಬ್ಲಾಕ್ ಅಧ್ಯಕ್ಷ ರಿಜ್ವಾನ್ ಉಪಸ್ಥಿತರಿದ್ದರು.

> “ಬಿಜೆಪಿಯು ವಿಪಕ್ಷ ನಾಯಕನನ್ನು ಆಯ್ಕೆ ಮಾಡದೆ, ರಾಜ್ಯದ ರಾಜಕೀಯ ಇತಿಹಾಸಕ್ಕೆ ಕಪ್ಪು ಚುಕ್ಕೆ ತಂದಿದ್ದು, ಸಂವಿಧಾನಕ್ಕೆ ಅಪಚಾರ ಮಾಡಿದೆ. ಈ ಎರಡು ರಾಷ್ಟ್ರೀಯ ಪಕ್ಷಗಳು ಅಧಿಕಾರಕ್ಕಾಗಿ ರಾಜ್ಯವನ್ನು ದೋಚುತ್ತಿವೆ. –ರವಿಚಂದ್ರೇಗೌಡ

ಮೈಸೂರು ಜಿಲ್ಲೆಯ 9 ಗ್ರಾಪಂ ಸದಸ್ಯ ಸ್ಥಾನಗಳಿಗೆ ಜು.23ರಂದು ಉಪ ಚುನಾವಣೆ

ಜು.15 ನಾಮಪತ್ರ ಹಿಂಪಡೆಯಲು ಕಡೇ ದಿನ. ಜು.26 ಫಲಿತಾಂಶ

ಮೈಸೂರು,ಜು.5(ಆರ್‌ಕೆ)–ಮೈಸೂರು ಜಿಲ್ಲೆಯ 9 ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಸದಸ್ಯ ಸ್ಥಾನಗಳಿಗೆ ಜು.23ರಂದು ಉಪ ಚುನಾವಣೆ ನಡೆಯಲಿದೆ.



ಈ ಕುರಿತು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅಧಿಸೂಚನೆ ಹೊರಡಿಸಿದ್ದು, ಇದರೊಂದಿಗೆ ವೇಳಾಪಟ್ಟಿ ಪ್ರಕಟಿಸಿದ್ದಾರೆ. ನಂಜನಗೂಡು ತಾಲೂಕಿನ ದೇವನೂರು ಗಾಪಂನ ಚಿಕ್ಕಕವಲಂದೆ, ದೇವರಾಯಶೆಟ್ಟಿಪುರ ಗ್ರಾಪಂನ ಹೊಸವೀಡು, ಟಿ.ನರಸೀಪುರ ತಾಲೂಕಿನ ಹೆಮ್ಮಿಗೆ ಗ್ರಾಪಂನ ಅಕ್ಕೂರು, ಹುಣಸೂರು ತಾಲೂಕಿನ ಜಾಬಗೆರೆ ಗ್ರಾಪಂನ ಜಾಬಗೆರೆ, ಹುಣಸೂರು ತಾಲೂಕಿನ ತಟ್ಟೆಕೆರೆ ಗ್ರಾಪಂನ ನಿಲುವಾಗಿಲು, ಕಡೇಮನುಗನಹಳ್ಳಿ ಗ್ರಾಪಂನ ಹೆಬ್ಬಾಳು, ಕೆ.ಆರ್.ನಗರ ತಾಲೂಕಿನ ಹಂಪಾಪುರ ಗ್ರಾಪಂನ ಹಂಪಾಪುರ, ಹೆಚ್.ಡಿ. ಕೋಟೆ ತಾಲೂಕಿನ ಮಾದಾಪುರ ಗ್ರಾಪಂನ ಮಾದಾಪುರ ಕ್ಷೇತ್ರ ಹಾಗೂ ಎನ್.ಬೇಗೂರು ಗ್ರಾಪಂನ ಬೇಗೂರು ಕ್ಷೇತ್ರಗಳಿಗೆ ಮರು ಚುನಾವಣೆ ನಡೆಸಲು ವೇಳಾಪಟ್ಟಿ ಪ್ರಕಟಿಸಲಾಗಿದೆ.



ಡಾ.ರಾಜೇಂದ್ರ

ಇಂದಿನಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಜು.12 ನಾಮಪತ್ರ ಸಲ್ಲಿಸಲು ಕಡೇ ದಿನ. ಜು.13 ನಾಮ ಪತ್ರ ಪರಿಶೀಲನೆ, ಜು.15ರಂದು ಹಿಂತೆಗೆದುಕೊಳ್ಳಲು ಕಡೇ ದಿನ. ಜು.23ರಂದು ಭಾನುವಾರ ಬೆಳಗ್ಗೆ 7ರಿಂದ ಸಂಜೆ 5ರವರೆಗೆ ಮತದಾನ ನಡೆಯಲಿದೆ. ಜುಲೈ 26ರಂದು ಬೆಳಗ್ಗೆ 8 ಗಂಟೆಯಿಂದ ಮತ ಎಣಿಕೆ ನಡೆಯಲಿದ್ದು, ಫಲಿತಾಂಶ ಪ್ರಕಟವಾಗುವುದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಪ್ರತೀ ಗ್ರಾಮ ಪಂಚಾಯ್ತಿಗೆ ಓರ್ವ ಚುನಾವಣಾಧಿಕಾರಿ ಹಾಗೂ ಓರ್ವ ಸಹಾಯಕ ಚುನಾವಣಾಧಿಕಾರಿಯನ್ನು ನೇಮಿಸಲಾಗುವುದು. ಜಿಲ್ಲಾಧಿಕಾರಿ ಕಚೇರಿ ಕಂಟ್ರೋಲ್ ರೂಂ. (1077) ಜೊತೆಗೆ ಉಪವಿಭಾಗಾಧಿಕಾರಿ ಕಚೇರಿ (0821–2422100), ಹುಣಸೂರು ಉಪವಿಭಾಗಾಧಿಕಾರಿ ಕಚೇರಿ (08222–252073), ನಂಜನಗೂಡು ತಾಲೂಕು ಕಚೇರಿ (08221–223108), ತಿ.ನರಸೀಪುರ ತಾಲೂಕು ಕಚೇರಿ (08227–260210), ಕೆ.ಆರ್.ನಗರ ತಾಲೂಕು ಕಚೇರಿ (08223–262234), ಹುಣಸೂರು ತಾಲೂಕು ಕಚೇರಿ, ಹೆಚ್.ಡಿ.ಕೋಟೆ ತಾಲೂಕು ಕಚೇರಿ (08228–255600) ಗಳನ್ನು ಸಂಪರ್ಕಿಸಿ ಚುನಾವಣೆ ಸಂಬಂಧ ದೂರುಗಳನ್ನು ಸಲ್ಲಿಸಬಹುದು. ಜುಲೈ 6ರಿಂದ 26ರವರೆಗೆ ಚುನಾವಣೆ ನಡೆಯುವ ಗ್ರಾಮ ಪಂಚಾಯ್ತಿ ವ್ಯಾಪ್ತಿಗಳಲ್ಲಿ ನೀತಿಸಂಹಿತೆ ಜಾರಿಯಲ್ಲಿರುತ್ತದೆ. ಮತದಾನ ಮುಕ್ತಾಯಗೊಳ್ಳುವ 48 ಗಂಟೆ ಮೊದಲು ವ್ಯಾಪ್ತಿಯ ಎಲ್ಲಾ ಮದ್ಯದಂಗಡಿಗಳನ್ನು ಬಂದ್ ಮಾಡಬೇಕು. ಈ ಚುನಾವಣೆಯಲ್ಲಿ ನೋಟಾ ಮತ ಚಲಾಯಿಸಲು ಅವಕಾಶವಿರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ಭಾಷೆ ಗ್ರಂಥಗಳ ಆಯ್ಕೆಗೆ ಅರ್ಜಿ ಆಹ್ವಾನ

ಮೈಸೂರು,ಜು.5–2023ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ದಿನಾಂಕ ಜ.1ರಿಂದ ಜೂ.30ರವರೆಗೆ ಪ್ರಕಟಣೆಯಾದ ಸಾಹಿತ್ಯ, ಕಲೆ, ವಿಜ್ಞಾನ, ಸ್ಪರ್ಧಾತ್ಮಕ, ಪಠ್ಯ, ಸಾಂದರ್ಭಿಕ, ಮಕ್ಕಳ ಸಾಹಿತ್ಯ, ವೃತ್ತಿ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆದಾಯ ಉತ್ಪಾದನಾ ಯೋಜನೆ ಹಾಗೂ ಇತ್ಯಾದಿ ವಿಷಯಗಳ ಕನ್ನಡ, ಆಂಗ್ಲ ಹಾಗೂ ಇತರೆ ಭಾರತೀಯ ಭಾಷೆಯ ಗ್ರಂಥಗಳ ಆಯ್ಕೆಗೆ ಲೇಖಕ, ಪ್ರಕಾಶಕ ಹಾಗೂ ಪ್ರಕಟ ಸಂಸ್ಥೆಗಳಿಂದ ಪುಸ್ತಕಗಳನ್ನು ಆಹ್ವಾನಿಸಲಾಗಿದೆ.

ಬೆಂಗಳೂರಿನ ಕಬ್ಬನ್ ಉದ್ಯಾನವನದಲ್ಲಿನ ರಾಜ್ಯ ಕೇಂದ್ರ ಗ್ರಂಥಾಲಯದ ಗ್ರಂಥಸ್ವಾಮ್ಯ ವಿಭಾಗದ ನಿರ್ದೇಶಕರ ಕಚೇರಿಗೆ ಕಾಪಿರೈಟ್ ಮಾಡಿಸಿರುವ ಪುಸ್ತಕದ ಪ್ರತಿಯನ್ನು ನೋಂದಣಿ ಪತ್ರದ ಪ್ರತಿಯೊಂದಿಗೆ ಅರ್ಜಿಯೊಂದಿಗೆ ಜು.31ರ ಸಂಜೆ 5 ಗಂಟೆಯೊಳಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೈಸೂರಿನ ನಗರ ಕೇಂದ್ರ ಗ್ರಂಥಾಲಯ ಕಚೇರಿಯನ್ನು ಸಂಪರ್ಕಿಸಿ.

ಆರೇ ತಿಂಗಳಲ್ಲಿ ಕೆಟ್ಟು ನಿಂತಿರುವ ರಿಂಗ್ ರಸ್ತೆಯ ಎಲ್‌ಇಡಿ ಬಲ್ಬ್‌ಗಳು



ಮೈಸೂರು, ಜು.5(ಜಿಎ)–ಸರಿಯಾಗಿ ನಿರ್ವಹಣೆ ಮಾಡದ ಕಾರಣ ಮೈಸೂರಿನ ಹೊರವರ್ತುಲ ರಸ್ತೆಗೆ ಅಳವಡಿಸಿರುವ 600ಕ್ಕೂ ಅಧಿಕ ಎಲ್‌ಇಡಿ ಬಲ್ಬ್‌ಗಳು ಹಾಳಾಗಿವೆ ಎಂದು ಮಳವಳ್ಳಿಯ ವಕೀಲ ವಿದ್ಯಾರ್ಥಿ ಪುಟ್ಟಸ್ವಾಮಿಗೌಡ ದೂರಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೋಗಾದಿ ಸಿಗ್ನಲ್‌ನಿಂದ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ವರೆಗೂ ಅಳವಡಿಸಿರುವ ಬಲ್ಬ್‌ಗಳಲ್ಲಿ ಈಗಾಗಲೇ 615 ದೀಪಗಳು ಹಾಳಾಗಿದ್ದು, ಟೆಂಡರ್ ಪಡೆದುಕೊಂಡಿರುವ ಸಂಸ್ಥೆ ಯಾವುದೇ ನಿರ್ವಹಣೆ ಮಾಡದ ಕಾರಣದಿಂದ ಬಲ್ಬ್‌ಗಳು ಹಾಳಾಗಿವೆ ಎಂದು ತಿಳಿಸಿದರು.

ಸಂಸದ ಪ್ರತಾಪ್‌ಸಿಂಹ ಅವರು ಹೊರವರ್ತುಲ ರಸ್ತೆಗೆ ಬೀದಿ ದೀಪ ಅಳವಡಿಸಲು ಬಹಳ ಮುತುವರ್ಜಿ ವಹಿಸಿದ್ದರು. ಆದರೆ, ಈಗ ಅಳವಡಿಸಿದ 6 ತಿಂಗಳಿನಲ್ಲಿ ಬಲ್ಬ್‌ಗಳು ಕೆಟ್ಟು ನಿಂತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ, ಬಲ್ಬ್‌ಗಳನ್ನು ಮರು ಅಳವಡಿಸಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ನಂದಕುಮಾರ್, ಸಂತೋಷ್ ಉಪಸ್ಥಿತರಿದ್ದರು.

ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ; ವಧು–ವರರ ಸಮಾವೇಶ ಜು.18ಕ್ಕೆ



ಮೈಸೂರು, ಜು.5(ಜಿಎ)–ಮಹಾಸಂಸ್ಥಾನ ಬೋವಿ ಗುರುಪೀಠದ ಶ್ರೀ ನಿರಂಜನ ಶ್ರೀ ಜಗದ್ಗುರು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಗಳ ದೀಕ್ಷಾ ರಜತ ಮಹೋತ್ಸವದ ಪ್ರಯುಕ್ತ ರಾಜ್ಯಮಟ್ಟದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ, ವಧು–ವರರ ಸಮಾವೇಶವನ್ನು ಚಿತ್ರದುರ್ಗದ ಗುರುಪೀಠದಲ್ಲಿ ಜು.18ರಂದು ಏರ್ಪಡಿಸಲಾಗಿದೆ ಎಂದು ಶ್ರೀ ಶಿವಯೋಗಿ ಸಿದ್ದ ರಾಮೇಶ್ವರ ಬೋವಿ ಹಿತರಕ್ಷಣಾ ಸಮಿತಿ ಮೈಸೂರು ಜಿಲ್ಲಾಧ್ಯಕ್ಷ ಜಿ.ನಾಗರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90 ಅಂಕ ಪಡೆದಿರುವ ಭೋವಿ ಸಮುದಾಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ವಿದ್ಯಾರ್ಥಿಗಳು ಅಂಕಪಟ್ಟಿ, ಜಾತಿಪ್ರಮಾಣ ಪತ್ರ, ಎರಡು ಫೋಟೋ ಮತ್ತು ತಮ್ಮ ಸ್ವವಿವರವನ್ನು ಅರ್ಜಿಯೊಂದಿಗೆ ಲಗತ್ತಿಸಿ, ಜು.10ರೊಳಗೆ ಶ್ರೀ ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ ಬೋವಿ ಗುರುಪೀಠದ ಶ್ರೀ ಇಮ್ಮಡಿ ಗಿರಿನಗರ, ದಾವಣಗೆರೆ ಮುಖ್ಯ ರಸ್ತೆ ಎಸ್–ಎಚ್–4 ಚಿತ್ರದುರ್ಗ–577502 ವಿಳಾಸಕ್ಕೆ ಕಳುಹಿಸುವಂತೆ ತಿಳಿಸಿದರು.

ದೀಕ್ಷಾ ರಜತ ಮಹೋತ್ಸವದ ಪ್ರಯುಕ್ತ ವಧು–ವರರ ಸಮಾವೇಶವನ್ನು ಆಯೋಜಿಸಿದ್ದು, ಈ ಸಮಾವೇಶದಲ್ಲಿ ಸರ್ಕಾರಿ, ಅರೆಸರ್ಕಾರಿ, ವೈದ್ಯರು, ಕಾರ್ಯಪಾಲಕರು, ವಿದೇಶಿವಾಸಿ, ವ್ಯಾಪಾರಸ್ಥರು, ಉದ್ದಿಮೆದಾರರು ಮತ್ತು ಪದವೀಧರರು ಭಾಗವಹಿಸಲಿದ್ದಾರೆ. ಅಪೇಕ್ಷೆ ಹೊಂದಿರುವವರ ವಧು–ವರರನ್ನು ಹಾಗೂ ಪಾಲಕರನ್ನು ಸ್ಥಳದಲ್ಲಿಯೇ ಮಾತುಕತೆಗೆ ಅವಕಾಶ ಕಲ್ಪಿಸಲಿದ್ದು, ಭಾಗವಹಿಸುವವರು ಎರಡು ಫೋಟೋ ಮತ್ತು ಜಾತಕವನ್ನು ಕೊಂಡೊಯ್ಯಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಗೌರವಾಧ್ಯಕ್ಷ ಆರ್.ಮಾಲಕೊಂಡಯ್ಯ, ಪ್ರಧಾನ ಕಾರ್ಯದರ್ಶಿ ಪಿ.ಮಲ್ಲಯ್ಯ, ಖಜಾಂಚಿ ಪಿ.ಬಸವರಾಜು, ಸಂಘಟನಾಕಾರರರಾದ ಪಿ.ಮಹದೇವ್, ಎಲ್.ಗೋಪಾಲ್ ಉಪಸ್ಥಿತರಿದ್ದರು.

ಜು.10ಕ್ಕೆ ಶ್ರಮಿಕರ ಹಕ್ಕೊತ್ತಾಯ ಸಮಾವೇಶ; ಅನ್ನಭಾಗ್ಯ ಯೋಜನೆ ದಶಮಾನೋತ್ಸವ



ಮೈಸೂರು, ಜು.5(ಜಿಎ)–ಅನ್ನಭಾಗ್ಯ ಯೋಜನೆಯ ದಶಮಾನೋತ್ಸವ ಮತ್ತು ಶ್ರಮಿಕರ ಹಕ್ಕೊತ್ತಾಯ ಸಮಾವೇಶವನ್ನು ಜು.10ರಂದು ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಲೋಡಿಂಗ್ ಮತ್ತು ಅನ್ ಲೋಡಿಂಗ್ ಕಾರ್ಮಿಕರ ಒಕ್ಕೂಟದ ಮೈಸೂರು ಜಿಲ್ಲಾ ಕಾರ್ಯದರ್ಶಿ ಜಿ.ಮಹದೇವ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.10ಕ್ಕೆ ಅನ್ನಭಾಗ್ಯ ಯೋಜನೆ ಆರಂಭವಾಗಿ 10 ವರ್ಷ ಪೂರ್ಣಗೊಳ್ಳುತ್ತಿದ್ದು, ಈ ಹಿನ್ನೆಲೆಯಲ್ಲಿ ಅಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕರ್ನಾಟಕ ರಾಜ್ಯ ಲೋಡಿಂಗ್ ಮತ್ತು ಅನ್ ಲೋಡಿಂಗ್ ಕಾರ್ಮಿಕರ ಒಕ್ಕೂಟದ ವತಿಯಿಂದ ಅಂದು ಬೆಳಗ್ಗೆ 11 ಗಂಟೆಗೆ ಯೋಜನೆಯ ದಶಮಾನೋತ್ಸವ ಮತ್ತು ಶ್ರಮಿಕರ ಹಕ್ಕೊತ್ತಾಯ ಸಮಾವೇಶವನ್ನು ಏರ್ಪಡಿಸಿದೆ ಎಂದು ತಿಳಿಸಿದರು.

ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಮತ್ತು ಹಿರಿಯ ಕಾರ್ಮಿಕ ಮುಖಂಡ ಹಾಗೂ ಹಿರಿಯ ಹೈಕೋರ್ಟ್ ವಕೀಲರೂ ಆದ ಎಸ್.ಬಾಲನ್, ಪ್ರೊ ಮ್ಯಾಥ್ಯೂ, ಡಾ.ಹೆಚ್.ವಿ.ವಾಸು ಸೇರಿದಂತೆ ಪ್ರಮುಖ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಕರಿನಾಯಕ, ಉಪಾಧ್ಯಕ್ಷ ನರಸಿಂಹಮೂರ್ತಿ, ಚೆಲುವರಾಜು ಮತ್ತು ಮಹದೇವಸ್ವಾಮಿ ಉಪಸ್ಥಿತರಿದ್ದರು.

> “ಜು.10ರಂದು ನಡೆಯಲಿರುವ ಸಮಾವೇಶದಲ್ಲಿ ಲೋಡಿಂಗ್–ಅನ್ ಲೋಡಿಂಗ್ ಕಾರ್ಮಿಕರ ಹಕ್ಕೊತ್ತಾಯಗಳಾದ ಸೇವಾ ಭದ್ರತೆ, 8 ಗಂಟೆಯ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸಿರುವ ಆದೇಶ ಹಿಂಪಡೆಯಬೇಕು. 5 ಕೆಜಿ ಅಕ್ಕಿ ಬದಲಿಗೆ ಹಣ ನೀಡುವ ಬದಲು ಧಾನ್ಯ ವಿತರಿಸಬೇಕು. ನೇರ ಸಂಬಳದ ವ್ಯವಸ್ಥೆ ಮತ್ತು ಮಹಾರಾಷ್ಟ್ರದ ಮಾದರಿ ಹವಾಲಿ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪನೆ ಮಾಡಬೇಕೆಂದು ಒತ್ತಾಯಿಸುತ್ತೇವೆ. –ಜಿ.ಮಹದೇವ



ರಾಜ್ಯ ಸರ್ಕಾರದಿಂದ ಅತ್ಯುತ್ತಮ ಜಿಲ್ಲಾ ವೈದ್ಯಾಧಿಕಾರಿ ಪ್ರಶಸ್ತಿಗೆ ಪಾತ್ರರಾದ ಡಾ.ಪ್ರಸಾದ್ ಅವರನ್ನು ಬಸವ ಮಾರ್ಗದ ಸಂಸ್ಥಾಪಕ ಅಧ್ಯಕ್ಷ ಬಸವರಾಜು ಅಭಿನಂದಿಸಿದರು. ಈ ವೇಳೆ ಕೆ.ಎಸ್.ಪಂಚಾಕ್ಷರಿ, ಪ್ರಭಾತ್ ಇದ್ದರು.

ಶಿಕ್ಷಕರ ವಿರುದ್ಧ ಕ್ರಮಕ್ಕೆ ಪೊಲೀಸ್ ಆಯುಕ್ತರಿಗೆ ದೂರು

ಮೈಸೂರು, ಜು.5–ಶಾಲೆಗೆ ನಿರಂತರವಾಗಿ ಗೈರಾಗುತ್ತಿರುವ ಮತ್ತು ವಿದ್ಯಾರ್ಥಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿರುವ ಮೈಸೂರಿನ ರೈಲ್ವೇ ಕಾರ್ಯಾಗಾರ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರ ವಿರುದ್ಧ ಸೂಕ್ತ ಕ್ರಮ ವಹಿಸುವಂತೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

ಶಾಲೆಯ ಸಮಾಜ ವಿಜ್ಞಾನ ಶಿಕ್ಷಕ ಪಿ.ನಾಗಲಿಂಗಪ್ಪ ಕಳೆದ 3 ವರ್ಷಗಳಿಂದ ನಿರಂತರವಾಗಿ ಶಾಲಾ ಕರ್ತವ್ಯಕ್ಕೆ ಗೈರಾಗುತ್ತಿದ್ದು, ಇದರಿಂದ ಮಕ್ಕಳು ಸಮಾಜ ವಿಜ್ಞಾನ ಕಲಿಕೆಯಲ್ಲಿ ಹಿನ್ನಡೆ ಸಾಧಿಸಿದ್ದಾರೆ ಹೀಗೆ ಆದರೆ, ಮುಂದಿನ ಶಿಕ್ಷಣಕ್ಕೆ ತೊಂದರೆಯಾಗುತ್ತದೆ. ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಬೇರೆ ಶಿಕ್ಷಕರನ್ನು ನೇಮಿಸುವಂತೆ ಅಧಿಕಾರಿಗಳಲ್ಲಿ ಮನವಿ ಸಲ್ಲಿಸಿದ್ದು, ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಅನುಚಿತವಾಗಿ ವರ್ತಿಸುವ ಶಿಕ್ಷಕರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು,ಜು.5–ಮೈಸೂರಿನ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಜು.10ರಿಂದ 14 ದಿನಗಳ ಕಾಲ ಸಿದ್ಧ ಸಮಾಧಿ ಯೋಗ ಶಿಬಿರ ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ಜು.9ರಂದು ಸಂಜೆ 6.30ಕ್ಕೆ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 944845 8050, 8618762110 ಸಂಪರ್ಕಿಸಬಹುದು.



ಗುರುಪೂರ್ಣಿಮೆ ಪ್ರಯುಕ್ತ ಹಿರಿಯ ಯೋಗಾಚಾರ್ಯ ಡಾ.ಎ.ಆರ್.ಸೀತಾರಾಂ ಹಾಗೂ ಹಿರಿಯ ಸಂಗೀತ ವಿದುಷಿ ಡಾ.ಗೀತಾ ಸೀತಾರಾಂ ದಂಪತಿಯನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಹಿಮಾಲಯ ಪ್ರತಿಷ್ಠಾನ ಅಧ್ಯಕ್ಷ ಎನ್.ಅನಂತ, ಬ್ರಹ್ಮೀಭೂತ ಫೌಂಡೇಶನ್ ಅಧ್ಯಕ್ಷ ಎಂ.ವಿ.ನಾಗೇಂದ್ರಬಾಬು, ಮೈಸೂರು ಸ್ಟಾರ್ಸ್ ಅಧ್ಯಕ್ಷ ರೊ.ಸಂತೋಷ್‌ಗೌಡ, ಯೋಗಪಟು ಜಿ.ವೆಂಕಟೇಶ್ ಇದ್ದಾರೆ.

ಬಿಸಿಎಂ ಅಧಿಕಾರಿಯಾಗಿ ರಾಘವೇಂದ್ರ ಅಧಿಕಾರ ಸ್ವೀಕಾರ



ಮೈಸೂರು,ಜು.5–ಮೈಸೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಯಾಗಿ ರಾಘವೇಂದ್ರ ಅಧಿಕಾರ ವಹಿಸಿಕೊಂಡರು. ಇವರು ಬೀದರ್ ಜಿಲ್ಲೆಯ ಹುಮನಾಬಾದ್ ತಾಲೂಕಿನ ಬಿಳಕೆರೆ ಗ್ರಾಮದವರಾಗಿದ್ದು, ಈ ಹಿಂದೆ ಇವರು ಯಾದಗಿರಿ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.

ಸ್ಮೃತಿಗೆ ಪಿಹೆಚ್.ಡಿ ಪದವಿ



ಮೈಸೂರು, ಜು. 5– ಡಾ.ಎನ್.ಇಳಯರಾಜ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಎಂ.ಆರ್. ಸ್ಮೃತಿ ಅವರು ಜೀವ ರಸಾಯನಶಾಸ್ತ್ರ ವಿಷಯದಲ್ಲಿ ಆಂಗ್ಲ ಭಾಷೆಯಲ್ಲಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಯಶಸ್ವಿ ಶಸ್ತ್ರಚಿಕಿತ್ಸೆ; ವ್ಯಕ್ತಿಯ ಹೊಟ್ಟೆಯಲ್ಲಿತ್ತು 15 ಕೆಜಿ ಭಾರೀ ಗಡ್ಡೆ



ಮೈಸೂರು, ಜು.5(ಜಿಎ)–ಹೊಟ್ಟೆಯಲ್ಲಿ ರೆಟ್ರೊಪೆರಿಟೋನಿಯಲ್ ಲಿಪೊಸಾರ್ಕೋಮಾ ಎಂಬ 15 ಕೆಜಿಯ ಭಾರೀ ಗೆಡ್ಡೆಯನ್ನು ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ತೆಗೆಯಲಾಗಿದೆ ಎಂದು ಕಾವೇರಿ ಹಾರ್ಟ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯ ಡಾ.ಕಿರಣ್ ಶಂಕರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಣಸೂರು ನಿವಾಸಿಯಾದ 60 ವರ್ಷದ ವ್ಯಕ್ತಿಯೊಬ್ಬರು ಅಧಿಕ ರಕ್ತದೊತ್ತಡ ಹೊಂದಿದ್ದು, ಬಲ ಹೊಟ್ಟೆಯ ಕೆಳಭಾಗದಲ್ಲಿ ನೋವು ಮತ್ತು ಹೊಟ್ಟೆಯ ಹಿಗ್ಗುವಿಕೆ ಸಮಸ್ಯೆಯಿಂದ ಆಸ್ಪತ್ರೆಗೆ ಬಂದರು. ಅವರನ್ನು ಸಂಪೂರ್ಣವಾಗಿ ತಪಾಸಣೆ ಮಾಡಿಸಿ, ಅವರ ಹೊಟ್ಟೆ ಮತ್ತು ಸೊಂಟದ ಸಿಇಸಿಟಿ ಸ್ಕ್ಯಾನ್‌ಗೆ ಒಳಪಡಿಸಲಾಯಿತು. ಆಗ ಅವರ ಹೊಟ್ಟೆಯಲ್ಲಿ ದೊಡ್ಡ ರೆಟ್ರೊಪೆರಿಟೋನಿಯಲ್ ಗೆಡ್ಡೆ ಇದೆ ಎಂಬುದು ಖಚಿತವಾಯಿತು. ಸರಿಸುಮಾರು 5 ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ಮಾಡುವ ಮೂಲಕ 15 ಕೆಜಿ ತೂಕದ ಗೆಡ್ಡೆಯನ್ನು ತೆಗೆಯಲಾಯಿತು. ನಂತರ ಒಂದು ದಿನ ಐಸಿಯುನಲ್ಲಿ ಇರಿಸಿಕೊಂಡು 5 ದಿನಗಳ ಚಿಕಿತ್ಸೆಯ ನಂತರ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಅರವಿಂದ್, ಡಾ.ಪ್ರಶಾಂತ್ ಉಪಸ್ಥಿತರಿದ್ದರು.

ಹಣ ಸಂಪಾದನೆ ಆಸೆ ತೋರಿಸಿ ಗೃಹಿಣಿಗೆ ಲಕ್ಷ ರೂ. ವಂಚನೆ



ಮೈಸೂರು, ಜು.5–ಯು–ಟ್ಯೂಬ್‌ಗೆ ಚಂದಾದಾರರಾಗಿ ಲೈಕ್ ಮಾಡಿದರೆ ಹಣ ಸಂಪಾದನೆ ಮಾಡಬಹುದು ಎಂದು ನಂಬಿಸಿ ಇಬ್ಬರು ಮಹಿಳೆಯರಿಂದ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಶಕ್ತಿನಗರ ನಿವಾಸಿ ವೈ.ಸಿ.ಸುಧಾರಾಣಿ(35) ಎಂಬುವರ ಮೊಬೈಲ್‌ಗೆ 6295158894 ಸಂಖ್ಯೆಯಿಂದ ವರ್ಕ್ ಫ್ರಂ ಹೋಂ ಸಂದೇಶ ಬಂದಿದೆ. ಸದರಿ ಸಂಖ್ಯೆಯನ್ನು ಅವರು ಸಂಪರ್ಕಿಸಿದಾಗ ಯು–ಟ್ಯೂಬ್ ಚಾನಲ್‌ವೊಂದಕ್ಕೆ ಚಂದಾದಾರರಾದರೆ ಹಣ ಸಂಪಾದನೆ ಮಾಡಬಹುದು ಎಂದು ನಂಬಿಸಲಾಗಿದೆ. ಮೊದಲಿಗೆ ಸುಧಾರಾಣಿ ಅವರ ಖಾತೆಗೆ 50 ರೂ. ಜಮೆ ಆಗಿದ್ದು, ಇದರಿಂದ ಅವರಿಗೆ ಹಣ ಸಂಪಾದಿಸಬಹುದು ಎಂಬ ನಂಬಿಕೆ ಬಂದ ನಂತರ ವಂಚಕರು ಟಾಸ್ಕ್ ನೀಡಿ ಹಣ ಹೂಡುವಂತೆ ಒಪ್ಪಿಸಿ 95 ಸಾವಿರ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ.


ಅದೇ ರೀತಿ ವರುಣ ಹೋಬಳಿಯ ಛಾಯಾ ಲೇಔಟ್ ನಿವಾಸಿ ಶೀಲಾ ಗಣಪತಿ ಭಟ್(42) ಎಂಬುವರಿಗೆ ವಾಟ್ಸಾಪ್‌ನಲ್ಲಿ ಪರಿಚಯವಾದ ವಂಚಕರು ಯು–ಟ್ಯೂಬ್ ಲೈಕ್ ಮಾಡುವ ಟಾಸ್ಕ್ ಬಗ್ಗೆ ತಿಳಿಸಿ, ಹಣ ಹೂಡಿದರೆ ಹೆಚ್ಚು ಲಾಭ ಬರುತ್ತದೆ ಎಂದು ನಂಬಿಸಿ 1.05 ಲಕ್ಷ ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಈ ಎರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಅಪರಿಚಿತ ವಾಹನ ಡಿಕ್ಕಿ: ಪಾದಚಾರಿ ಸಾವು



ಮೈಸೂರು,ಜು.5–ಅಪರಿಚಿತ ವಾಹನ ಡಿಕ್ಕಿ ಹೊಡೆದು ಪಾದಚಾರಿ ಸಾವನ್ನಪ್ಪಿದ ಘಟನೆ ಮೈಸೂರಿನ ಹೂಟಗಳ್ಳಿ ಮುಖ್ಯ ರಸ್ತೆಯ ಸಂತೇಮಾಳದಲ್ಲಿ ಸಂಭವಿಸಿದೆ. ಕೈಲಾಸಪುರಂ ನಿವಾಸಿ ಡಿ.ಮಹದೇವ(34) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜು.3ರಂದು ಹುಣಸೂರಿಗೆ ಹೋಗಿ–ಬರುವುದಾಗಿ ಪತ್ನಿಗೆ ತಿಳಿಸಿ ಹೋಗಿದ್ದರು. ಜು.4ರಂದು ಬೆಳಗಿನ ಜಾವ 3 ಗಂಟೆ ಸುಮಾರಿನಲ್ಲಿ ಹೂಟಗಳ್ಳಿ ಮುಖ್ಯರಸ್ತೆಯ ಸಂತೇಮಾಳದ ಬಳಿ ರಸ್ತೆ ದಾಟುತ್ತಿದ್ದಾಗ ಯಾವುದೋ ವಾಹನ ಇವರಿಗೆ ಡಿಕ್ಕಿಯಾಗಿದ್ದು, ತೀವ್ರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವಿವಿ ಪುರಂ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.7.2023 ಗುರುವಾರ, ಮಳೆ ನಕ್ಷತ್ರ: ಆರಿದ್ರಾ 22.06.2023ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕತ್ತು ನೋವು, ಸೊಂಟ ನೋವು ತಪಾಸಣಾ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸಂಧಿವಾತ, ಮಂಡಿನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ.

■ **ಆಡಳಿತ ತರಬೇತಿ ಸಂಸ್ಥೆ:** ಸುಸ್ಥಿರ ಭವಿಷ್ಯಕ್ಕಾಗಿ ಉತ್ಪಾದಕತೆ ಮತ್ತು ಹಸಿರು ಬೆಳವಣಿಗೆ ಕುರಿತು ಸಮಾವೇಶ, ಅಧ್ಯಕ್ಷತೆ: ಆಡಳಿತ ತರಬೇತಿ ಸಂಸ್ಥೆ ಮಹಾನಿರ್ದೇಶಕರಾದ ಶ್ರೀಮತಿ ವಿ.ಮಂಜುಳಾ, ವಿಷಯ ಮಂಡನೆ: ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್ ಮಹಾನಿರ್ದೇಶಕ ಸಂದೀಪ್ ಕೆ.ನಾಯಕ್, ಇಸ್ರೋ ನಿರ್ದೇಶಕ ರಾಜೀವ್ ರಂಜನ್, ಶೆವರನ್ ಲ್ಯಾಬೋರೇಟರೀಸ್ ವ್ಯವಸ್ಥಾಪಕ ನಿರ್ದೇಶಕ ಸ್ಯಾಮ್ ಚೆರಿಯನ್, ಕೆ.ಡಿ.ಭಾರದ್ವಾಜ್, ಸ್ಥಳ: ಆಡಳಿತ ತರಬೇತಿ ಸಂಸ್ಥೆ, ಬೆಳಗ್ಗೆ 10ಕ್ಕೆ.

■ **ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ಶ್ರೀ ಬೀರೇಶ್ವರಸ್ವಾಮಿ ಟ್ರಸ್ಟ್, ರೋಟರಿ ಪಂಚಶೀಲ, ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಕಣ್ಣಿನ ಆಸ್ಪತ್ರೆ ಮತ್ತು ಮೈಸೂರು ಜಿಲ್ಲಾ ಅಂಧತ್ವ ನಿವಾರಣೆ ಸಂಸ್ಥೆ:** ಉಚಿತ ಕಣ್ಣಿನ ತಪಾಸಣಾ ಶಿಬಿರ, ಉದ್ಘಾಟನೆ : ಮಾಜಿ ಶಾಸಕ ವಾಸು, ಅಧ್ಯಕ್ಷತೆ: ಶ್ರೀ ಬೀರೇಶ್ವರ ಸ್ವಾಮಿ ಟ್ರಸ್ಟ್ ಅಧ್ಯಕ್ಷ ಸಿ.ಜವರಪ್ಪ, ಮುಖ್ಯ ಅತಿಥಿಗಳು: ನಗರಪಾಲಿಕೆ ಮಾಜಿ ಸದಸ್ಯ ಟಿ.ಬಿ.ಚಿಕ್ಕಣ್ಣ, ನಗರಪಾಲಿಕೆ ಸದಸ್ಯ ಜೆ.ಗೋಪಿ, ಸಮಾಜ ಸೇವಕರಾದ ಶ್ರೀಮತಿ ಸುಶೀಲ ಮರಿಗೌಡ ಮತ್ತು ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್ ಅಧ್ಯಕ್ಷ ಬಿ.ಎಂ.ನಾಗೇಶ್, ಸ್ಥಳ: ಶ್ರೀ ಬಿಸಿಲು ಮಾರಮ್ಮನ ದೇವಸ್ಥಾನದ ಆವರಣ, ಟಿ.ಕೆ. ಲೇಔಟ್, ಬೆಳಗ್ಗೆ 10ರಿಂದ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಬೇ.ನಾ.ವಿಜಯೇಂದ್ರಾಚಾರ್ ಅವರಿಂದ ಮಹಾಭಾರತ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಕೆ.ರಘುಶೆಟ್ಟಿ, 6.15 ಗೀತಾರಾಧನ,. 6.35 ಹಾಗೂ ಸಂಜೆ 6.10ಕ್ಕೆ “ಒಂದೇ ಕಥೆ” ವಿವಿಧ ಮುಖ–ಬಾನುಲಿ ಸರಣಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಪದಸಂಸ್ಕೃತಿ, ಪ್ರಸ್ತುತಿ –ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 8.40 ಪಂಪನ ಪೆಂಪು–ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ–ಜಿ.ಶಾಂತಕುಮಾರ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಆಲತ್ತೂರು ಸಹೋದರು–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20ಭಾವಗೀತೆ–ಜಿ.ಪುಷ್ಪಲತಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ, 4.30 “ಸಮಯ ಮಾಪಕ” ಚಂದ್ರಶೇಖರ ಅಯ್ಯರ್ ಹಾಗೂ ಅವರ ಮಡದಿ ವಿದ್ಯಾ ಚಂದ್ರಶೇಖರ್ ಅವರೊಂದಿಗೆ ಆತ್ಮೀಯ ಮಾತುಕತೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ, ವನಮಹೋತ್ಸವ ಕುರಿತ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿಪ್ರಿಯ. ಪ್ರಸ್ತುತಿ–ಎನ್.ಕೇಶವಮೂರ್ತಿ, 8.00 ಯುವವಾಣಿ–ಯುವಪ್ರತಿಭೆ, ಚಿತ್ರ ಚಿತ್ತಾರ, ಪ್ರಸ್ತುತಿ–ಚಿನಕುರಳಿಯ ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಶ್ರಾವಣಿ ಜಿ., 9.30 ಕನ್ನಡ ಭಾರತಿ, 10.00 ನಾಟಕ, 10.30 ಸವಿನೆನಪು

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು – ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

ಯಶೋದಪುರದಲ್ಲಿಂದು
ಹುಣಸೂರು ತಾಲೂಕು

■ **ವಿದ್ಯಾವರ್ಧಕ ಕಾನೂನು ಕಾಲೇಜು, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿದ್ಯಾವಿಕಾಶ ಕಾನೂನು ಅಧ್ಯಯನ ಸಂಸ್ಥೆ:** ಆರೋಗ್ಯಕರ ಸಮಾಜಕ್ಕಾಗಿ ಆರೋಗ್ಯಕರ ಯುವಜನತೆ ಮತ್ತು ಗಾಂಧಿ–ಯಶೋಧರಮ್ಮ ದಾಸಪ್ಪದಕವತ್ತ ವಿಚಾರಗಳ ಪ್ರಸ್ತುತತೆ ಕುರಿತು ರಾಸೇಯೋ ವಾರ್ಷಿಕ ವಿಶೇಷ ಶಿಬಿರ, ಮಾಜಿ ರಾಸೇಯೋ ಸಂಯೋಜನಾಧಿಕಾರಿ ಡಾ. ಸತೀಶ್‌ಗೌಡ ಅವರಿಂದ ಭಾರತದ ಪ್ರಜಾಸತ್ತೆ ನಡೆ–ಸಂವಿಧಾನದ ಪಾತ್ರ ಕುರಿತು ಉಪನ್ಯಾಸ, ಅಧ್ಯಕ್ಷತೆ: ಪ್ರಾಚಾರ್ಯ ಪ್ರೊ.ನಾಡಗೌಡ, ಮುಖ್ಯ ಅತಿಥಿಗಳು : ಪ್ರೊ. ನಾಗೇಶ್, ಶಶಿಕುಮಾರ್, ಶ್ರೀಮತಿ ನಂದಿನಿ, ಸ್ಥಳ: ಯಶೋಧರಪುರ, ಹುಣಸೂರು ತಾಲೂಕು ಸಂಜೆ 5 ಗಂಟೆಗೆ.

ಮೈಸೂರು ಮಿತ್ರ

ಮುಂಗಾರು ಕೈ ಕೊಟ್ಟ ಹಿನ್ನೆಲೆ; ತಮಿಳುನಾಡಿಗೆ ಕಾವೇರಿ ನೀರು ಕೊಡಲಾಗದ ನಿಸ್ಸಾಹಾಯಕ ಪರಿಸ್ಥಿತಿ

ಕಾವೇರಿ ನ್ಯಾಯ ಮಂಡಳಿಗೆ ವಾಸ್ತವಾಂಶ ಮನವರಿಕೆ ಮಾಡಿ

ಮುಖ್ಯಮಂತ್ರಿಗಳಿಗೆ ಸಂಸದ ಪ್ರತಾಪ್ ಸಿಂಹ ಮನವಿ



ಮೈಸೂರು,ಜು.5(ಪಿಎಂ)– ಮುಂಗಾರು ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಜೂನ್–ಜುಲೈ ಕೋಟಾದಡಿ ತಮಿಳುನಾಡಿಗೆ ಕಾವೇರಿ ನೀರು ಹರಿಸಲು ಸಾಧ್ಯವಾಗದ ವಾಸ್ತವಾಂಶವನ್ನು ಕಾವೇರಿ ನ್ಯಾಯ ಮಂಡಳಿಗೆ ಮನವರಿಕೆ ಮಾಡಿಕೊಡುವ ಕೆಲಸವನ್ನು ಶೀಘ್ರದಲ್ಲಿ ಮುಖ್ಯಮಂತ್ರಿಗಳು ಮಾಡಬೇಕೆಂದು ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದರು.

ತಮಿಳುನಾಡಿಗೆ ಈ ಬಾರಿ ಕಾವೇರಿ ನೀರು ಬಿಡಲು ಸಾಧ್ಯವಾಗದ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ (ಸೆಂಟ್ರಲ್ ವಾಟರ್ ಕಮಿಷನ್) ಪತ್ರ ಬರೆದಿರುವ ಸಂಬಂಧ ಪ್ರತಿಕ್ರಿಯಿಸಿದ ಅವರು, ಕೇಂದ್ರ ಸರ್ಕಾರವೇ ಕರ್ನಾಟಕ ರಾಜ್ಯದ ಆಡಳಿತ ನಡೆಸಲಿದೆ. ಬಿಟ್ಟುಕೊಡಲು ಹೇಳಿ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದ ತಮ್ಮ ಕಚೇರಿ ಎದುರು ಬುಧವಾರ ಮಾತನಾಡಿದ ಅವರು, ನೀರು ಹರಿಸಲಾಗದ ಬಗ್ಗೆ ಕಾವೇರಿ ನ್ಯಾಯಮಂಡಳಿ ಸಮ್ಮತಿಸಬೇಕಾಗುತ್ತದೆ. ಕರ್ನಾಟಕದ ಪರವಾಗಿ ಯಾವಾಗ ವಕಾಲತ್ತು ವಹಿಸಬೇಕೋ ಆಗ ಕೇಂದ್ರ ಸರ್ಕಾರ ಖಂಡಿತ ವಕಾಲತ್ತು ವಹಿಸುತ್ತದೆ. 195 ಟಿಎಂಸಿ ನೀರು ಕೊಡಬೇಕಿದ್ದನ್ನು 171 ಟಿಎಂಸಿಗೆ ಇಳಿಸಿದ್ದು ನಾವೇ, ಬಿಜೆಪಿಯವರೇ, ನಮ್ಮ ಸರ್ಕಾರದವರೇ ಎಂದು ಒತ್ತಿ ಹೇಳಿದರು.

ಈ ಹಿಂದೆ 2016–17ರಲ್ಲಿ ನಮ್ಮ ರಾಜ್ಯ ಸರ್ಕಾರ ಇದ್ದಾಗ ಬೆಂಗಳೂರಿಗೆ 5 ಟಿಎಂಸಿ ಕುಡಿಯುವ ನೀರು ಬೇಕೆಂದು ಹೆಚ್ಚುವರಿ ಕೋಟಾ ತೆಗೆದುಕೊಂಡಿದ್ದೇವೆ. ನಿಮಗೆ 135 ಸ್ಥಾನ ಕೊಟ್ಟಾಗಿದೆ. ಇನ್ನೂ ರಾಜಕಾರಣ ಮಾಡುತ್ತಾ ಕೂರಬೇಡಿ. ಜನರ ಜೀವ ರಕ್ಷಣೆ, ಕೃಷಿ ಸೇರಿದಂತೆ ರಾಜ್ಯದ ಹಿತಾಸಕ್ತಿ ಬಗ್ಗೆ ಗಮನ ಕೊಡಿ. 2028ರವರೆಗೆ ನಿಮ್ಮದೇ ಸಾಮ್ರಾಜ್ಯ. ಬರೀ ರಾಜಕಾರಣ ಮಾಡಬೇಡಿ. ಈಗಲಾದರೂ ಕೆಲಸ ಮಾಡಿ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ತೀಕ್ಷ್ಣವಾಗಿಯೇ ಸಲಹೆ ನೀಡಿದರು.

ಇಡೀ ಬೆಂಗಳೂರು, ಕರ್ನಾಟಕ ಪಾಲಿಗೆ ಕಾಮಧೇನು. ಶೇ.56ರಷ್ಟು ಆದಾಯ ಇಲ್ಲಿಂದ ಬರಲಿದೆ. ಇಲ್ಲಿಗೆ ಸಮರ್ಪಕ ಕುಡಿಯುವ ನೀರು ಪೂರೈಸಲು ಗಮನ ನೀಡಬೇಕು. ನಾನು 20 ದಿನಗಳ ಹಿಂದೆಯೇ ಕಾವೇರಿ ನ್ಯಾಯ ಮಂಡಳಿಗೆ ಕೂಡಲೇ ಮನವಿ ಸಲ್ಲಿಸಲು ಮುಖ್ಯಮಂತ್ರಿಗಳನ್ನು ಕೋರಿದ್ದೆ. ಇದೀಗ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ತಮಿಳುನಾಡಿನವರು ತಗಾದೇ ತೆಗೆದು ತಮಿಳುರು–ಕನ್ನಡಿಗರು ಎಂದು ಹೊಡೆದಾಡುವುದು ಬೇಡ. ಪರಿಸ್ಥಿತಿಯನ್ನು ನ್ಯಾಯಮಂಡಳಿಗೆ ಮನವರಿಕೆ ಮಾಡಿಕೊಡುವ ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ಮತ್ತೊಮ್ಮೆ ಮನವಿ ಮಾಡುವುದಾಗಿ ಹೇಳಿದರು.

ಮುಂಗಾರು ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಿಂದ ರಸಗೊಬ್ಬರ ಮತ್ತು ಬಿತ್ತನೆ ಬೀಜ ಪೂರೈಕೆ ಸಂಬಂಧ ಪ್ರತಿಕ್ರಿಯಿಸಿದ ಅವರು, ನಾನು ಕೊಡಗು ಜಿಲ್ಲೆಯಲ್ಲಿಯೂ ಪ್ರವಾಸ ಮಾಡಿದ್ದೆ. ಮೈಸೂರಿನಲ್ಲೂ ಪರಿಸ್ಥಿತಿ ಯಾವ ರೀತಿ ಇದೆ ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದೇನೆ. ಗೊಬ್ಬರ ದಾಸ್ತಾನು ಎಲ್ಲ ಕಡೆಯೂ ಇದೆ. ಮುಂಗಾರು ಆರಂಭವಾಗುವ ಲಕ್ಷಣ ಕಾಣುತ್ತಿದೆ. ಆದಷ್ಟು ವರುಣನ ಕೃಪೆ ದೊರಕಿ, ಕೃಷಿ ಚಟುವಟಿಕೆ ಆರಂಭವಾಗಲಿ. ಆ ಮೂಲಕ ರಾಜ್ಯ ಸುಭಿಕ್ಷೆಯಿಂದ ಇರಲೆಂದು ಪ್ರಾರ್ಥಿಸುತ್ತೇನೆ ಎಂದರು.



ನಮ್ಮ ಹೆಮ್ಮೆಯ ಪ್ರಧಾನಿ ಮೋದಿಯವರು ಬಯೋ ಫರ್ಟಿಲೈಜರ್ಸ್‌ಗೆ (ಜೈವಿಕ ಗೊಬ್ಬರ) ಅತೀ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಅಲ್ಲದೆ, ನ್ಯಾನೋ ಫರ್ಟಿಲೈಸರ್ಸ್ ಬಳಕೆಗೂ ಉತ್ತೇ ಜನ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರೋತಾಹ ಕೊಡಲಿದ್ದೇವೆ ಎಂದರು.

ಮೀಸಲಿಟ್ಟ ಅನುದಾನ ಹಿಂಪಡೆಯಬೇಡಿ: ರಾಜ್ಯ ಬಜೆಟ್‌ನಲ್ಲಿ ಏನಾದರೂ ನಿರೀಕ್ಷೆಗಳು ಇವೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಹಿಂದಿನ ನಮ್ಮ ರಾಜ್ಯ ಬಿಜೆಪಿ ಸರ್ಕಾರ ಕೆಲ ಇಲಾಖೆಗಳಿಗೆ ಹೆಚ್ಚಿನ ಅನುದಾನ ಕೊಟ್ಟಿದೆ. ಕೊಡಗು ಜಿಲ್ಲೆ, ಮೈಸೂರಿನ ಕೆಲ ಭಾಗಗಳು, ಚಿಕ್ಕಮಗಳೂರು ಸೇರಿದಂತೆ ರಾಜ್ಯದ ಕಾಡಂಚಿನ ಪ್ರದೇಶದಲ್ಲಿ ಕಾಡು ಪ್ರಾಣಿಗಳ ಹಾವಳಿ ತಡೆಗಟ್ಟಲು ರೈಲ್ವೆ ಹಳಿ ಬಳಸಿ ಬೇಲಿ ನಿರ್ಮಿಸಲು ಹಿಂದಿನ ನಮ್ಮ ಸರ್ಕಾರ 500 ಕೋಟಿ ಮೀಸಲಿಟ್ಟಿದೆ. ಈ ಅನುದಾನವನ್ನು ಬಜೆಟ್‌ನಲ್ಲಿ ಕಡಿಮೆ ಅಥವಾ ವಾಪಸ್ಸು ತೆಗೆದುಕೊಳ್ಳಬೇಡಿ ಎಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

ಆದೇಶ ಅಭಿವೃದ್ಧಿಗೆ ಮಾರಕ: 'ಜಲಜೀವನ ಮಿಷನ್' ಗ್ರಾಮಾಂತರ ಭಾಗದಲ್ಲಿ ಕುಡಿಯುವ ನೀರು ಕೊಡಲು ಹೆಚ್ಚು ಒತ್ತು ಕೊಟ್ಟಿರುವ ಯೋಜನೆಯಾಗಿದೆ. ಅಂತೆಯೇ ಅಮೃತ 2ರಲ್ಲಿಯೂ ನೀರು ಕೊಡುವ ಯೋಜನೆಗಳಿವೆ. ಈ ಯೋಜನೆಗಳಲ್ಲಿ ಅನೇಕ ಕಾಮಗಾರಿಗಳು ಪ್ರಗತಿಯಲ್ಲಿವೆ. ತಿಂಗಳ ಹಿಂದೆಯೇ ರಾಜ್ಯ ಸರ್ಕಾರ ವಿವಿಧ ಯೋಜನೆಗಳಡಿ ಪ್ರಗತಿಯಲ್ಲಿರುವ ಕಾಮಗಾರಿಗಳಿಗೂ ಅನುದಾನ ನಿಲ್ಲಿಸಿದೆ. ಪರಿಣಾಮ ಜಲಜೀವನ ಮಿಷನ್ ಯೋಜನೆಯ ಎಲ್ಲಾ ಕಾಮಗಾರಿ ಸ್ಥಗಿತವಾಗಿವೆ. ಜಲಜೀವನ್ ಮಿಷನ್‌ನಡಿ ಇಡೀ ಮೈಸೂರು ಜಿಲ್ಲೆಯ ಪ್ರತಿ ಮನೆಗೂ ಕೂಡ ನೀರು ಕೊಡುವ ಯೋಜನೆಯನ್ನು ನಾವು ತಂದಿದ್ದೇವೆ. ದಯವಿಟ್ಟು ಹಣ ಬಿಡುಗಡೆ ಮಾಡಬೇಕೆಂದು ಕೋರಿದರು.

ರಿಂಗ್ ರಸ್ತೆಯ ದೀಪದ ಬಾಕಿ: ಅಂತೆಯೇ ರಿಂಗ್ ರಸ್ತೆಗೆ ಲೈಟ್ ಅಳವಡಿಕೆ ಪೂರ್ಣವಾಗಿದೆ. ಆದರೆ ಗುತ್ತಿಗೆದಾರರಿಗೆ ಒಟ್ಟು 12 ಕೋಟಿಯಲ್ಲಿ ಕೇವಲ 6 ಕೋಟಿ ಮಾತ್ರ ಬಿಡುಗಡೆಯಾಗಿದೆ. ರಾಜ್ಯ ಸರ್ಕಾರದ ಈ ತಡೆ ಆದೇಶ ಅಭಿವೃದ್ಧಿಗೆ ಮಾರಕವಾಗಿದೆ. ಇದನ್ನು ವಾಪಸ್ಸು ಪಡೆದುಕೊಳ್ಳಬೇಕು. ಬೇಕಿದ್ದರೆ, ಯಾವ್ಯಾವ ಯೋಜನೆಗಳ ಬಗ್ಗೆ ತನಿಖೆ ಮಾಡಬೇಕೋ ಮಾಡಿಸಲಿ. ಒಂದು ತಿಂಗಳಿಂದ ಅನುದಾನ ಬಿಡುಗಡೆ ಮಾಡದೇ ಯಾವುದೇ ಕಾಮಗಾರಿ ನಡೆಯುತ್ತಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ಬೇಸರ ವ್ಯಕ್ತಪಡಿಸಿದರು.

ಸಂಜಯ್ ಅರಸ್ ನೇತೃತ್ವದ ರೋಟರಿ ಐವರಿ ಸಿಟಿ 2023–24ನೇ ಸಾಲಿನ ಪದಾಧಿಕಾರಿಗಳ ಪದಗ್ರಹಣ



ಮೈಸೂರಿನ ಜೆಎಲ್‌ಬಿ ರಸ್ತೆಯ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ರೋಟರಿ ಐವರಿ ಸಿಟಿ ಮೈಸೂರು 2023–24ನೇ ಸಾಲಿನ ಸಂಜಯ್ ಅರಸ್ ನೇತೃತ್ವದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಬುಧವಾರ ನಡೆಯಿತು. ಚಿತ್ರದಲ್ಲಿ (ಎಡದಿಂದ–ಕುಳಿತವರು) ಸಹಾಯಕ ಗೌರ್ನರ್ ಆನಂದ್, ಕಾರ್ಯದರ್ಶಿ ಶಬಾನಾ ಇಫ್ತಿಕರ್, ಅಧ್ಯಕ್ಷ ಸಂಜಯ್ ಅರಸ್, ಮಾಜಿ ಜಿಲ್ಲಾ ಗೌರ್ನರ್ ಕೆ.ಕೃಷ್ಣಯ್ಯ ಶೆಟ್ಟಿ, ಮಾಜಿ ಅಧ್ಯಕ್ಷ ಎಂ.ಎನ್.ರಮೇಶ್, ಮಾಜಿ ಕಾರ್ಯದರ್ಶಿ ಮುತ್ತುಕುಮಾರ್, ಬಿ.ಹರೀಶ್, (ಎಡದಿಂದ–ನಿಂತಿರುವವರು) ಅಂತರರಾಷ್ಟ್ರೀಯ ಸೇವಾ ನಿರ್ದೇಶಕ ಅನಂತ್ ನಾಗರಾಜ್, ಖಜಾಂಚಿ ಆರ್.ಬಾಲಚಂದರ್, ಸಾರ್ಜೆಂಟ್ ಅಟ್ ಆರ್ಮ್ಸ್ ಪುಷ್ಪಾ ಕಾಂಚನ್, ಯುವ ಸೇವಾ ನಿರ್ದೇಶಕಿಯಾಗಿ ಥೇನ್ ಪೆರುಮಾಳ್, ಸಮುದಾಯ ಸೇವಾ ನಿರ್ದೇಶಕಿ ಲತಾ ಸಚಿ, ವೃತ್ತಿಪರ ಸೇವಾ ನಿರ್ದೇಶಕಿ ಶೋಭಾ ನಾಗರಾಜ್, ಉಪಾಧ್ಯಕ್ಷೆ ಪೂಜಾ ಬಾಳಿಗ, ಕ್ಲಬ್ ಸರ್ವಿಸ್ ನಿರ್ದೇಶಕ ಇಫ್ತಿಕರ್ ಅಹ್ಮದ್ ಹಾಗೂ 2024–25ನೇ ಸಾಲಿನ ಅಧ್ಯಕ್ಷ ಕೆ.ಶಶಿಧರ್ ಅವರನ್ನು ಕಾಣಬಹುದು.

ಮೈಸೂರು, ಜು.5(ಎಂಕೆ)– ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ರೋಟರಿ ಐವರಿ ಸಿಟಿ ಮೈಸೂರು 2023–24ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಬುಧವಾರ ನಡೆಯಿತು.

ರೋಟರಿ ಐವರಿ ಸಿಟಿ ನೂತನ ಅಧ್ಯಕ್ಷ ಸಂಜಯ್ ಅರಸ್ ನೇತೃತ್ವದಲ್ಲಿ ಕಾರ್ಯದರ್ಶಿಯಾಗಿ ಶಬಾನಾ ಇಫ್ತಿಕರ್, ಉಪಾಧ್ಯಕ್ಷೆ ಪೂಜಾ ಬಾಳಿಗ, ಖಜಾಂಚಿ ಆರ್.ಬಾಲಚಂದರ್, ಸಾರ್ಜೆಂಟ್ ಅಟ್ ಆರ್ಮ್ಸ್ ಪುಷ್ಪಾ ಕಾಂಚನ್, ಕ್ಲಬ್ ಸರ್ವಿಸ್ ನಿರ್ದೇಶಕ ಇಫ್ತಿಕರ್ ಅಹ್ಮದ್, ವೃತ್ತಿಪರ ಸೇವಾ ನಿರ್ದೇಶಕಿ ಶೋಭಾ ನಾಗರಾಜ್, ಸಮುದಾಯ ಸೇವಾ ನಿರ್ದೇಶಕಿ ಲತಾ ಸಚಿ, ಅಂತರರಾಷ್ಟ್ರೀಯ ಸೇವಾ ನಿರ್ದೇಶಕ ಅನಂತ್ ನಾಗರಾಜ್, ಯುವ ಸೇವಾ ನಿರ್ದೇಶಕಿಯಾಗಿ ಥೇನ್ ಪೆರುಮಾಳ್ ಹಾಗೂ 2024–25ನೇ ಸಾಲಿನ ಅಧ್ಯಕ್ಷರಾಗಿ ಕೆ.ಶಶಿಧರ್ ಆಯ್ಕೆಯಾದರು.

ನಂತರ ರೋಟರಿ ಜಿಲ್ಲಾ ಮಾಜಿ ಗೌರ್ನರ್ ಕೆ.ಕೃಷ್ಣಯ್ಯ ಶೆಟ್ಟಿ ಅವರ ಸಮ್ಮುಖದಲ್ಲಿ ಮಾಜಿ ಅಧ್ಯಕ್ಷ ಎಂ.ಎನ್.ರಮೇಶ್ ಅವರಿಂದ ನೂತನ ಅಧ್ಯಕ್ಷ ಸಂಜಯ್ ಅರಸ್ ಅವರಿಗೆ ಅಧಿಕಾರ ಹಸ್ತಾಂತರಿಸಲಾಯಿತು.

ಅಭಿನಂದನೆ: ಇದೇ ವೇಳೆ ಮೈಸೂರಿನ ಖ್ಯಾತ ಮಕ್ಕಳ ತಜ್ಞ ಡಾ.ಯು.ಜಿ.ಶೆಣೈ ಅವರನ್ನು ಗೌರವಾನ್ವಿತ ರೋಟರಿಯನ್ ಆಗಿದ್ದು, ಅವರನ್ನು ಇದೇ ವೇಳೆ ಅಭಿನಂದಿಸಲಾಯಿತು. ಹಾಗೆಂಯೇ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಎನ್.ಹೆಗಡೆ ಅವರಿಗೆ 'ಮಾರ್ಗದರ್ಶಕ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಮೈಸೂರು ಬುಕ್ ಕ್ಲಬ್‌ನ ಶುಭಾ ಸಂಜಯ್ ಮತ್ತಿತರರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅನ್ನಭಾಗ್ಯಕ್ಕೆ ಅಕ್ಕಿ ನೀಡದ ವಿಚಾರ; ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ

ಸಂಸದ ಪ್ರತಾಪ್ ಸಿಂಹ ಕಾರಿಗೆ ಮುತ್ತಿಗೆ ಹಾಕಲು ಯತ್ನ



ಮೈಸೂರು,ಜು.5(ಪಿಎಂ)–ರಾಜ್ಯ ಕಾಂಗ್ರೆಸ್ ಸರ್ಕಾರದ ಅನ್ನಭಾಗ್ಯ ಯೋಜನೆಗೆ ಕೇಂದ್ರ ಬಿಜೆಪಿ ಸರ್ಕಾರ ಹೆಚ್ಚುವರಿ ಅಕ್ಕಿ ನೀಡದೇ ದುರುದ್ದೇಶದ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು, ಬುಧವಾರ ಪ್ರತಿಭಟನೆ ನಡೆಸಿದರಲ್ಲದೆ, ಸಂಸದ ಪ್ರತಾಪ್ ಸಿಂಹರ ಕಾರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹ ಆವರಣದಲ್ಲಿರುವ ಸಂಸದ ಪ್ರತಾಪ್ ಸಿಂಹ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲು ಯುವ ಕಾಂಗ್ರೆಸ್ ಕಾರ್ಯಕರ್ತರು ಮುಂದಾಗಿದ್ದಾದರೂ ಬಿಗಿ ಬಂದೋಬಸ್ತ್‌ನಲ್ಲಿದ್ದ ಪೊಲೀಸರು, ಜಲದರ್ಶಿನಿ ಒಳಾವರಣಕ್ಕೆ ಹೋಗಲು ಪ್ರತಿಭಟನಾಕಾರರಿಗೆ ಅವಕಾಶ ನೀಡಲಿಲ್ಲ. ಬಳಿಕ ಜಲದರ್ಶಿನಿ ಮುಖ್ಯ ದ್ವಾರದ ಬಳಿಯೇ ಪ್ರತಿಭಟಿಸಿ, ಕೇಂದ್ರ ಸರ್ಕಾರ ಮತ್ತು ಪ್ರತಾಪ್ ಸಿಂಹ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಡ ಜನರ ಅನ್ನದ ಮೇಲೆ ಕೇಂದ್ರ ಬಿಜೆಪಿ ಸರ್ಕಾರ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದರು.


ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡದ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ, ರಾಜ್ಯಕ್ಕೆ ಅಕ್ಕಿ ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸದ ಬಿಜೆಪಿ ಸಂಸದರಿಗೆ ಧಿಕ್ಕಾರ ಎಂಬಿತ್ಯಾದಿ ಘೋಷಣೆಗಳಿರುವ ಫಲಕಗಳನ್ನಿಡಿದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ತಮ್ಮ ಕಚೇರಿಗೆ ತೆರಳು ಆಗಮಿಸಿದ ಸಂಸದರ ಕಾರಿಗೆ ಮುತ್ತಿಗೆ ಹಾಕಲು ಪ್ರತಿಭಟನಾಕಾರರು ಯತ್ನಿಸಿದರು. ತಕ್ಷಣ ಎಚ್ಚೆತ್ತ ಸ್ಥಳದಲ್ಲಿದ್ದ ಪೊಲೀಸರು, ಪ್ರತಿಭಟನಾಕಾರರನ್ನು ತಡೆದು, ಮುತ್ತಿಗೆ ಹಾಕುವುದನ್ನು ವಿಫಲಗೊಳಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಯುವ ಕಾಂಗ್ರೆಸ್ ನಗರಾಧ್ಯಕ್ಷ ಸೈಯದ್ ಅಬ್ರಾರ್, ಕೇಂದ್ರ ಬಿಜೆಪಿ ಸರ್ಕಾರ ಅಕ್ಕಿ ನಿರಾಕರಿಸುವ ಮೂಲಕ ರಾಜ್ಯದ ಬಡ ಜನತೆಯ ಹೊಟ್ಟೆಯ ಮೇಲೆ ಹೊಡೆಯಲು ಹೊರಟಿದೆ. ದೊಡ್ಡ ದೊಡ್ಡ ಮಾತುಗಳನ್ನಾಡುವ ಸಂಸದ ಪ್ರತಾಪ್ ಸಿಂಹನವರಿಗೆ ರಾಜ್ಯದ ಬಡ ಜನತೆಯ ಬಗ್ಗೆ ಕಳಕಳಿ ಇದ್ದರೆ, ತಮ್ಮ ಕೇಂದ್ರ ಸರ್ಕಾರವನ್ನು ಅಕ್ಕಿ ಕೊಡುವಂತೆ ಒತ್ತಾಯಿಸುತ್ತಿದ್ದರು. ಆದರೆ ಅವರಿಗೆ ಅಂತಹ ಕಾಳಜಿ ಇಲ್ಲ ಎಂದು ದೂರಿದರು.

ಯುವ ಕಾಂಗ್ರೆಸ್ ಮೈಸೂರು ಗ್ರಾಮಾಂತರ ಅಧ್ಯಕ್ಷ ಡೊನಾಲ್ಡ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಎಂ.ಎಸ್.ಶಶಾಂಕ್, ಚಂದ್ರಶೇಖರ್, ನಿಶಾಂತ್, ನಿತಿನ್, ಯಶ್ವಂತ್, ಪ್ರತಾಪ್, ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ರಫೀಕ್ ಅಲಿ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಜು. 5– ಮೈಸೂರಿನ ಎನ್.ಎಸ್.ಜಿ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಜೆಎಸ್‌ಎಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಜೆಎಸ್‌ಎಸ್ ಡೆಂಟಲ್ ಆಸ್ಪತ್ರೆ, ಭಾರತ್ ಕ್ಯಾನ್ಸರ್ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಮಿಯರ್ ಆರ್ಗ್ಯಾನಿಕ್ಸ್ ಲಿಮಿಟೆಡ್, ಬಿಟ್ರಿಷ್ ಬಯಾಲಜಿಕಲ್ ಮತ್ತು ಯೋಗ ಪ್ರಾಣ ವಿದ್ಯಾ ಕೇಂದ್ರದ ಸಹಕಾರದೊಂದಿಗೆ ಜುಲೈ 11ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಮೈಸೂರಿನ ಕಬೀರ್ ರಸ್ತೆ, ಮಂಡಿ ಪೊಲೀಸ್ ಠಾಣೆ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ನಡೆಯಲಿರುವ ಈ ಶಿಬಿರದಲ್ಲಿ ಹೃದಯ, ಕಣ್ಣು, ಹಲ್ಲು ಮತ್ತು ಚರ್ಮ ತಪಾಸಣೆ, ವೃದ್ಧಾರೋಗ್ಯ, ಬೋನ್ ಡೆನ್ಸಿಟಿ, ಕ್ಯಾನ್ಸರ್ ತಪಾಸಣೆ ನಡೆಸಲಾಗುವುದು. ಅವಶ್ಯವಿದ್ದಲ್ಲಿ ಓದಲು ಉಪಯೋಗಿಸುವ ಕನ್ನಡಕವನ್ನು ಉಚಿತವಾಗಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಉತ್ತಮ ಹೆದ್ದಾರಿಯೇ ಹೊರತು ರೇಸಿಂಗ್ ಟ್ರ್ಯಾಕ್ ಅಲ್ಲ

6 ತಿಂಗಳಲ್ಲಿ ಹೆದ್ದಾರಿಯಲ್ಲಿ ಸಾಕಷ್ಟು ಸುಧಾರಣೆಗೆ ಕ್ರಮ

> “ ಚಿಕ್ಕ ಚಿಕ್ಕ ಕಾರುಗಳಲ್ಲಿ 120ರಿಂದ 130 ಕಿ.ಮೀ. ವೇಗದಲ್ಲಿ ಚಲಿಸಬೇಡಿ. ಇದರಿಂದ ಅಪಘಾತ ಸಂಭವಿಸುತ್ತದೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಉತ್ತಮ ಹೆದ್ದಾರಿಯೇ ಹೊರತು ರೇಸಿಂಗ್ ಟ್ರ್ಯಾಕ್ ಅಲ್ಲ.
> –ಪ್ರತಾಪ್ ಸಿಂಹ, ಸಂಸದ



ಮೈಸೂರು,ಜು.5(ಪಿಎಂ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಉತ್ತಮ ಹೆದ್ದಾರಿ ಅಷ್ಟೆ, ರೇಸಿಂಗ್ ಟ್ರ್ಯಾಕ್ ಅಲ್ಲ. ಇಲ್ಲಿ ಬೇಜವಾಬ್ದಾರಿ ಚಾಲನೆಯೇ ಸಾಕಷ್ಟು ಅಪಘಾತಗಳಿಗೆ ಕಾರಣವಾಗುತ್ತಿದೆ. ಆರು ತಿಂಗಳಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿ ಸಾಕಷ್ಟು ಸುಧಾರಣೆ ತರಲು ಕ್ರಮ ವಹಿಸಲಾಗುವುದು ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಆವರಣದಲ್ಲಿನ ತಮ್ಮ ಕಚೇರಿ ಎದುರು ಬುಧವಾರ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ಸಂಭವಿಸಲು ಅತೀ ವೇಗವೇ ಕಾರಣವೆಂದು ಎಡಿಜಿಪಿ ಅಲೋಕ್‌ಕುಮಾರ್ ಟ್ವೀಟ್ ಮಾಡಿರುವ ಸಂಬಂಧ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು.

ಸಾಮಾಜಿಕ ಜಾಲತಾಣದಲ್ಲಿ ಕೆಲವರು ತಜ್ಞರಿದ್ದಾರೆ ಎಂದು ವ್ಯಂಗ್ಯವಾಡಿದ ಅವರು, ವೇಗದ ಮಿತಿ ವಿಧಿಸುವುದಾದರೆ ಈ ಹೈವೆ ಏಕೆ ಮಾಡಬೇಕಿತ್ತು ಎಂದು ಪ್ರಶ್ನಿಸುತ್ತಾರೆ. ನಿನ್ನೆ ಬೆಂಗಳೂರಿನಿಂದ ಮೈಸೂರುವರೆಗೆ ಸ್ಥಳ ಪರಿಶೀಲನೆ ಮಾಡಿದ್ದೇನೆ. ಕಾರಲ್ಲಿ ಪ್ರಯಾಣಿಸುವ ಬಹುತೇಕರು ದ್ವಿಚಕ್ರ ವಾಹನಗಳಿಂದ ನಮಗೆ ತೊಂದರೆ ಆಗುತ್ತಿದೆ ಎಂದು ಹೇಳಿದ್ದಾರೆ ಎಂದರು.

ತುರ್ತು ಚಿಕಿತ್ಸೆ, ಸಮರ್ಪಕ ಲೇನ್ ಡ್ರೈವಿಂಗ್‌ಗೆ ಕ್ರಮ: ಇನ್ನು 15 ದಿನಗಳ ಒಳಗೆ ಲೇನ್ ಡ್ರೈವಿಂಗ್ ಸಮರ್ಪಕವಾಗಿ ಮಾಡಿಸಲಾಗುವುದು. ಮಣಿಪಾಲ್ ಆಸ್ಪತ್ರೆಯೊಂದಿಗೆ ಈಗಾಗಲೇ ಮಾತುಕತೆ ನಡೆಸಿದ್ದು, ವೈದ್ಯರು, ಸಹಾಯಕರ ಜೊತೆಗೆ ಐಸಿಯು ಆಂಬುಲೆನ್ಸ್‌ನೊಂದಿಗೆ ತುರ್ತು ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು. ಈ ಬಗ್ಗೆ ಮುಂದಿನ ವಾರ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜೊತೆಗೆ ಸಭೆ ಆಯೋಜಿಸಿದ್ದು, ಈ ವ್ಯವಸ್ಥೆಗೆ ಅನುಮೋದನೆ ಕೊಡಿಸಲಿದ್ದೇನೆ ಎಂದು ಹೇಳಿದರು.

ಕ್ರ್ಯಾಶ್ ಬ್ಯಾರಿಯರ್ಸ್ ಅಳವಡಿಕೆಗೆ ಪ್ರಸ್ತಾವನೆ: ವಿಭಜಕದಲ್ಲಿ ಎರಡು ಅಡಿ ಎತ್ತರವಿರುವ ಕ್ರ್ಯಾಶ್ ಬ್ಯಾರಿಯರ್ಸ್ ಅಳವಡಿಕೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ತಿಂಗಳೊಳಗೆ ಇದಕ್ಕೆ ಅನುಮೋದನೆ ದೊರೆಯಲಿದೆ ಎಂದು ಹೇಳಿದರು.

ಮಾರುತಿ ವ್ಯಾನ್ ಡಬ್ಬಾದವರು ಸೈಡ್‌ನಲ್ಲಿ ಹೋಗಿ: ಮಾರುತಿ ವ್ಯಾನ್‌ನವರು, ವಿಶೇಷವಾಗಿ ಈ ಡಬ್ಬಾದವರು ಸೈಡ್‌ನಲ್ಲಿ ಹೋಗಿ. ಗೂಡ್ಸ್‌ನವರು ದಯವಿಟ್ಟು ಸೈಡ್‌ನಲ್ಲಿ ಹೋಗಬೇಕು. ಒಳ್ಳೆಯ ರಸ್ತೆ ಮಾಡಿದ್ದೇವೆ. ಕೆಟ್ಟ ಹೆಸರು ತರಬೇಡಿ ಎಂದು ಪ್ರತಾಪ್ ಸಿಂಹ ಹೇಳಿದರು.

ಕರ್ನಾಟಕ ಸರ್ಕಾರದ ವಿರುದ್ಧ 74,558 ಪ್ರಕರಣಗಳು ಬಾಕಿ



ಎಚ್‌ಕೆ ಪಾಟೀಲ್

ಬೆಂಗಳೂರು, ಜು.5– 2020ರಿಂದ ರಾಜ್ಯ ಸರ್ಕಾರದ ವಿರುದ್ಧ ದಾಖಲಾಗುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ ಎಂದು ಕಾನೂನು ಸಚಿವ ಎಚ್‌ಕೆ ಪಾಟೀಲ್ ವಿಧಾನಸಭೆಯಲ್ಲಿ ಮಂಡಿಸಿದ ಅಂಕಿಅಂಶಗಳು ತಿಳಿಸಿವೆ.

2020ರಲ್ಲಿ ಸರ್ಕಾರದ ವಿರುದ್ಧ ಒಟ್ಟು 52,952 ಪ್ರಕರಣಗಳು ಬಾಕಿ ಉಳಿದಿವೆ. ಈ ವರ್ಷದ ಮೇ ವೇಳೆಗೆ ರಾಜ್ಯದ ವಿವಿಧ ಜಿಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ 74,558ಕ್ಕೆ ಏರಿದೆ ಎಂದರು.

ಕಾನೂನು ಸಚಿವ ಹೆಚ್.ಕೆ.ಪಾಟೀಲ್ ನೀಡಿದ ಉತ್ತರದ ಪ್ರಕಾರ, ನಿರ್ದಿಷ್ಟವಾಗಿ, ನ್ಯಾಯಾಲಯದ ಸೂಚನೆಯನ್ನು ಸ್ವೀಕರಿಸಿದ 30 ದಿನಗಳಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಬೇಕು. ಆದಾಗ್ಯೂ, ಹೆಚ್ಚುವರಿ ಸಮಯ ಅಗತ್ಯವಿದ್ದರೆ, ಅದನ್ನು ನ್ಯಾಯಾಲಯವು ನೀಡಬಹುದು. ಅಂದರೆ, ಲಿಖಿತ ಹೇಳಿಕೆಯನ್ನು ಸಲ್ಲಿಸಲು ಹೆಚ್ಚುವರಿ 90 ದಿನಗಳವರೆಗೆ ಕಾನೂನು ಅವಕಾಶ ನೀಡುತ್ತದೆ.

ಬಹುತೇಕ ಪ್ರಕರಣಗಳಲ್ಲಿ ರಾಜ್ಯ ಸರ್ಕಾರ ಪ್ರತಿವಾದಿಯಾಗಿರುವುದರಿಂದ ಅಫಿಡವಿಟ್ ಸಲ್ಲಿಸಲು ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಬೇಕಾಗುತ್ತದೆ. ಆದ್ದರಿಂದ, ಈ ಪ್ರಮುಖ ದಾಖಲೆಗಳನ್ನು ಸಲ್ಲಿಸಲು ಗಡುವನ್ನು ನಿಗದಿಪಡಿಸಲು ಸಾಧ್ಯವಿಲ್ಲ. ಆದಾಗ್ಯೂ, ಕರ್ನಾಟಕದ ಹೈಕೋರ್ಟ್ ಪ್ರತ್ಯೇಕವಾಗಿ ಕೇಸ್ ಫ್ಲೋ ಮ್ಯಾನೇಜ್‌ಮೆಂಟ್ ನಿಯಮಗಳನ್ನು (ಸಿಎಫ್ ಎಂಆರ್) ರೂಪಿಸಿದೆ ಮತ್ತು ಇದು ಎಲ್ಲಾ ಸಿವಿಲ್ ಪ್ರಕರಣಗಳಿಗೆ ಈ ನಿಯಮಗಳ ಆಧಾರದ ಮೇಲೆ ಎಲ್ಲಾ ಪ್ರಕರಣಗಳನ್ನು ಟ್ರ್ಯಾಕ್ ಮಾಡುತ್ತದೆ' ಎಂದು ಉತ್ತರದಲ್ಲಿ ವಿವರಿಸಲಾಗಿದೆ.

ನ್ಯಾಯಾಲಯಗಳಲ್ಲಿ 21.68 ಲಕ್ಷ ಪ್ರಕರಣಗಳು ಬಾಕಿ ಉಳಿದಿವೆ. ಈ ಪೈಕಿ ಹೈಕೋರ್ಟ್‌ನಲ್ಲಿ 2.71 ಲಕ್ಷ ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ 18.96 ಲಕ್ಷ ಪ್ರಕರಣಗಳು ರಾಜ್ಯ ಸರ್ಕಾರದ ವಿರುದ್ಧ ಬಾಕಿ ಉಳಿದಿವೆ ಎಂದು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ನನಗೆ ಹೆಣ್ಣು ದೆವ್ವ ಹಿಡಿದರೆ ಏನು ಮಾಡ್ತೀರಿ?

ಗಂಡ : ಅಕ್ಕ ತಂಗೀರ್ ಮಧ್ಯೆ ನಾನೇಕೆ ಬರ್ಲಿ!

ಮೈಸೂರು ಮಿತ್ರ

ಗುರುವಾರ, 6 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಮಗೇನು ಗೊತ್ತಿದೆ ಮತ್ತು ಏನು ಗೊತ್ತಿಲ್ಲ ಎನ್ನುವುದನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ. –ಕನ್‌ಫ್ಯೂಶಿಯಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿಷ್ಠೆಯಿದ್ದವನಿಗೆ ನಷ್ಟವಿಲ್ಲ

ನಿಮ್ಮ ಪತ್ರಗಳು

ವಿವಿಗಳಲ್ಲಿ 'ಇಂದಿರಾ ಕ್ಯಾಂಟೀನ್' ತೆರೆಯಿರಿ

ಮಾನ್ಯರೆ,

ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳಿಗೆ ಉನ್ನತ ಶಿಕ್ಷಣಕ್ಕೆಂದು ಬಡ ವರ್ಗದ ವಿದ್ಯಾರ್ಥಿಗಳು ಮತ್ತು ಅನೇಕ ಶಿಕ್ಷಣ ಸಾಲದ ಸೌಲಭ್ಯದಡಿಯಲ್ಲಿ ದೇಶ–ವಿದೇಶಗಳಿಂದ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಈ ಸಮಯದಲ್ಲಿ ತಿಂಡಿ ತಿನ್ನಲು ವಿಶ್ವವಿದ್ಯಾನಿಲಯಗಳ ಕ್ಯಾಂಟೀನ್‌ಗಳನ್ನೇ ಅವಲಂಬಿಸಬೇಕಾಗಿದೆ. ಅಲ್ಲಿ ಊಟ– ತಿಂಡಿ, ಕಾಫಿ, ಟೀ ಇತರ ತಿನ್ನುವ ಪದಾರ್ಥಗಳು ಹೊರಗಿನ ಹೋಟೇಲ್‌ಗಳ ದರವನ್ನು ಮೀರಿಸುವಂತಿದೆ. ಸುಮಾರು ವರ್ಷಗಳಿಂದ ಕ್ಯಾಂಟೀನ್‌ಗಳ ಟೆಂಡರ್‌ಗಳನ್ನು ಕರೆಯದೆ ಇರುವವರನ್ನೇ ಮುಂದುವರೆಸುತ್ತ ವಿಶ್ವವಿದ್ಯಾನಿಲಯಗಳು ಒಬ್ಬರಿಗೆ ಟೆಂಡರ್ ನೀಡುತ್ತಾ ಬಂದಿರುವುದರಿಂದ ಈ ಪರಿಸ್ಥಿತಿ ತಲೆದೋರಿದೆ. ವಿಶ್ವವಿದ್ಯಾನಿಲಯಗಳ ಕ್ಯಾಂಟೀನ್‌ಗಳ ದುಬಾರಿ ದರದಿಂದ ವಿದ್ಯಾರ್ಥಿಗಳು ಹಾಗೂ ಬರುವ ಸಾರ್ವಜನಿಕರು ಕಂಗಾಲಾಗಿದ್ದಾರೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸಕ್ಕೆ ಬರುವ ಎಲ್ಲರಿಗೂ ಮತ್ತು ಅಲ್ಲಿನ ವಿವಿಧ ರೀತಿಯ ಕೆಲಸ ಮಾಡುವ ಬಡವರ್ಗದವರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಮಾನವೀಯತೆ ದೃಷ್ಟಿಯಿಂದ ಎಲ್ಲರ ಜೀವ ಅಮೂಲ್ಯ

ಮಾನ್ಯರೆ,

ಮಳೆಗಾಲ ಆರಂಭವಾಗುತ್ತಿದೆ, ಮಳೆಯೂ ಬರುತ್ತಿದೆ. ಮಳೆಗಾಲದ ಸಮಯದಲ್ಲಿ ಮನುಷ್ಯರು ಸಂಚರಿಸುವಾಗ ಸುರಕ್ಷಿತ ಸ್ಥಳಕ್ಕೆ ಹೋಗಿ ಆಶ್ರಯ ಪಡೆಯುತ್ತಾರೆ. ಆದರೆ ನಾಯಿ, ಬೆಕ್ಕು ಸೇರಿದಂತೆ ಇನ್ನಿತರ ಪ್ರಾಣಿಗಳ ಗತಿ! ಮಳೆಗಾಲ ಸಮಯದಲ್ಲಿ ನಿಲ್ಲಿಸಿರುವ ಕಾರು, ಬಸ್, ಆಟೋ ಇತ್ಯಾದಿ ವಾಹನಗಳ ಕೆಳಗೆ ಮಳೆಯಿಂದ ರಕ್ಷಣೆ ಪಡೆಯುತ್ತವೆ. ಅವುಗಳಿಗೆ ಗಾಯವಾಗದಂತೆ ನೋಡಿಕೊಳ್ಳಬೇಕಾಗಿದೆ. ವಾಹನ ಚಲಾಯಿಸುವ ಮುನ್ನ ಪ್ರಾಣಿಗಳು ಅಲ್ಲಿವೆಯೇ ಎನ್ನುವುದನ್ನು ಪರಿಶೀಲಿಸುವುದು ಒಳಿತು.

ವಾಹನ ಚಾಲನೆ ಮಾಡುವ ಮುನ್ನ ಇದನ್ನು ವಾಹನ ಸವಾರರು ಗಮನಿಸಿ ವಾಹನ ಚಾಲನೆ ಮಾಡುವುದು ಒಳಿತು. ನೀವು ನೋಡದೆ ವಾಹನ ಚಾಲನೆ ಮಾಡಿದರೆ ವಾಹನದ ಕೆಳಗೆ ಆಶ್ರಯ ಪಡೆಯುತ್ತಿರುವ ಪ್ರಾಣಿಗಳು ಸ್ಥಳದಲ್ಲೇ ಸಾವನ್ನಪ್ಪಬಹುದು. ಮಾನವೀಯತೆ ದೃಷ್ಟಿಯಿಂದ ಎಲ್ಲರ ಜೀವ ಅಮೂಲ್ಯ. ಈ ಮಳೆ ಋತುವಿನಲ್ಲಿ ನಾವೆಲ್ಲರೂ ಅವುಗಳಿಗೆ ತಾತ್ಕಾಲಿಕ ಆಶ್ರಯ ನೀಡೋಣ. ಅದು ಹೃದಯಸ್ಪರ್ಶಿಯಾದ ಮಾನವೀಯತೆಯ ನಿಲುವಾಗಿರುತ್ತದೆ.

–ಗೋವಿತ್ ಕಿರಣ್, ಮೈಸೂರು.

ತೃತೀಯಲಿಂಗಿಗಳ ಉಪಟಳ ತಪ್ಪಿಸಿ

ಮಾನ್ಯರೆ,

ಮದುವೆ ಮತ್ತು ಗೃಹಪ್ರವೇಶದಂತಹ ಶುಭ ಕಾರ್ಯಕ್ರಮಗಳಲ್ಲಿ ಕೆಲವು ತೃತೀಯಲಿಂಗಿಗಳು (ಲಿಂಗತ್ವ ಅಲ್ಪಸಂಖ್ಯಾತರು) ಮಾನಸಿಕವಾಗಿ ನೀಡುತ್ತಿರುವ ಉಪಟಳ ಹೇಳತೀರದಾಗಿದ್ದು, ಅದು ಎಲ್ಲೆ ಮೀರಿದೆ.

ಇತ್ತೀಚೆಗೆ ನಮ್ಮ ಸ್ನೇಹಿತರ ಮಗಳ ಮದುವೆಯ ಆರತಕ್ಷತೆಯ ವೇಳೆ ದಿಢೀರನೆ ವೇದಿಕೆಯ ಮೇಲೆ ಬಂದ ಐವರು ತೃತೀಯಲಿಂಗಿಗಳು ಹುಡುಗಿ ತಂದೆಯ ಮೈಮುಟ್ಟಿ, ಕೈ ಹಿಡಿದು ಮಗಳ ಮದುವೆ ಮಾಡ್ತಿದ್ದೀಯಾ ಹತ್ತು ಸಾವಿರ ಕೊಡು ಎಂದು ಎಲ್ಲರ ಎದುರಿನಲ್ಲೇ ಏಕವಚನದಲ್ಲಿ ಪೀಡಿಸಲಾರಂಭಿಸಿದರು. ಅವರು ಮರ್ಯಾದೆಗೆ ಅಂಜಿ ಐದು ಸಾವಿರ ಕೊಟ್ಟು ಸಾಗಹಾಕಿದರು. ಇವರು ಮೈಮುಟ್ಟುವುದು ಒಂದು ರೀತಿಯ ದೈಹಿಕ ಮತ್ತು ಮಾನಸಿಕ ಹಿಂಸೆಯೆಂದೇ ಹೇಳಬೇಕು.

ಮತ್ತೊಂದು ಆತಂಕದ ವಿಷಯವೆಂದರೆ, ಇವರು ಸಿಗ್ನಲ್ ಲೈಟ್‌ಗಳ ಅಕ್ಕ ಪಕ್ಕ ನಿಂತು ಹಣ ಕೇಳುತ್ತಿರುತ್ತಾರೆ. ಗ್ರೀನ್ ಸಿಗ್ನಲ್ ಬಿದ್ದು ವಾಹನ ಹೊರಡುವ ಸಮಯಕ್ಕೇ ವಾಹನ ಚಾಲನೆ ಮಾಡುವವರ ಜೇಬಿಗೆ ಕೈ ಹಾಕಿ ಹಣ ಎಗರಿಸುತ್ತಾರೆ. ಇನ್ನು ರಾತ್ರಿ ವೇಳೆಯಲ್ಲಾದರೆ ಜೇಬಿಗೆ ಕೈ ಹಾಕಿ ಮೊಬೈಲ್ ಫೋನ್‌ಗಳನ್ನೂ ಕದಿಯುತ್ತಾರೆ. ವಾಹನ ಚಾಲಕ ಗಾಡಿ ನಿಲ್ಲಿಸಿ ಬರುವಷ್ಟರಲ್ಲಿ ಮತ್ತೊಂದು ಬದಿಯ ಸಿಗ್ನಲ್ ಲೈಟ್ ಬಳಿ ಹೋಗಿರುತ್ತಾರೆ. ಅವರನ್ನು ಕೇಳಿದರೆ ತಮಗೇನು ಗೊತ್ತಿಲ್ಲದಂತೆ ನಟಿಸುತ್ತಾರೆ. ಎಲ್ಲರೂ ಒಂದೇ ತರ ಕಾಣುವುದರಿಂದ ಕಳ್ಳತನ ಮಾಡುವವರನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಇನ್ನು ಅಲ್ಲೇ ನಿಂತಿರುವ ಟ್ರಾಫಿಕ್ ಪೊಲೀಸರಿಗೆ ಈ ಬಗ್ಗೆ ದೂರು ಹೇಳಿದರೆ ನಮಗೂ ಇದಕ್ಕೂ ಸಂಬಂಧವಿಲ್ಲ. ನೀವು ಪೊಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಡಿ ಎನ್ನುತ್ತಾರೆ. ಇದು ಇತ್ತೀಚೆಗೆ ನನ್ನ ಗೆಳೆಯನಿಗೆ ಆದ ಅನುಭವ.

ಕಾರುಗಳಲ್ಲಿ ಪ್ರಯಾಣಿಸುವವರು ಕಿಟಕಿಯ ಪಕ್ಕದಲ್ಲಿ ಕುಳಿತುಕೊಳ್ಳುವವರು ನಿಮ್ಮ ಅಂಗಿಯ ಮೇಲಿನ ಜೇಬಿನಲ್ಲಿ ಮೊಬೈಲ್ ಇಟ್ಟುಕೊಳ್ಳಬೇಡಿ. ರಾಜ್ಯದ ಎಲ್ಲಾ ಸಿಗ್ನಲ್ ಲೈಟ್ ಬಳಿ, ಮನೆಯ ಗೃಹಪ್ರವೇಶ, ಮದುವೆ ಮಂಟಪಗಳಲ್ಲಿ ಇವರಿಂದಾಗುವ ಕಿರುಕುಳ ತಪ್ಪಿಸಲು ಪೊಲೀಸರು ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಸರ್ಕಾರದ ಚಿತ್ತ ರೈತರ ನಡೆಯತ್ತ ಸಾಗಲಿ

ಮಾನ್ಯರೆ,

ರೈತ ದೇಶದ ಬೆನ್ನೆಲುಬು ಎಂದು ನಮಗೆಲ್ಲಾ ತಿಳಿದ ವಿಷಯವೇ ಸರಿ. ದೇಶದ ಬಹುಪಾಲು ಜನರು ಮಳೆಯನ್ನೇ ಅವಲಂಬಿಸಿದ್ದಾರೆ. ಮಳೆ ಬಂದರೆ ಬೆಳೆ ಇಲ್ಲವಾದರೆ ಅವರ ಪಾಡು ಹೇಳತೀರದಾಗಿದೆ. ಈ ವರ್ಷ ಉತ್ತಮ ಬೆಳೆ ಬೆಳೆಯಬೇಕೆಂಬ ಆಸೆಯಿಂದ ರೈತರೆಲ್ಲರೂ ಸಾಲಸೋಲ ಮಾಡಿ ಬಿತ್ತನೆ ಬೀಜ, ರಸಗೊಬ್ಬರವನ್ನು ತಂದು ಹೊಲದಲ್ಲಿ ಹಾಕುತ್ತಾರೆ. ಆದರೆ ಮಳೆ ಬಾರದೆ ಬೆಳೆ ಆಗದಿದ್ದಾಗ ರೈತರ ಸ್ಥಿತಿ ಅತಂತ್ರವಾಗುತ್ತದೆ. ಇದೀಗ ಮಳೆ ಸಮಯಕ್ಕೆ ಸರಿಯಾಗಿ ಬಾರದೆ ರೈತರ ಬದುಕು ಚಿಂತಾಜನಕವಾಗಿದೆ.

ರೈತರಿದ್ದರೆ ನಾವು. ರೈತನ ಕೈ ಕೆಸರಾದರೆ ಮಾತ್ರ ನಾವು ನೆಮ್ಮದಿಯಿಂದ ಬದುಕಲು ಸಾಧ್ಯ. ಇಂತಹ ರೈತರ ಕಡೆ ಸರ್ಕಾರ ಗಮನಹರಿಸುವಂತಾಗಬೇಕು. ರೈತರು ಕಷ್ಟದಲ್ಲಿದ್ದಾಗ ಅವರಿಗೆ ಸಹಾಯಹಸ್ತವನ್ನು ನೀಡಬೇಕು. ರೈತರ ಜೀವನಕ್ಕಾಗಿ ಅವರ ಬದುಕು ಹಸನಾಗಿಸಲು ಉತ್ತಮ ಯೋಜನೆಗಳನ್ನು ಜಾರಿಗೆ ತರುವಂತಾಗಬೇಕು. ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ಹಾಗೂ ರಸಗೊಬ್ಬರಗಳನ್ನು ನ್ಯಾಯಬೆಲೆ ಅಂಗಡಿಯಲ್ಲೇ ಕಡಿಮೆ ಬೆಲೆಗೆ ರೈತರ ಕೈಗೆಟಕುವ ಬೆಲೆಯಲ್ಲಿ ಒದಗಿಸುವಂತಾಗಬೇಕು.

ಇದರಿಂದ ರೈತನು ಸಹ ಸ್ವಲ್ಪ ನೆಮ್ಮದಿಯಿಂದ ಉಸಿರಾಡಲು ಸಾಧ್ಯ. ರೈತನು ಮಳೆಗಾಗಿ ದಿನ ಆಕಾಶ ನೋಡುತ್ತಾ ಕುಳಿತಿದ್ದಾನೆ. ಮೊದಲು ನಮ್ಮ ಸರ್ಕಾರ ರೈತರ ಬೆಂಬಲಕ್ಕೆ ನಿಲ್ಲುವಂತಾಗಬೇಕು. ರೈತರಿಗಾಗಿ ಉತ್ತಮ ಯೋಜನೆಗಳನ್ನು ಜಾರಿಗೆ ತರುವಂತಾಗಬೇಕು. ರೈತರು ಮಾಡಿರುವ ಬ್ಯಾಂಕಿನ ಸಾಲವನ್ನು ಸಾಧ್ಯವಾದರೆ ಮನ್ನಾ ಮಾಡಿ ಅವರ ಮೊಗದಲ್ಲಿ ನಗೆಯನ್ನು ತರಲಿ ಎಂಬುದು ನಮ್ಮೆಲ್ಲರ ಆಶಯ. ಒಟ್ಟಾರೆಯಾಗಿ ಸರ್ಕಾರದ ನಡಿಗೆಯಲಿ ಮೊದಲ ಸ್ಥಾನ ರೈತರಿಗೇ ನೀಡಲಿ. ರೈತ ಸಂತಸದಿಂದಿದ್ದರೆ ನಾಡು ಉನ್ನತಿಯ ಹಾದಿ ಹಿಡಿಯಲು ಸಾಧ್ಯ ಅಲ್ಲವೇ?!

–ಅನಿಲ್ ರಾಜ, ಕುಕ್ಕರಹಳ್ಳಿ ಮೈಸೂರು



ಆರ್.ಪಿ.ಜಗದೀಶ್

ಹಿರಿಯ ಪತ್ರಕರ್ತರು

ಮೊ: 9845048051

ಸಕಾಲಿಕ

ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಇದು ಸಕಾಲ





ರಾಜ್ಯದ 'ಶಕ್ತಿ' ಕೇಂದ್ರಗಳಾದ ವಿಧಾನಸೌಧ ಹಾಗೂ ವಿಕಾಸಸೌಧ ಭ್ರಷ್ಟಾಚಾರದಿಂದ ಅಪವಿತ್ರವಾಗಿವೆ. ಈ ವ್ಯಾಧಿ ರಾಜ್ಯವ್ಯಾಪ್ತಿ ಹರಡಿದೆ. ಇದಕ್ಕೆ ಲೋಕಾಯುಕ್ತದ ಇತ್ತೀಚಿನ ದಾಳಿಯಿಂದ ಪತ್ತೆಯಾದ ಅಪಾರ ಆಸ್ತಿಪಾಸ್ತಿ, ನಗ–ನಾಣ್ಯ ಹಾಗೂ ನಗದೇ ಸಾಕ್ಷಿ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಇದು ಸಕಾಲ.

ಭ್ರಷ್ಟಾಚಾರ ಇಲ್ಲವೇ ಲಂಚಾವತಾರವೆಂಬ ಪದಗಳೇ ಸವಕಲಾಗಿ ಹೋಗಿವೆ. ರಾಜಕಾರಣಿಗಳನ್ನು ಇನ್ನು ಮೇಲೆ ಭ್ರಷ್ಟಾಚಾರಿಗಳೆಂದು ಪುನರ್ ನಾಮಕರಣ ಮಾಡಿದರೆ ಅವರ್‍ಯಾರೂ ಮುಜುಗರ ಇಲ್ಲವೇ ನಾಚಿಕೆಪಟ್ಟುಕೊಳ್ಳುವುದಿಲ್ಲ. ಏಕೆಂದರೆ, ಅವರೆಲ್ಲಾ ಸದ್ಯ ನಿತ್ಯವೂ ತಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಾರಲ್ಲವೇ?

ದುರಾಡಳಿತ, ಭ್ರಷ್ಟಾಚಾರ, ಕೋಮು ಗಲಭೆ, ಗೂಂಡಾಗಿರಿ, ಕೊಲೆ, ದರೋಡೆಗೆ ಹೆಸರಾಗಿದ್ದ ಬಿಹಾರ ಈಗ ಅಭಿವೃದ್ಧಿ ಪಥದತ್ತ ಹೆಜ್ಜೆ ಹಾಕುತ್ತಿದೆ. ಆದರೆ ನಮ್ಮ ರಾಜ್ಯ ಈಗ ಹಳೇ ಬಿಹಾರದ ಮಾರ್ಗ ಹಿಡಿಯುತ್ತಿದೆ. ಏಕೆಂದರೆ, ಪರಸ್ಪರ ಕಾಲೆಳೆಯುವುದು, ಎದುರಾಳಿ ಮುಖಕ್ಕೆ ಮಸಿ ಬಳಿಯುವುದೇ ಎಲ್ಲ ಪಕ್ಷಗಳ ಚಾಳಿ ಆಗಿದೆ. ತಮ್ಮ "ಕೈ" ಕೂಡ ಮಸಿ ಆಗುವುದಿಲ್ಲವೇ ಎಂಬ ಪರಿಜ್ಞಾನವೂ ಇವರಿಗಿಲ್ಲ.

ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕ ಹಕ್ಕು ಯಾವ ರಾಜಕಾರಣಿಗಿದೆ. ಎದೆ ಮುಟ್ಟಿಕೊಂಡು, ಆತ್ಮ ಸಾಕ್ಷಿಯಾಗಿ ತಮ್ಮ ಮನೆ ದೇವರ ಮೇಲೆ ಬಹಿರಂಗವಾಗಿ ಆಣೆ ಮಾಡಲಿ ನೋಡೋಣ. **ಮೂರು ಬಿಟ್ಟವನು ಊರಿಗೆ ದೊಡ್ಡವನು** ಎಂಬ ಗಾದೆಯಂತೆ ಇವರು ಎಲ್ಲವನ್ನು ಬಿಟ್ಟು ಬೀದಿಯಲ್ಲಿ ಬೆತ್ತಲಾಗಿದ್ದಾರೆ. ಆ ಪಕ್ಷ–ಈ ಪಕ್ಷ ಎನ್ನುವಂತಿಲ್ಲ. ಭ್ರಷ್ಟಾಚಾರದ ವಿಚಾರದಲ್ಲಿ ಅಣ್ಣ ತಮ್ಮಂದಿರಂತೆ ಬಾಯಿ ಬಿಟ್ಟುಕೊಂಡು ಬಾಚುವ ಸದ್ಗುಣವನ್ನು ಮೈಗೂಡಿಸಿಕೊಂಡಿದ್ದಾರೆ. ಅಧಿಕಾರ ದುರುಪಯೋಗ ಮಾಡಿಕೊಂಡು ಅಪಾರ ಆಸ್ತಿ ಮಾಡಿಕೊಳ್ಳುವಲ್ಲಿ ಈ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಸಮಾನರು. ಎರಡು ಕೈ ಸೇರಿದರೆ ಚಪ್ಪಾಳೆ ಎಂಬಂತೆ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳುವುದರಲ್ಲಿ ನಿಸ್ಸೀಮರು.

ಭ್ರಷ್ಟರನ್ನು ಬಹಿರಂಗವಾಗಿ ಬೀದಿಯಲ್ಲಿ ನೇಣು ಹಾಕುವ ಕಾಲ ಬರಬೇಕು. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂಬಂತೆ ಈ ಕಾನೂನು ತರುವ ಧೈರ್ಯ ಯಾರಿಗಿದೆ? ಎಲ್ಲಾ ಬರೀ ಬುರುಡೆ, ಬೂಟಾಟಿಕೆ ಅಷ್ಟೆ.

ಬಿಜೆಪಿ ಅಧಿಕಾರದ ಅವಧಿಯಲ್ಲಿ ಶೇ.40ರಷ್ಟು ಲಂಚ ನಡೆಯುತ್ತಿದೆ ಎಂದು ಬೊಬ್ಬೆಯಾಯಿತು. ಈಗ ಕಾಂಗ್ರೆಸ್ ಏನು ಮಾಡುತ್ತಿದೆ. ಸಿಎಂ ಕಚೇರಿಯೇ ಭ್ರಷ್ಟಾಚಾರದ ಕೂಪವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವಿಧಾನಸಭೆಯಲ್ಲಿ ಆರೋಪ ಮಾಡಿದ್ದಾರೆ. ಈ ಸವಾಲನ್ನು ಸರ್ಕಾರ ಸ್ವೀಕರಿಸಿ, ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಮುಂದಾಗಲಿ. ಆದರೆ ಕುಮಾರಸ್ವಾಮಿ ಆರೋಪವೂ 'ಬ್ಲಾಕ್‌ಮೇಲ್' ತಂತ್ರ ಎಂಬಂತೆ ಕಾಣುತ್ತಿದೆ ಎನ್ನುವ ಆಡಳಿತ ಪಕ್ಷದವರು, ಇಲ್ಲದೆ ಹೋದರೆ ತಮ್ಮ ಆರೋಪಕ್ಕೆ ಸರ್ಕಾರಕ್ಕೆ ಸಾಕ್ಷಿ ಒದಗಿಸಲಿ ಎನ್ನುತ್ತಿದ್ದಾರೆ.

> **"ಬಿಜೆಪಿ ಅಧಿಕಾರದ ಅವಧಿಯಲ್ಲಿ ಶೇ.40ರಷ್ಟು ಲಂಚ ನಡೆಯುತ್ತಿದೆ ಎಂದು ಬೊಬ್ಬೆಯಾಯಿತು. ಈಗ ಕಾಂಗ್ರೆಸ್ ಏನು ಮಾಡುತ್ತಿದೆ. ಸಿಎಂ ಕಚೇರಿಯೇ ಭ್ರಷ್ಟಾಚಾರದ ಕೂಪವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿಧಾನಸಭೆಯಲ್ಲಿ ಆರೋಪ ಮಾಡಿದ್ದಾರೆ. ಈ ಸವಾಲನ್ನು ಸರ್ಕಾರ ಸ್ವೀಕರಿಸಿ, ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಮುಂದಾಗಲಿ. ಆದರೆ ಕುಮಾರಸ್ವಾಮಿ ಆರೋಪವೂ 'ಬ್ಲಾಕ್‌ಮೇಲ್' ತಂತ್ರ ಎಂಬಂತೆ ಕಾಣುತ್ತಿದೆ ಎನ್ನುವ ಆಡಳಿತ ಪಕ್ಷದವರು, ಇಲ್ಲದೆ ಹೋದರೆ ತಮ್ಮ ಆರೋಪಕ್ಕೆ ಸರ್ಕಾರಕ್ಕೆ ಸಾಕ್ಷಿ ಒದಗಿಸಲಿ ಎನ್ನುತ್ತಿದ್ದಾರೆ.**

ಕುಮಾರಸ್ವಾಮಿ ಆರೋಪಕ್ಕೆ ಅಷ್ಟೇನು ದೃಢವಾಗಿ ಬಿಜೆಪಿ ಬೆಂಬಲಿಸುತ್ತಿಲ್ಲ. ಮೊದಲು ಯಡಿಯೂರಪ್ಪ, ಕುಮಾರಸ್ವಾಮಿ ಮಾತಿನಲ್ಲಿ ಸತ್ಯವಿದೆ. ಅವರನ್ನು ಬಿಜೆಪಿ ಬೆಂಬಲಿಸಲಿದೆ ಎಂದರು. ನಂತರ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್, ಕುಮಾರಸ್ವಾಮಿ ಹೋರಾಟದ ಹಿಂದೆ ಬಿಜೆಪಿ ಇರಲಿದೆ ಎಂದರು. ಇನ್ನಾವ ನಾಯಕರು ಏಕೆ ಬೆಂಬಲಿಸುತ್ತಿಲ್ಲ ಎಂಬುದು ನಿಗೂಢವಾಗಿದೆ. ಏಕೆಂದರೆ ಒಂದರ ಮೇಲೊಂದರಂತೆ ಹಳೇ ಪ್ರಕರಣಗಳ ತನಿಖೆಗೆ ಕಾಂಗ್ರೆಸ್ ಮುಂದಾಗಿರುವುದು ಬಿಜೆಪಿಗೆ ಆತಂಕ ಹುಟ್ಟಿಸಿರಬಹುದು. ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸರಿಸಾಟಿಯಾಗಿ ನಿಲ್ಲುವ ಸಮರ್ಥ ನಾಯಕ ಅವರಲ್ಲಿ ಕಾಣುತ್ತಿಲ್ಲ.

ಆದರೂ ಕೆಲವು ರಾಜಕಾರಣಿಗಳದ್ದು **'ಹಿಟ್ ಅಂಡ್ ರನ್'** ಕೇಸ್ ಇದ್ದಂತೆ. ಇಲ್ಲವೇ ಅಗ್ಗದ ಪ್ರಚಾರಕ್ಕೆ ಅಡ್ಡಬಿದ್ದು ತಾವು ಬಲಿಷ್ಠ ನಾಯಕರೆಂದು ತಮ್ಮನ್ನು ತಾವೇ ಬಿಂಬಿಸಿಕೊಂಡು ಸರ್ಕಾರವನ್ನು 'ಕೈಗೊಂಬೆ' ಮಾಡಿಕೊಳ್ಳುವ ತಂತ್ರವೂ ಇರಬಹುದು. ಆದರೆ ಜನರೇನು ಮುಗ್ಧರಲ್ಲ. ಎಲ್ಲವನ್ನೂ ಅರ್ಥ ಮಾಡಿಕೊಳ್ಳುವ 'ಶಕ್ತಿ' ಅವರಿಗೂ ಇದೆ.

ಇನ್ನು ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ಕೆಲವು ದಿನಗಳು ವಿಳಂಬವಾದಾಗ ಬಿಜೆಪಿ, ಕಾಂಗ್ರೆಸ್ ನಾಯಕತ್ವವನ್ನು ಹೀಯಾಳಿಸಿದ್ದೇ ದೊಡ್ಡ ಸಾಧನೆಯಂತಾಗಿತ್ತು. ಆದರೀಗ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕನ ಆಯ್ಕೆಯೇ ನನೆಗುದಿಗೆ ಬಿದ್ದು, ಅದೇ ಶಿಸ್ತಿನ ಪಕ್ಷ ನಗೆಪಾಟಲಿಗೆ ಗುರಿಯಾಗಿರುವುದು ವಿಪರ್ಯಾಸ. ಪಕ್ಷದ ಅಧ್ಯಕ್ಷನ ಅವಧಿ ಮುಗಿದಿದ್ದರೂ ಬೇರೊಬ್ಬರ ಆಯ್ಕೆ ಬಿಜೆಪಿ ವರಿಷ್ಠರಿಗೆ ಸವಾಲಾಗಿದೆ. ವಿರೋಧ ಪಕ್ಷದ ನಾಯಕನೇ ಇಲ್ಲದೆ ಅಧಿವೇಶನ ನಡೆಯುತ್ತಿರುವುದು ಬಿಜೆಪಿಗೆ ತೀವ್ರ ಮುಖಭಂಗ ತರುವ ವಿಚಾರವಲ್ಲದೆ ಮತ್ತೇನು? ಪ್ರಪಂಚವನ್ನೇ ಸುತ್ತಿ ಜನಪ್ರಿಯ ಹಾಗೂ ಪ್ರಭಾವಿ ಪ್ರಧಾನಮಂತ್ರಿ ಎನಿಸಿಕೊಂಡಿರುವ ಮೋದಿ ಏಕೆ ಕಂಡೂ ಕಾಣದಂತೆ **'ಮೌನಿ ಬಾಬಾ'** ಆಗಿದ್ದಾರೆ ಎಂಬುದೇ ಆಶ್ಚರ್ಯ.

ಹೊಸ ಸರ್ಕಾರದ ಆಡಳಿತ ಟೇಕಾಫ್ ಆಗಲು ಅವಕಾಶ ಕೊಡಿ. ಅವರೂ ತಪ್ಪು ಮಾಡಲಿ. ಆಗ ಅದರ ವಿರುದ್ಧ ನಿಮ್ಮ ಬತ್ತಳಿಕೆಯಲ್ಲಿರುವ ಬಾಣ, ಬಿರುಸು ಪ್ರಯೋಗ ಮಾಡಿ, ಜನ ಆಗ ಮೆಚ್ಚುತ್ತಾರೆ. ಅದನ್ನು ಬಿಟ್ಟು ಹೇಳಿ–ಕೇಳಿ, ಹೊಸ ಸರ್ಕಾರದ ವಿಧಾನಮಂಡಲ ಮೊದಲ ಅಧಿವೇಶನ ನಡೆಯುತ್ತಿರುವಾಗ ಸದನದ ಒಳಗೆ–ಹೊರಗೆ ಧರಣಿ, ಪ್ರತಿಭಟನೆ ನಡೆಸುತ್ತಿರುವುದಕ್ಕೆ ಮತದಾರರ ಬೆಂಬಲ 'ಗ್ಯಾರಂಟಿ' ಸಿಕ್ಕುವುದಿಲ್ಲ. ಮನವರಿಕೆ ಮಾಡಿಕೊಳ್ಳಿರಿ. ಇನ್ನು ಸಕಾಲದಲ್ಲಿ ಮಳೆ ಬೆಳೆ ಆಗದೆ ರೈತ ಕಂಗಾಲಾಗಿರುವಾಗ ನಿಮ್ಮ ಚೆಲ್ಲಾಟವನ್ನು ಭಗವಂತನೂ ಮೆಚ್ಚುವುದಿಲ್ಲ.

ಛಲ ಬಿಡದೆ ನಿಮ್ಮ ಗುರಿ ತಲುಪಲು ಪ್ರಯತ್ನಿಸಿ

ಎಂಪವರ್ ಟಾಕ್ ಟ್ರೀಟ್ಮೆಂಟ್ ಸಂಸ್ಥಾಪಕ, ಯುವ ಉದ್ಯಮಿ ಕಿಶೋರ್ ರಾಚಯ್ಯ ವಿದ್ಯಾರ್ಥಿಗಳಿಗೆ ಕಿವಿಮಾತು



ಮೈಸೂರು, ಜು.5(ಎಂಕೆ)– ರಾಮಾಯಣದಲ್ಲಿ ಜಟಾಯು ರಾಮನ ಬರುವಿಕೆಗಾಗಿ ತನ್ನ ಜೀವ ಹಿಡಿದುಕೊಂಡು ಕುಳಿತ ಹಾಗೆ ಪತ್ರಿಕೋದ್ಯಮ ವಿದ್ಯಾರ್ಥಿಗಳಾದ ನೀವು ನಿಮ್ಮ ಗುರಿಯನ್ನು ಮುಟ್ಟಲು ಛಲ ಬಿಡದೆ ಪ್ರಯತ್ನಿಸಿ ಸಾಧಿಸಬೇಕು ಎಂದು ಎಂಪವರ್ ಟಾಕ್ ಟ್ರೀಟ್ಮೆಂಟ್ ಸಂಸ್ಥಾಪಕ, ಯುವ ಉದ್ಯಮಿ ಕಿಶೋರ್ ರಾಚಯ್ಯ ಹೇಳಿದರು.

ಮಾನಸಗಂಗೋತ್ರಿ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದಲ್ಲಿ ಬುಧವಾರ ಆಯೋಜಿಸಲಾಗಿದ್ದ 'ಜೀವನದಲ್ಲಿ ಗಮನ ಹರಿಸುವ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪತ್ರಿಕೋದ್ಯಮ ಕ್ಷೇತ್ರ ಎಂಬುದು ಅಷ್ಟು ಸುಲಭದ ಕೆಲಸವಲ್ಲ. ಈ ಕ್ಷೇತ್ರದಲ್ಲಿ ಸದಾ ಹೊಸತನ್ನು ಕಲಿಯುವುದರ ಜೊತೆಗೆ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಆದ್ದರಿಂದ ಪತ್ರಿಕೋದ್ಯಮ ವಿದ್ಯಾರ್ಥಿಗಳು ಯಾವುದೇ ಕೆಲಸ ಮಾಡುವಾಗ ಏಕಾಗ್ರತೆ ಇರಬೇಕು ಎಂದರು.

ನಿರ್ದಿಷ್ಟವಾದ ಗುರಿ ಮತ್ತು ಅದನ್ನು ಸಾಧಿಸುವ ಛಲ ಬಲವಾಗಿರಬೇಕು. ಪ್ರತಿ ಹಂತದಲ್ಲಿಯೂ ಉತ್ಸುಕತೆಯಿಂದ ಸವಾಲನ್ನು ಸ್ವೀಕರಿಸಬೇಕು. ನಿಮ್ಮ ಗುರಿ ತಲುಪಲು ಬೇಕಾದ ಸಮಯ ಅದರ ಮುಂದಿನ ಹಾದಿಯನ್ನು ಮೊದಲೇ ಕಂಡುಕೊಳ್ಳಬೇಕು. ಸಾಧಕರನ್ನೊಮ್ಮೆ ನೋಡಿ ಯಾರು ಕೂಡ ಸುಲಭವಾಗಿ ದೊಡ್ಡ ಸ್ಥಾನಕ್ಕೆ ಹೋಗಿಲ್ಲ. ಪ್ರತಿಯೊಬ್ಬರ ಸಾಧನೆಯ ಹಿಂದೆ ಕಠಿಣ ಪರಿಶ್ರಮ ಇದ್ದೇ ಇರುತ್ತದೆ. ಪ್ರಪಂಚದಲ್ಲಿ ಶೇ.95 ರಷ್ಟು ಜನರು ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ಇರುವುದರಿಂದ ಅವರು ಆಸೆಪಡುವುದೇ ಒಂದು, ಆಗಿರುವುದೇ ಮತ್ತೊಂದು. ಇರುವುದರಲ್ಲಿಯೇ ಖುಷಿಯಾಗಿ ಜೀವನವನ್ನು ಸಾಗಿಸುವ ಪ್ರಯತ್ನ ನಡೆಸುತ್ತಾರೆ. ಆದರೆ ಶೇ.5 ರಷ್ಟು ಜನರು ತಮ್ಮ ಕನಸಿನ ಹುಚ್ಚನ್ನು ಬಿಡದೆ ಇತಿಹಾಸವನ್ನು ರಚಿಸುತ್ತಾರೆ. ಅದೇ ರೀತಿ ನೀವು ಕೂಡ ಇತಿಹಾಸ ರಚಿಸುವ ಶೇ.5 ರಷ್ಟು ಜನರಲ್ಲಿ ಒಬ್ಬರಾಗಿರಬೇಕೇ ಹೊರತು ಶೇ.95 ರಷ್ಟರಲ್ಲಿರಬಾರದು ಎಂದು ಸಲಹೆ ನೀಡಿದರು.

ಜೀವನದಲ್ಲಿ ಏನಾದರೂ ಸಾಧಿಸಬೇಕಾದರೆ ಏನಾದರೂ ತ್ಯಾಗ ಮಾಡಬೇಕಾಗುತ್ತದೆ. ಅದೇ ರೀತಿ ನನ್ನ ಜೀವನದಲ್ಲಿ ಈ ಸ್ಥಾನಕ್ಕೆ ಬರೋದಕ್ಕೆ ನನ್ನ ಸ್ನೇಹಿತರನ್ನು ಮತ್ತು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಟೆನ್ನಿಸ್ ಕ್ರೀಡೆಯನ್ನು ತ್ಯಾಗ ಮಾಡಬೇಕಾಯಿತು. ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳುವುದರ ಜೊತೆಗೆ ತಾವು ಕಂಡ ಕನಸಿನ ಕಡೆ ನಡೆದು ಯಶಸ್ಸು ಸಾಧಿಸಬೇಕು ಎಂದು ತಿಳಿಸಿದರು. ವಿಭಾಗದ ಮುಖ್ಯಸ್ಥೆ ಡಾ.ಎಂ.ಎಸ್. ಸಪ್ನ, ಅತಿಥಿ ಉಪನ್ಯಾಸಕ ಡಾ.ರಾಕೇಶ್, ಸಂಶೋಧನಾ ವಿದ್ಯಾರ್ಥಿಗಳು, ಆಡಳಿತ ಸಿಬ್ಬಂದಿ ಉಪಸ್ಥಿತರಿದ್ದರು.

ಗೋಹತ್ಯೆ ನಿಷೇಧ ಕಾಯ್ದೆ: ಪರಿಷತ್‌ನಲ್ಲಿ ಕಾಂಗ್ರೆಸ್, ಬಿಜೆಪಿ ಜಟಾಪಟಿ

ಬೆಂಗಳೂರು: ವಿಧಾನಪರಿಷತ್ ಕಲಾಪದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ವಿಚಾರವಾಗಿ ಆಡಳಿತ ಪಕ್ಷ ಹಾಗೂ ವಿಪಕ್ಷ ಬಿಜೆಪಿ ನಡುವಿನ ಗದ್ದಲ ತಾರಕಕ್ಕೇರಿದ್ದು, ಬುಧವಾರ ಬಿಜೆಪಿ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ರವಿಕುಮಾರ್ ಗೋಹತ್ಯೆ ನಿಷೇಧ ಕಾಯ್ದೆ ರದ್ದುಪಡಿಸುವ ಪ್ರಸ್ತಾಪ ಇದೆಯೇ ಎಂದು ಪ್ರಶ್ನಿಸಿದ್ದಾರೆ. ಈ ವೇಳೆ ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಅಂತಹ ಪ್ರಸ್ತಾಪ ಈಗ ಸರ್ಕಾರದ ಮುಂದಿಲ್ಲ ಎಂದು ಉತ್ತರಿಸಿದರು. ಇದಕ್ಕೆ ಪ್ರತಿಯಾಗಿ ಮಾತನಾಡಿದ ರವಿಕುಮಾರ್, ಸಚಿವರು ಈಗ ಈ ಉತ್ತರ ನೀಡಿದ್ದಾರೆ. ಆದರೆ ಜೂ.3 ರಂದು ಮೈಸೂರಿನಲ್ಲಿ ಎಮ್ಮೆ ಕೋಣ ಕಡಿಯುವುದಾದರೆ ಗೋವುಗಳನ್ನು ಯಾಕೆ ಕಡಿಯಬಾರದು ಎಂದು ಅವರೇ ಹೇಳಿಕೆ ಕೊಟ್ಟಿದ್ದಾರೆ. ಈಗ ಪ್ರಸ್ತಾಪ ಇಲ್ಲ ಎನ್ನುವ ಉತ್ತರ ನೀಡಿದ್ದಾರೆ ನಮಗೆ ಈ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು. ನಂತರ ಗೋಹತ್ಯೆಗೆ ಕ್ರಮ ವಹಿಸುವ ವಿಚಾರದ ಕುರಿತು ಸ್ಪಷ್ಟ ಉತ್ತರಕ್ಕೆ ಆಗ್ರಹಿಸಿ ಬಿಜೆಪಿ ನಾಯಕರು ಸದನದ ಬಾವಿಗಿಳಿದು ಧರಣಿ ನಡೆಸಿದರು.

ಮಾನಸ ಗಂಗೋತ್ರಿಯ ಪುರುಷರ ಹಾಸ್ಟೆಲ್‌ಗಳಿಗೆ ಮೂಲ ಸೌಲಭ್ಯ ಕಲ್ಪಿಸಲು ಆಗ್ರಹಿಸಿ

ಮೈಸೂರು ವಿವಿ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು,ಜು.5(ಪಿಎಂ)– ಮೈಸೂರು ವಿವಿಯ ಮಾನಸ ಗಂಗೋತ್ರಿಯ ಸ್ನಾತಕೋತ್ತರ ಪದವಿಯ ಪುರುಷರ ಹಾಸ್ಟೆಲ್‌ಗಳಿಗೆ ಸಮರ್ಪಕ ಮೂಲ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಒತ್ತಾಯಿಸಿ ವಿವಿಯ ದಲಿತ ವಿದ್ಯಾರ್ಥಿ ಒಕ್ಕೂಟದ ನೇತೃತ್ವದಲ್ಲಿ ವಿದ್ಯಾರ್ಥಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ಮಾನಸ ಗಂಗೋತ್ರಿಯ ಕ್ಲಾಕ್ ಟವರ್ ಸಮೀಪ ಜಮಾಯಿಸಿದ ಪ್ರತಿಭಟನಾಕಾರರು, ಗಂಗೋತ್ರಿ ಆವರಣದಲ್ಲಿನ ಸ್ನಾತಕೋತ್ತರ ಪದವಿಯ ಪುರುಷರ ಹಾಸ್ಟೆಲ್‌ಗಳಲ್ಲಿ ಸಮರ್ಪಕ ಮೂಲಭೂತ ಸೌಲಭ್ಯಗಳಿಲ್ಲ. ಇಲ್ಲಿನ ಬ್ಲಾಕ್ 1, ಬ್ಲಾಕ್ 2 ಮತ್ತು ಬ್ಲಾಕ್ 3ರ ಹಾಸ್ಟೆಲ್‌ಗಳಲ್ಲಿ ಕುಡಿಯುವ ನೀರೂ ಇಲ್ಲದೇ ವಿದ್ಯಾರ್ಥಿಗಳು ಪರದಾಡುತ್ತಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರ ನೀಡುತ್ತಿಲ್ಲ. ಸಮಸ್ಯೆಗಳನ್ನು ಪರಿಹರಿಸಲು ಹಲವು ಬಾರಿ ವಿವಿ ಆಡಳಿತಕ್ಕೆ ಮನವಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ. ವಿದ್ಯಾರ್ಥಿಗಳು ಕೇಳುವ ಕನಿಷ್ಠ ಮೂಲ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಮೈಸೂರು ವಿವಿ ವಿಫಲವಾಗಿದೆ. ಮಾನಸ ಗಂಗೋತ್ರಿ ಆವರಣದ ರಸ್ತೆಗಳಲ್ಲಿ ಬೀದಿ ದೀಪಗಳ ಕೊರತೆ ಇದ್ದು, ರಾತ್ರಿಯ ವೇಳೆಯಲ್ಲಿ ಮೊಬೈಲ್ ಟಾರ್ಚ್ ಹಿಡಿದು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರ, ಕುಡಿಯುವ ನೀರಿನ ಘಟಕಗಳ ಸ್ಥಾಪನೆ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸಬೇಕು. ಇಲ್ಲವಾದರೆ ಸಾರ್ವಜನಿಕರಿಂದ 1 ರೂ. ದೇಣಿಗೆ ಸಂಗ್ರಹಿಸಿ ವಿವಿಗೆ ನೀಡುವ ಚಳವಳಿ ಆರಂಭಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಒಕ್ಕೂಟದ ಅಧ್ಯಕ್ಷ ಬಿ.ಆರ್.ಪರಂಜ್ಯೋತಿ, ಗೌರವಾಧ್ಯಕ್ಷ ಗೌತಮ್ ಮೌರ್ಯ, ಕಾರ್ಯಾಧ್ಯಕ್ಷ ಕಿರಣ್‌ಮೌರ್ಯ, ಪದಾಧಿಕಾರಿಗಳಾದ ರೋಹನ್, ಹೃತಿಕ್, ಹೆಚ್.ಎಂ.ಪ್ರೀತಮ್, ಚಿರಂಜೀವಿ, ಕಿರಣ್, ಚೌಡಪ್ಪ, ನಂದೀಶ್ ಗಾಗೇನಹಳ್ಳಿ ಸೇರಿದಂತೆ ಹಲವು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಾಂಗ್ರೆಸ್ ಖಾತರಿಗಳ ಅನುಷ್ಠಾನದ ಮೇಲಿನ ಚರ್ಚೆಗೆ ಸ್ಪೀಕರ್ ಸಮಯ ನಿಗದಿ: ಪ್ರತಿಭಟನೆ ಹಿಂತೆಗೆದುಕೊಂಡ ಬಿಜೆಪಿ

ಬೆಂಗಳೂರು: ಕಾಂಗ್ರೆಸ್‌ನ ಐದು 'ಖಾತರಿ'ಗಳ ಅನುಷ್ಠಾನ ಕುರಿತಂತೆ ಚರ್ಚೆಗೆ ಅವಕಾಶ ನೀಡುವಂತೆ ಒತ್ತಾಯಿಸುತ್ತಿದ್ದ ಬಿಜೆಪಿ, ಸ್ಪೀಕರ್ ಯುಟಿ ಖಾದರ್ ತಮ್ಮ ಸಮಸ್ಯೆಯನ್ನು ಪ್ರಸ್ತಾಪಿಸಲು ಶೂನ್ಯವೇಳೆ ಬಳಿಕ ಸಮಯ ನೀಡಿದ್ದರಿಂದ ತನ್ನ ಪ್ರತಿಭಟನೆಯನ್ನು ಹಿಂತೆಗೆದುಕೊಂಡಿತು. ಕಾಂಗ್ರೆಸ್ ನೀಡಿರುವ ಯಾವ ಖಾತರಿಗಳನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ಈ ಬಗ್ಗೆ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿ ನೋಟಿಸ್ ನೀಡಿದ್ದೇವೆ. ಪ್ರಶ್ನೋತ್ತರ ಕಲಾಪವನ್ನು ಬದಿಗೊತ್ತಿ ಈ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ನೀಡಬೇಕು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆರ್. ಅಶೋಕ್ ಆಗ್ರಹಿಸಿದರು. ನಿಯಮಗಳ ಪ್ರಕಾರ, ಪ್ರಶ್ನೋತ್ತರ, ಶೂನ್ಯವೇಳೆಯ ಬಳಿಕವೇ ಚರ್ಚೆಗೆ ಅವಕಾಶ ನೀಡಲು ಸಾಧ್ಯ. ಪ್ರಶ್ನೋತ್ತರಕ್ಕೆ ಸಹಕರಿಸಿ ಎಂದು ಸಭಾಧ್ಯಕ್ಷರು ಮನವಿ ಮಾಡಿದರು. ಇದು ಮಂಗಳವಾರ ಕಲಾಪಕ್ಕೆ ಅಡ್ಡಿಯುಂಟಾಯಿತು. ಅಲ್ಲದೆ, ಆಡಳಿತ ಮತ್ತು ವಿಪಕ್ಷಗಳ ಸದಸ್ಯರ ನಡುವೆ ಕೋಲಾಹಲಕ್ಕೆ ಕಾರಣವಾಯಿತು. ಈ ವಿಷಯದ ಬಗ್ಗೆ ಚರ್ಚೆ ನಡೆಸಬೇಕು ಎಂಬ ತಮ್ಮ ಬೇಡಿಕೆಗೆ ಬಿಜೆಪಿ ಸದಸ್ಯರು ಪಟ್ಟು ಹಿಡಿದರು.ಬೆಳಗ್ಗೆ ಕಲಾಪ ಆರಂಭವಾದ ಕೂಡಲೇ ಬಿಜೆಪಿ ಶಾಸಕರು ಈ ವಿಷಯದ ಬಗ್ಗೆ ಚರ್ಚೆಗೆ ಕಾಲಾವಕಾಶ ಕೋರಿದರು. ಬಳಿಕ ಶೂನ್ಯವೇಳೆ ನಂತರ ಸಮಯಾವಕಾಶ ನೀಡಲು ಸ್ಪೀಕರ್ ಯುಟಿ ಖಾದರ್ ಒಪ್ಪಿಗೆ ಸೂಚಿಸಿದ ಬಳಿಕ ಬಿಜೆಪಿ ಪ್ರತಿಭಟನೆ ಹಿಂಪಡೆದಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ನೆಕ್ಸ್ ಮಾಲ್ (Nexus Mall) ಮೈಸೂರಿನಲ್ಲಿರುವ ಜಾಕಿ (Jockey) ಶೋರೂಂನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC & ಮೇಲ್ಪಟ್ಟು
ಉತ್ತಮ ವೇತನ ಸೌಲಭ್ಯವಿರುತ್ತದೆ.
ವಯೋಮಿತಿ 18–30 ವರ್ಷ
8431588337

ಬೇಕಾಗಿದ್ದಾರೆ
ವಾಣಿ ವಿಲಾಸ ಮೊಹಲ್ಲಾ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ. ನಂ.1789, ಹಂಪಿ ವೃತ್ತ, 2ನೇ ಹಂತ, ಹೆಬ್ಬಾಳ್ (ವಿಜಯನಗರ), ಮೈಸೂರು–570017
ಮೇಲ್ಕಂಡ ಸಂಘದಲ್ಲಿ ಈ ಕೆಳಕಂಡ ಹುದ್ದೆ ಖಾಲಿ ಇದ್ದು ಆಸಕ್ತಿಯುಳ್ಳವರು ತಮ್ಮ ಸ್ವ ವಿವರಗಳೊಂದಿಗೆ ಬೆಳಿಗ್ಗೆ 11 ಗಂಟೆಯಿಂದ 12 ಗಂಟೆಯೊಳಗೆ ಅರ್ಜಿಯನ್ನು ಖುದ್ದಾಗಿ ಸಲ್ಲಿಸಬಹುದಾಗಿರುತ್ತದೆ. (10 ದಿನಗಳೊಳಗೆ)
1) ಕಾರ್ಯದರ್ಶಿ –01
ಸಹಿ/– ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ, ಹೆಚ್.ಸಿ. ಚೇತನ್‌ಕುಮಾರ್.
ಅಧ್ಯಕ್ಷರು: 9900159020

ಬಾಡಿಗೆಗೆ ಇದೆ
ಇರ್ವಿನ್ ರಸ್ತೆಯಲ್ಲಿ ಅಂಗಡಿ ಬಾಡಿಗೆಗೆ ಇದೆ
9353400182

NEW HOUSE FOR SALE
30X40, W/F Muda Approved 3 BHK Duplex House for Sale at BEML Srinagar, Mysore
Price : 1.25 Crore (Nego.)
9606294999

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್/ಪಾಸ್
ಊಟ ವಸತಿ ದೊರೆಯುತ್ತದೆ
9110455297|9591557126

WANTED
Active Business Parterns in Mysore
Good Profit Margin
9353804928
8123178701

ಸೈಟು ಮಾರಾಟಕ್ಕಿದೆ
30x50 North Face
KHB ಹುಣಸೂರು
ಮುಖ್ಯ ರಸ್ತೆ, ಹುಣಸೂರು
(ಅಗ್ನಿ ಶಾಮಕ ಕಚೇರಿ ಪಕ್ಕ)
9886467337
9886519052

ಸುವರ್ಣ ಯಾತ್ರ
ಗುಜರಾತ್ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 8 ದಿನಗಳು 11/08/23. ಮಧ್ಯಪ್ರದೇಶ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 4 ದಿನಗಳು 12/08/23 ಶಿರಡಿ ಪ್ರವಾಸ 3 ಜ್ಯೋತಿರ್ಲಿಂಗ ಸೇರಿ 3 ದಿನಗಳು 18/08/23, ಪುರಿ ಭುವನೇಶ್ವರ ಶಕ್ತಿಪೀಠ 4 ದಿನಗಳು 18/08/23.
9008381022,9019462508

ಹೋಲ್‌ಸೇಲ್ ದರದಲ್ಲಿ

ಜೀವಂತ ನಾಟಿ ಕೋಳಿ ಕೆ.ಜಿ.
ರೂ. 260, ರೂ. 350,
ರೂ. 580
ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪಿ.ಕೆ.ಟಿ ಕ್ವಾಟ್ರಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ, ಎನ್.ಆರ್. ಮೊಹಲ್ಲಾ, ಮೈಸೂರು–570 007
9448048576, 9632378020

ಮಂಟಪ ಮನೆ

ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

WANTED
1) Structural Design Engineer (Civil M.Tech)
2) Architects (B.Arch/D.Arch)
3) Receptionist & Accountant (Any Degree)
4) Civil Material Testing Engineer
195/B, 17th Main, 13th Cross, Saraswathipuram, Mysore.
9945621188 / 9916266181

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

SITE FOR SALE 30X50
East Facing Rs.1,500/- Per Sq.ft opp. St. Thomas Convent
Ready for construction
Location : Jayanagara Town
H.D.Kote Road, Mysore
9008794218
9945546438
Broker Excuse

HOUSE FOR SALE
30x40 West Face Site, North Face Door, Newly Constructed G+2, Dattagalli, Somanathanagar, Mysore
9900251194

WANTED
CCTV Technicians
1-2 years experience
CCTV Installation, Service. Two-wheeler must.
Salary: 12K + PF + ESI.
9972798765, 9880547385

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM™ 10yrs WARRANTY
CALL 99012 91267
98454 26862

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

100% TEAK WOOD FACTORY FINISH DOORS
@ DEPOT RATES

10YEARS WARRANTY
www.ssbuildmart.com
9901291267
9845426862

ಬೇಕಾಗಿದ್ದಾರೆ
ಹನುಮಂತು ಹೋಟೆಲ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಬಳ: 10000 ರಿಂದ 12000, ಬಿ.ಎನ್.ಸ್ಟ್ರೀಟ್, ಮಾರ್ಕೆಟ್ ಬಿಲ್ಡಿಂಗ್, ಮಂಡಿಮೊಹಲ್ಲಾ, ಮೈಸೂರು ಸಂದರ್ಶನಕ್ಕೆ
30.5.2023 ರಿಂದ 9.6.2023ರವರೆಗೆ
ಸಂಪರ್ಕಿಸಿ:
9611431188

ಮಾರಾಟಕ್ಕಿದೆ
ಕುವೆಂಪುನಗರದ ಸರ್ವೋದಯ ರಸ್ತೆ, 11ನೇ ತಿರುವು, ಸೈಟ್ ನಂ. HIG-3 ರಲ್ಲಿ, ಹರಾಜು ನಿವೇಶನ (ಉ.ರಸ್ತೆ, ದ.ರಸ್ತೆ, ಪೂ.ಮನೆ, ಪ-H T ಪಾರ್ಕ್) ಮಾರಾಟಕ್ಕಿದೆ
ಸಂಪರ್ಕಿಸಿ: ನಟರಾಜು ಯು ಕೆ.
9448246396

ತಕ್ಷಣವೇ ಬೇಕಾಗಿದ್ದಾರೆ
ಪ್ರತಿಷ್ಠಿತ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಹುದ್ದೆ: 1. ಸೇಲ್ಸ್ ಮ್ಯಾನೇಜರ್
2. ಟೆಲಿಸೇಲ್ಸ್ ಎಕ್ಸಿಕ್ಯೂಟಿವ್
ಅನುಭವ : Fresher @ Experince
ಸಂಬಳ: ಆಕರ್ಷಕ ಸಂಬಳ ಜೊತೆಗೆ ಇನ್ಸೆಂಟಿವ್ಸ್
ವಿದ್ಯಾರ್ಹತೆ : SSLC to Any Degree
8050923846
08214255550

WANTED
Required candidates for Loan Consultant Office. Freshers @ experience. Female: 01 No. Office work. Male: 03 Nos. Marketing Executives (Two wheeler mandatory). 10K to 12K + Incentive. Agrahara
9110818681, 9606062114

WANTED
Hostel Warden, PE, NST, Mathematics and English teaching staff for reputed institution.
Send your resume through WhatsApp / Message. Contact:
8971577685, 9980631121

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

Document Lost
I, Naseema Jan, Door No. 429, Beedi Colony, Azeez Sait Nagar, Mysore-570 019, have lost my house agreement papers at the time of shifting the house.
Finders please contact:
Mob: 9945177986

WANTED
Accountant
Qualification: B.Com.
Male candidates only.
Age below 30 years.
Vijayanagara.
Mob: 63632 64048

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಕೆಲಸಗಾರರು ಬೇಕಾಗಿದ್ದಾರೆ.
1. ಅಡುಗೆ ಭಟ್ಟರು – 1
2. ಕ್ಯಾಪ್ಟನ್ –3
3. ಆಲ್ ರೌಂಡರ್ – 2
ಅನುಭವ ಉಳ್ಳವರಿಗೆ ಮೊದಲ ಆದ್ಯತೆ.
9538144354
9743162417

ಹೆಸರು ಬದಲಾವಣೆ
ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಹನಗೋಡು ಹೋಬಳಿ, ಉಮ್ಮತ್ತೂರು ಅಂಚೆ, ಒಂಡನೇ ಪಕ್ಷಿರಾಜಪುರ ಗ್ರಾಮದಲ್ಲಿ ವಾಸವಾಗಿರುವ ಲೇಟ್. ಪರಂಚರಿ ರವರ ಮಗ 46 ವರ್ಷ ವಯಸ್ಸಿನ ಸೋಬಾಬು ಆದ ನಾನು ನನ್ನ ಸ್ವ ಇಚ್ಛೆಯಿಂದ ನನ್ನ ಹೆಸರನ್ನು ಹುಣಸೂರು ನೋಟರಿ ವಕೀಲರಾದ ಶ್ರೀ ಹೆಚ್.ದಿನೇಶ್ ರವರ ಸಮಕ್ಷಮದಲ್ಲಿ ಸೋಬಾಬು ಎಂಬ ಹೆಸರಿನಿಂದ ಸೋಬಾಬು ಪರಂಚರಿ ಎಂದು ಬದಲಾವಣೆ ಮಾಡಿಕೊಂಡಿರುತ್ತೇನೆ.
ಸಹಿ/– ಸೋಬಾಬು ಪರಂಚರಿ

Document Lost
Pushpa, No. 941, EWS, 4th Cross, Triveni Circle, Kalayanagiri, Mysore-570 019, have lost my possession deed No. EWS 941, HUDCO House Sl. No. 3838 Ward No. 34 APP No. 16422 in travelling.
Finders please contact:
Mob: 8884771687

ಬೇಕಾಗಿದ್ದಾರೆ
ಮನೆಗೆ ಬಂದು ಟ್ಯೂಷನ್ ಹೇಳಿ ಕೊಡುವ ಟೀಚರ್ ಬೇಕಾಗಿದ್ದಾರೆ.
2nd Standard ಒಬ್ಬ ವಿದ್ಯಾರ್ಥಿಗೆ ಹಾಗೂ Receptionist ಬೇಕಾಗಿದ್ದಾರೆ. ಸ್ಥಳ: ಮೈಸೂರು.
Mob: 9945779995

WANTED
Service Engineer's
Dip-in-CS / IS, knowledge of H/N, Trouble Shooting, Printer Services - 2-3 years experience. Salary: 15K + PF + ESI. 2-wheeler must.
9972798765, 9880547385

Old Age Home
We provide Veg. Food, Medical, Nursing service with accommodation to the senior citizens / bedridden at reasonable cost at our centre in Mysore. *Contact:*
Mob: 9880102700

WE ARE HIRING...!
Walk-in interview
Minimum Graduation, fresher and experienced Sales Manager, age between 25 to 40 years. Salary 18000 to upto 35,000 PM plus incentives & other perks. Type-Full time employees. Experience: 1-3 years. Location: Mysore. Contact:
9845210772, 8976970243

ಲಿಂಗಾಯಿತ ವಧು ಬೇಕಾಗಿದೆ(2ನೇ ವರ)
ಮೈಸೂರು ಮೂಲದ ವರ ವಿಚ್ಛೇದಿತ, ವಿಧುರ, 42 ವರ್ಷದ ಮಕ್ಕಳಿಲ್ಲ ಉತ್ತಮ ದೇಹದಾರ್ಢ್ಯ ಹೊಂದಿರುವ, ವಿದ್ಯಾವಂತ ವೀರಶೈವ–ಲಿಂಗಾಯತ ಆರೋಗ್ಯವಂತ 5.7" ಸ್ವ–ಉದ್ಯೋಗಿ 2ನೇ ವರನಿಗೆ ಲಿಂಗಾಯತ ಮತ್ತು ಯಾವುದೇ ಸಸ್ಯಾಹಾರಿ ಪಂಗಡಕ್ಕೆ ಸೇರಿದ ಆರೋಗ್ಯವಂತ ಹೆಣ್ಣುಮಗಳು ತಕ್ಷಣ ಬೇಕಾಗಿದೆ. ವರ ಅನುಕೂಲಸ್ಥ ಮಧ್ಯಮವರ್ಗ ನೇರ ಮಾತುಕತೆಗೆ ಒತ್ತು, ಮುಖ್ಯ ಅಡೆತಡೆಯಿಲ್ಲ ಭದ್ರತೆಗೆ ಯೋಚಿಸುವಂತಿಲ್ಲ. ವಿರ್ವಾಡಿದೆ. ಸಂಸಾರದಲ್ಲಿ ಹೊಂದಿಕೊಂಡು ಹೋಗುವವರು ಬೇಕಾಗಿದ್ದಾರೆ. ಮದುವೆ ಶೀಘ್ರ, ಇತ್ತೀಚಿನ ವರ್ಣರಂಜಿತ ಭಾವಚಿತ್ರ–ವಿವರ ಕಳುಹಿಸಿ
ವಾಟ್ಸ್‌ಆಪ್ 9342125252

ಗ್ಯಾಸ್ ಪೈಪ್‌ಲೈನಿಂಗ್
ಕಾಪರ್ ಪೈಪ್ – 120/- per.ft
ಗ್ಯಾಸ್ ಗೀಜರ್ – 2999/-
3 ಬರ್ನರ್ ಗ್ಯಾಸ್‌ಸ್ಟೌವ್ – 2999/-
ಚಿಮಿನಿ – 7999/-
ಸೇಲ್ಸ್ & ಸರ್ವಿಸ್ ಲಭ್ಯ
8088888115
22 ವರ್ಷಗಳ ಅನುಭವ

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER
Mob: 9036984793
ಪಂಡಿತ್: ಕೆ.ಎಸ್. ಪಣಿಕ್ಕರ್ (ಕೇರಳ)
ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ಎಸ್ ಕುಮಾರ್, (ಕೊಳ್ಳೇಗಾಲ)
ಇವರು ಕೇರಳದ ಕುಟ್ಟಿಚಾತನ್ ಕೊಳ್ಳೇಗಾಲದ ಕುಳ್ಳಚೌಡಿ ಅಘೋಚರ ಶಕ್ತಿಯಿಂದ, ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ. ಪರಿಹಾರ ತಿಳಿಸುತ್ತಾರೆ.
ಖಾಯಂ ವಿಳಾಸ: ಪಡುವಾರಹಳ್ಳಿ ಸಿಗ್ನಲ್, ಭೂದೇವಿ ಫಾರ್ಮ್ ಎದುರು, ವಿನೋಬ ರಸ್ತೆ, ಮೈಸೂರು–570006

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಅಕೌಂಟೆಂಟ್ ಬೇಕಾಗಿದ್ದಾರೆ. ಮಹಿಳೆಯರಿಗೆ ಮಾತ್ರ ಆದ್ಯತೆ. ಆಕರ್ಷಕ ವೇತನ ದೊರೆಯುತ್ತದೆ
8892258814

HOUSE FOR SALE
36x58, Rs. 1.5 Cr (Negotiable)
Karunapura N.R.Mohalla, Mysore-570007
8073125665

HOUSE FOR RENT
3 BHK, 1st Floor, Opposite to Gayatri Samudaya Bhavan, 1st Cross, Bandhigowda Layout, Mandya. Contact:
Mob: 9886022449

ಕಳೆದಿದೆ
ಪ್ರೇಮ. ಪಿ, ನಂ. 172, 2ನೇ ಕ್ರಾಸ್, ಕುರಿಮಂಡಿ ಕೆಸರೆ, ಮೈಸೂರು. ದಿನಾಂಕ 29–6–2023 ರಂದು ಕುರಿಮಂಡಿ ರಸ್ತೆಯಲ್ಲಿ, ಜೆರಾಕ್ಸ್ ಮಾಡಿಸಲು ಹೋದಾಗ ಮನೆ ನಂ. 172, 2ನೇ ಕ್ರಾಸ್, ಕುರಿಮಂಡಿ ಕೆಸರೆ, ಮೈಸೂರು ನಗರದ ಮನೆಯ ಮಂಜೂರಾತಿ ಪತ್ರ, ಸ್ವಾಧೀನ ಪತ್ರ ಹಾಗೂ ಕ್ರಯ ಪತ್ರ ಹಾಗೂ ಮನೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 08553653040

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

V-GUARD GEYSER

BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
27/7–ಪಂಡರಾಪುರ, ಶನಿಸಿಂಗನಾಪುರ, ಔರಂಗಬಾದ್, ಎಲ್ಲೋರಾ, ಘೃಷ್ಣೇಶ್ವರ, ಶಿರಡಿ, ನಾಸಿಕ, ತ್ರ್ಯಂಬಕೇಶ್ವರ, ಭೀಮಾಶಂಕರ್, ತುಳಜಾಭವಾನಿ, ಸೋಲಾಪುರ. 18/7–ಪುರಿ ಜಗನ್ನಾಥ್, ಕೊನಾರ್ಕ್, ಚಂದ್ರಭಾಗ್ ಬೀಚ್, 10/8, ನೇಪಾಳ್, ಮುಕ್ತಿನಾಥ್, ಪಶುಪತಿನಾಥ್, 1/9–ಚಾರ್‌ಧಾಮ್ ಯಾತ್ರಾ–ಕೇದಾರನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ
9591017782,9964527782

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಡೆಲಿವರಿ ಬಾಯ್ ಕೆಲಸಕ್ಕೆ SSLC / PUC ಮಾಡಿರುವ, 25 ವರ್ಷದೊಳಗಿನ ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಹೊಂದಿರುವ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
8073393505

CHANGE OF NAME
I, SUDEEP residing at # 876/6, V.V.Road, Lakshmipuram, Mysuru-570004. have changed my name to M.G.Sudeep vide affidavit sworn before Notary Narasegowda, Mysore. Dated : 28-06-2023 Henceforth in all records deeds, writings & in all my future correspondence I will use my name as M.G. SUDEEP.
Sd/- M.G. Sudeep

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಿ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಹತ್ತಿರ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.



ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ.
ಡಾ. ಗುರೂಜಿ
9448229184
7899625268

ಸೆಕ್ಯೂರಿಟಿಗಾರ್ಡ್ ಬೇಕಾಗಿದ್ದಾರೆ
ಮೈಸೂರು ನಗರದ ಬಂಬೂ ಬಜಾರ್, ದೇವೇಗೌಡ ಸರ್ಕಲ್ (ಬನ್ನೂರ್ ರಸ್ತೆ), ಕೇರ್ಗಳ್ಳಿ, ಹೂಟಗಳ್ಳಿ ಹಾಗೂ ಹೆಚ್.ಡಿ.ಕೋಟೆ ರಸ್ತೆ, (ಉದ್ಬೂರು ಹತ್ತಿರ) ಮತ್ತು ಹಾವೇರಿ ಜಿಲ್ಲೆಯಲ್ಲಿ (ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ.) ಓದು ಬರಹ ತಿಳಿದವರು ಕೆಲಸ ಮಾಡಲು ಬೇಕಾಗಿದ್ದಾರೆ.
9035050653
9035050656

(30X40) SALE
@ "OLIVE ENCLAVE"
Mys-B'lore High way
3KM From Columbia Hospital
25 Lakhs
9538839926

AFFIDAVIT
I, KEWAL S/o Ravi Deshapande residing at No.61, Banashankari Nilaya, Basaveshwara Nagara, Mysore-570022 do solemnly affirm and state on oath before Notary S. Kamala Mysore dated 30-6-2023 That in all my daughter's records such as Birth Certificate Aadhar Card and School records my Daughter name mentioned as NIHIRA DESHPANDE and in Passports my Daughter name mentioned as NIHIRA KEWAL DESHPANDE instead of NIHIRA DESHPANDE.

ಬೇಕಾಗಿದ್ದಾರೆ
ಬೆಂಗಳೂರಿನ ಕಾರ್ ವಾಷಿಂಗ್ ಸೆಂಟರ್‌ಗೆ ಯುವಕರು ಬೇಕಾಗಿದ್ದಾರೆ. ವಿದ್ಯಾರ್ಹತೆ ಬೇಕಿಲ್ಲ. ಉಚಿತ ವಸತಿ, ಊಟ
9483181835
9590966699

ಸೈಟು ಬೇಕಾಗಿದೆ
60x40 ಅಳತೆಯ ಸೈಟು ಗೋಕುಲಂ, ಜಯಲಕ್ಷ್ಮೀಪುರಂ, ವಿ.ವಿ.ಮೊಹಲ್ಲಾ, ಯಾದವಗಿರಿಯ ಸುತ್ತಮುತ್ತ ಬೇಕಾಗಿದೆ.
(ಮಧ್ಯವರ್ತಿಗಳು ಕ್ಷಮಿಸಿ)
9880504810
9845087670

INDIRA ACADEMY
We offer coaching for the following Competitive Exam
1. Bank exam. 2 MBA entrance
3. GRE 4.UPSC
5. Railway & PSI exam and
6. Other competitive exams.
We also provide Food and Accomodation for the needy. Graduates or Undergraduates may call
9600377104
& Enroll Immediately.

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ.
* Two Wheeler Technician
(ದ್ವಿಚಕ್ರವಾಹನದ ಮೆಕಾನಿಕ್)
ಕೂಡಲೇ ಸಂಪರ್ಕಿಸಿ
8494924745

S.B.R CONSTRUCTION
20X40 North Face no.2
Site + House 41 Lakhs
20x30 East Face No.3
Site + house - 32 Lakhs
Loan Available A Khata Form-3
Prime Location Sathagalli
Near Presentation School
9900840025

100% Job
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 14,500 ರಿಂದ 39,000/- (ESI+PF+OT) ಸೇರಿ. ಷರತ್ತು ಅನ್ವಯ
9036548905,9035143190

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ.
ಸಂಬಳ: 12000 ದಿಂದ 18000
8050699742

ಮನೆಯಿಂದಲೇ ಕೆಲಸ
ನಿಮ್ಮ ಬಿಡುವಿನ ವೇಳೆಯಲ್ಲಿ ಯಾವುದೇ ಟಾರ್ಗೆಟ್ ಇಲ್ಲದೇ ರೈಟಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್ ನಂಬರ್ ಫಿಲ್ಲಿಂಗ್ ಕೆಲಸ ಮಾಡಿ ಗಳಿಸಿ ತಿಂಗಳಿಗೆ 15000/– ದಿಂದ 26000/–
ಪ್ರೀತಿ: 8660676857
6362566872

ತರಬೇತಿ
ಟೈಲರಿಂಗ್ ಸ್ಯಾರಿ ಕುಚ್ಚು ಎಂಬ್ರಾಯಡರಿ, ಝರಿ ಮತ್ತು ಬ್ಯೂಟಿಕ್ ತರಬೇತಿಯೊಂದಿಗೆ ಪ್ರಮಾಣ ಪತ್ರ ನೀಡಲಾಗುತ್ತದೆ.
2ನೇ ಹಂತ, ಹೆಬ್ಬಾಳ್, ಮೈಸೂರು
7019439180

ಬೇಕಾಗಿದ್ದಾರೆ
ಪುರುಷರು ಹೆಲ್ಪರ್ ಕೆಲಸಕ್ಕೆ (ಫೀಡ್ ಫ್ಯಾಕ್ಟರಿ) ವಯಸ್ಸು 18 ರಿಂದ 45, 8 Hrs Duty
3 Shift Week off ಹಾಗೂ ಇರುತ್ತದೆ.
ಸಂಬಳ. ESI, PF ಒಳಗೊಂಡು 18000/-
ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಬಂದು ಭೇಟಿ ಮಾಡತಕ್ಕದ್ದು. ಯಾವುದೇ ಶುಲ್ಕ ಇರುವುದಿಲ್ಲ.
ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು
9986874574

ಜಮೀನು ಮಾರಾಟಕ್ಕಿದೆ
ಮೈಸೂರು ತಾ|| ಜಯಪುರ ಹೋ|| ಮತ್ತು ಹಂಪಾಪುರ ಹೋ|| ಗದ್ದಿಗೆ ಮುಖ್ಯ ರಸ್ತೆಯಲ್ಲಿ 1 ಎಕರೆ 30 ಗುಂಟೆ, 1 ಎಕರೆ 20 ಗುಂಟೆ & 1 ಎಕರೆ 28 ಗುಂಟೆ ಹಾಗೂ 32 ಗುಂಟೆ ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿವೆ
8618848886
9945661696

SITE FOR SALE
30x50 west Facing
Behind Sri Ranga Enclave Bannur Road, Mysore
6364682868

BEAUTICIAN COURSE
Shree Ganga Charitable Trust (R) ಮತ್ತು KVIC ಇವರ ಸಂಯುಕ್ತ ಆಶ್ರಯದಲ್ಲಿ 30 ದಿವಸಗಳ Beautician Course ಕೊಡಲಾಗುವುದು.
* Proffesional Trainer
* Certification by Govt of India
* 30% to 45% Subsidy Loan for Startup
* 100% Loan Assist.
7809978088

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ B.Com, ITI, 8th to 2nd PUC ವರೆಗೆ. ಊಟ ವಸತಿ ESI & PF ಸೌಲಭ್ಯವಿರುತ್ತದೆ ಸಂಬಳ 11400 to 18000 ಇರುತ್ತದೆ.
8951869646
9008819487

WANTED
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ 10,000/- ರಿಂದ 12,000/- PM
9945116969

ಕೆಲಸಕ್ಕೆ ಬೇಕಾಗಿದ್ದಾರೆ
ಟಿನರಸೀಪುರದ ಐದು ಮಹಡಿಯ ಫ್ಯಾಮಿಲಿ ಶೋರೂಮ್ ಶ್ರೀ ಮಹದೇಶ್ವರ ಸಿಲ್ಕ್ ಅಂಡ್ ರೆಡಿಮೇಡ್‌ಗೆ ಸೇಲ್ಸ್‌ಮನ್, ಸೇಲ್ಸ್ ಗರ್ಲ್ ಹಾಗೂ ಎಕ್ಸೆಲ್ Tally ಎಲ್ಲಿ ಅನುಭವ ಇರುವ ಅಕೌಂಟೆಂಟ್ ಹಾಗೂ ಬಿಲ್ಲಿಂಗ್‌ಗೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. ಸಂದರ್ಶನದ ಸ್ಥಳ: ಶ್ರೀ ಮಹದೇಶ್ವರ ಕಲ್ಯಾಣ ಮಂಟಪ ಟಿ.ನರಸೀಪುರ ಪೆಟ್ರೋಲ್ ಬಂಕ್ ಎದುರು
7676685839,9663015447

FREE TRAINING ON
* Banking Process
* IT
* Accounting
* Communication Skills
For 12 Std and any Degree, PG with OJT,
100% Free job Placement
9620198701

SITE FOR SALE
40X60 'W' Face
KHB Colony, Hootgally
Hunsur Road, Mysore
8884577811

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮೈಸೂರು ಮಿತ್ರ ಗುರುವಾರ 6 ಜುಲೈ 2023

ಸರ್ಕಾರದ ಯೋಜನೆಗಳಿಂದ ಮಹಿಳೆಯರು ಸಶಕ್ತರಾಗಬೇಕು

ಕೇಂದ್ರ ಸಚಿವ ಕ್ರಿಶನ್‌ಪಾಲ್ ಗುರ್ಜರ್

ಶ್ರೀರಂಗಪಟ್ಟಣ, ಜು.5– ಕೇಂದ್ರ ಸರ್ಕಾರ ಬಡವರಿಗೆ ಹಾಗೂ ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಈ ಯೋಜನೆಗಳನ್ನು ಉಪಯೋಗಿಸಿಕೊಂಡು ಮಹಿಳೆಯರು ಸಶಕ್ತರಾಗಬೇಕು. ಮಹಿಳೆ ಸಶಕ್ತರಾದರೆ ದೇಶ ಸಶಕ್ತವಾದಂತೆ ಎಂದು ಕೇಂದ್ರ ಇಂಧನ ಮತ್ತು ಬೃಹತ್ ಕೈಗಾರಿಕೆ ರಾಜ್ಯ ಸಚಿವ ಕ್ರಿಶನ್‌ಪಾಲ್ ಗುರ್ಜರ್ ತಿಳಿಸಿದರು.

ಬುಧವಾರ ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದಲ್ಲಿ 'ಮಾತೃವಂದನಾ' ಮಹಿಳಾ ಫಲಾನುಭವಿಗಳೊಂದಿಗೆ ಸಂವಾದ ನಡೆಸಿ ಮಾತನಾಡಿದ ಅವರು, ಮಾತೃವಂದನಾ ಯೋಜನೆಯಡಿ ಮಹಿಳೆಯರು ಮೊದಲು ಗರ್ಭಿಣಿಯಾದ ಸಂದರ್ಭದಲ್ಲಿ ಅವರಿಗೆ ಪೌಷ್ಠಿಕಾಂಶ ಆಹಾರ ಒದಗಿಸುವ ನಿಟ್ಟಿನಲ್ಲಿ ಗರ್ಭದಲ್ಲಿ ಮಗುವಿನ ಬೆಳವಣಿಗೆಗೆ ಮೂರು ಕಂತುಗಳಲ್ಲಿ ಒಟ್ಟು 5 ಸಾವಿರ ರೂ. ನೀಡಲಾಗುತ್ತಿದೆ ಎಂದರು.

ಶ್ರೀರಂಗಪಟ್ಟಣ ತಾಲೂಕಿನಲ್ಲಿ ಮಾತೃವಂದನಾ ಯೋಜನೆಯಡಿ 1019 ಫಲಾನುಭವಿಗಳ ಗುರಿ ನಿಗದಿಯಾಗಿತ್ತು. ಆದರೆ 1059 ಜನರಿಗೆ ಯೋಜನೆಯನ್ನು ತಲುಪಿಸಿ ಗುರಿ ಮೀರಿ ಸಾಧನೆ ಮಾಡಿರುತ್ತಾರೆ. ಅವರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದ ಅವರು, ಶ್ರೀರಂಗಪಟ್ಟಣ ತಾಲೂಕಿನಲ್ಲಿ ಮಾತೃವಂದನಾ ಯೋಜನೆಯಡಿ 2021–22 ರಲ್ಲಿ 37.50 ಲಕ್ಷರೂ ಹಾಗೂ 2022–23 ರಲ್ಲಿ 69.50 ಲಕ್ಷ ರೂ ಮಹಿಳೆಯರಿಗೆ ಪಾವತಿಸಲಾಗಿದೆ. ಒಟ್ಟಾರೆ ಮಂಡ್ಯ ಜಿಲ್ಲೆಯಲ್ಲಿ ಅಂದಾಜು 10 ಕೋಟಿ ರೂ. ಪಾವತಿಸಲಾಗಿದೆ ಎಂದು ವಿವರಿಸಿದರು.

ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಆವಾಸ್ ಯೋಜನೆ, ಪ್ರಧಾನ ಮಂತ್ರಿ ಉಜ್ವಲ ಯೋಜನೆ, ಜಲ್ ಜೀವನ್ ಮಿಷನ್, ಸ್ವಚ್ಛ ಭಾರತ ಅಭಿಯಾನ, ಪ್ರಧಾನಮಂತ್ರಿ ಸಾಮಾಜಿಕ ಪಿಂಚಣಿ ಯೋಜನೆ, ಸ್ಟಾಂಡ್ ಅಪ್ ಇಂಡಿಯಾ, ಪ್ರಧಾನಮಂತ್ರಿ ಶ್ರಮ ಯೋಗಿ ಮನ್ ಧನ್ ಯೋಜನೆ, ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ಸೇರಿದಂತೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಿ ಎಂದು ಕರೆ ನೀಡಿದರು.



ಫಲಾನುಭವಿಗಳಿಗೆ ನೀಡಲಾಗುವ ಸಹಾಯಧನವನ್ನು ನೇರವಾಗಿ ಕೇಂದ್ರ ಸರ್ಕಾರ ಅವರ ಖಾತೆಗೆ ಜಮೆ ಮಾಡುತ್ತದೆ. ಇಲ್ಲಿ ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ ಎಂದ ಅವರು, ಇದೇ ಸಂದರ್ಭದಲ್ಲಿ ಮಾತೃವಂದನಾ ಯೋಜನೆಯ ಫಲಾನುಭವಿಗಳಾದ ವೇದಾವತಿ, ಪುಷ್ಪ, ಸಬಿಯಾ, ಅಯೀಷಾ ಅವರುಗಳು ಯೋಜನೆಯ ಸದುಪಯೋಗಪಡಿಸಿಕೊಂಡಿರುವ ಬಗ್ಗೆ ಸಚಿವರಿಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ನಂದೀಶ್, ತಹಶೀಲ್ದಾರ್ ಅಶ್ವಿನಿ, ತಾಪಂ ಇಓ ವೀಣಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಮೂರ್ತಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ದೀಪಾ ಉಪಸ್ಥಿತರಿದ್ದರು.

ಇಂದು ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ಮಂಡ್ಯ, ಜು.5– ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಅವರು ಜು.6 ರಂದು ಜಿಲ್ಲಾ ಪ್ರವಾಸ ಕಾರ್ಯಕ್ರಮ ಕೈಗೊಳ್ಳಲಿದ್ದಾರೆ.

ಜು.6ರಂದು ಬೆಳಗ್ಗೆ 9.30ಕ್ಕೆ ಡಿಸಿ ಕಛೇರಿ ಮುಂಭಾಗದಲ್ಲಿ ಬಾಬು ಜಗಜೀವನ್ ರಾಂ ಅವರ ಪುಣ್ಯತಿಥಿ ಅಂಗವಾಗಿ ಪ್ರತಿಮೆಗೆ ಮಾಲಾರ್ಪಣೆ ಮಾಡುವರು.

ಬೆಳಗ್ಗೆ 9.45 ಗಂಟೆಗೆ ಮೈಸೂರು ಶುಗರ್ ಕಾರ್ಖಾನೆಯ 2023–24 ನೇ ಸಾಲಿನ ಮಿಲ್ ಚಾಲನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು ನಂತರ ಬೆಳಿಗ್ಗೆ 10 ಗಂಟೆಗೆ ಮದ್ದೂರು, ಚನ್ನಪಟ್ಟಣ, ರಾಮನಗರ, ಬಿಡದಿ ಮಾರ್ಗವಾಗಿ ಕೇಂದ್ರ ಸ್ಥಾನ ಬೆಂಗಳೂರಿಗೆ ತಲುಪುವರು ಪ್ರಕಟಣೆ ತಿಳಿಸಿದೆ.

ವರ್ಗಾವಣೆಯಿಂದ ಬೇಸತ್ತು ಆತ್ಮಹತ್ಯೆಗೆ ಯತ್ನಿಸಿದ ಸಾರಿಗೆ ಬಸ್ ಚಾಲಕ

ಸಚಿವ ಚಲುವರಾಯಸ್ವಾಮಿಯವರೇ ವರ್ಗಾವಣೆಗೆ ಕಾರಣ ಎಂದು ಅರೋಪಿಸಿ ಡೆತ್‌ನೋಟ್



ನಾಗಮಂಗಲ, ಜು. 5– ವರ್ಗಾವಣೆಯಿಂದ ಬೇಸತ್ತ ಕೆಎಸ್‌ಆರ್‌ಟಿಸಿ ಬಸ್ ಚಾಲಕನೋರ್ವ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ವಿರುದ್ಧ ಆರೋಪ ಹೊರಿಸಿ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಪ್ರಯತ್ನಿಸಿದ ಘಟನೆ ನಾಗಮಂಗಲ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಮುಂಭಾಗ ಬುಧವಾರ ಮಧ್ಯಾಹ್ನ ನಡೆದಿದೆ.

ತಾಲೂಕಿನ ಅಂದೇನಹಳ್ಳಿ ನಿವಾಸಿ ಜಗದೀಶ್ ಎಂಬಾತನೇ ಆತ್ಮಹತ್ಯೆಗೆ ಪ್ರಯತ್ನಿಸಿದವನಾಗಿದ್ದು, ಆದಿಚುಂಚನಗಿರಿಯಲ್ಲಿರುವ ಬಿಜಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ನಾಗಮಂಗಲ ಡಿಪೋದಲ್ಲಿದ್ದ ಈತನನ್ನು ಮದ್ದೂರು ಡಿಪೋಗೆ ವರ್ಗಾವಣೆ ಮಾಡಿದ್ದೇ ಈತನ ಈ ವರ್ತನೆಗೆ ಕಾರಣವಾಗಿದೆ.

ಈ ಹಿಂದೆ ನಾಗಮಂಗಲ ಡಿಪೋದಲ್ಲೇ ಕೆಲಸ ಮಾಡುತ್ತಿದ್ದ ಜಗದೀಶ್‌ನನ್ನು ಕೊರೊನಾ ಸಂದರ್ಭದಲ್ಲಿ ಬೇರೆಡೆಗೆ ವರ್ಗಾವಣೆ ಮಾಡಲಾಗಿತ್ತು. ಇತ್ತೀಚೆಗಷ್ಟೇ ಮತ್ತೆ ಈತ ನಾಗಮಂಗಲ ಡಿಪೋಗೆ ವರ್ಗಾಯಿಸಲ್ಪಟ್ಟಿದ್ದ. ಕೆಲ ದಿನಗಳ ಹಿಂದೆ ಈತನನ್ನು ಮದ್ದೂರು ಡಿಪೋಗೆ ವರ್ಗಾವಣೆ ಮಾಡಲಾಗಿತ್ತಾದರೂ, ಕರ್ತವ್ಯದಿಂದ ಬಿಡಗಡೆಗೊಳಿಸಿರಲಿಲ್ಲ ಎಂದು ಹೇಳಲಾಗಿದ್ದು, ಇಂದು ಮಧ್ಯಾಹ್ನ ಡಿಪೋದ ಪ್ರಭಾರ ವ್ಯವಸ್ಥಾಪಕ ಮಂಜುನಾಥ್ ಅವರು ಜಗದೀಶ್‌ನನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಮದ್ದೂರು ಡಿಪೋಗೆ ತೆರಳುವಂತೆ ಹೇಳಿದಾಗ ಅಲ್ಲಿಂದ ಓಡಿ ಹೋದ ಕೆಲ ನಿಮಿಷಗಳಲ್ಲಿ ಕ್ರಿಮಿನಾಶಕವನ್ನು ತಂದು ನನ್ನ ವರ್ಗಾವಣೆಗೆ ಸಚಿವ ಚೆಲುವರಾಯಸ್ವಾಮಿ ಅವರೇ ಕಾರಣ ಎಂದು ಕೂಗಾಡುತ್ತಾ ಕ್ರಿಮಿನಾಶಕ ಸೇವಿಸಿದ್ದಾನೆ, ಅಲ್ಲದೇ ರಾಜಕೀಯ ದ್ವೇಷದಿಂದ ತನ್ನನ್ನು ಚಲುವರಾಯಸ್ವಾಮಿ ವರ್ಗಾವಣೆ ಮಾಡಿಸಿದ್ದು, ನನ್ನ ಆತ್ಮಹತ್ಯೆಗೆ ಅವರೇ ಕಾರಣ ಎಂದು ಜಗದೀಶ್ ಬರೆದಿರುವ ಡೆತ್‌ನೋಟ್ ಅನ್ನು ಆತನ ಪತ್ನಿ ಮಾಧ್ಯಮಗಳಿಗೆ ಪ್ರದರ್ಶಿಸಿದರು. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ನಾಗಮಂಗಲ ಟೌನ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅಶೋಕ್‌ಕುಮಾರ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು.

ಟೊಮೆಟೋ ಬೆಳೆಗೆ ವಿಮೆ

ಮಂಡ್ಯ, ಜು.5– ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಟೊಮೆಟೋ ಬೆಳೆಗೆ ಮಂಡ್ಯ ತಾಲೂಕಿನ ಕಸಬಾ, ಕೊತ್ತತ್ತಿ, ದುದ್ದ, ಬಸರಾಳು ಹೋಬಳಿಗಳಲ್ಲಿ ವಿಮೆ ಮಾಡಿಸಲು ರೈತರು ನೊಂದಾಯಿಸಿಕೊಳ್ಳಬಹುದು. ಎಕರೆಗೆ ರೂ.2863/– ಪಾವತಿಸಿ ವಿಮೆ ಮಾಡಿಸತಕ್ಕದ್ದು, ವಿಮಾದ ಮೊತ್ತ ರೂ 57265/– ಆಗಿರುತ್ತದೆ. ವಿಮಾ ಕಂತನ್ನು ಪಾವತಿಸಲು ಜುಲೈ 17 ಕೊನೆ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಇಲಾಖೆ ಹಾಗೂ ಹತ್ತಿರದ ಬ್ಯಾಂಕ್ ಶಾಖೆಗಳು ಹಾಗೂ ಶ್ರೀಧರ್ ಕೆ.ಎಸ್. ಸತೋಅ ಕೊತ್ತತ್ತಿ ಹೋಬಳಿರವರ ದೂರವಾಣಿ ಸಂಖ್ಯೆ: 9691307753, ವಸಂತಕುಮಾರ್ ಸತೋಅ ಬಸರಾಳು ಹೋಬಳಿರವರ ದೂರವಾಣಿ ಸಂಖ್ಯೆ: 9844621365, ಕಿರಣ್ ಹೆಚ್.ಎಸ್. ಸತೋಅ ದುದ್ದ ಹೋಬಳಿರವರ ದೂರವಾಣಿ ಸಂಖ್ಯೆ: 9611730343, ಸುಲೋಚನಾ ಎನ್ ಎಸ್ ಸತೋಅ ಕಸಬಾ (ಪ್ರಬಾರೆ) ಹೋಬಳಿರವರ ದೂಸಂಖ್ಯೆ: 6363229914 ನ್ನು ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್)ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಮನ್‌ಮುಲ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಜೆಡಿಎಸ್– ಕಾಂಗ್ರೆಸ್ ನಡುವೆ ಭಾರೀ ಪೈಪೋಟಿ, ಬಿಜೆಪಿ ಕಿಂಗ್ ಮೇಕರ್



ಮಂಡ್ಯ, ಜು.5– ಪ್ರತಿಷ್ಠಿತ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಗುರುವಾರ ಚುನಾವಣೆ ನಡೆಯಲಿದ್ದು, ಅಧಿಕಾರ ಹಿಡಿಯಲು ಜೆಡಿಎಸ್ ಹಾಗೂ ಕಾಂಗ್ರೆಸ್ ನಡುವೆ ಭಾರೀ ಪೈಪೋಟಿ ಎದುರಾಗಿದೆ. ಆದರೆ ಬಿಜೆಪಿ ಬೆಂಬಲಿತ ನಿರ್ದೇಶಕರ ಬೆಂಬಲ ಯಾರಿಗೆ ಸಿಗಲಿದೆ ಅವರು ಗೆದ್ದು ಬೀಗಲಿದ್ದಾರೆ.

ಮನ್‌ಮುಲ್ ಅಧ್ಯಕ್ಷರಾಗಿದ್ದ ಜೆಡಿಎಸ್‌ನ ಬಿ.ಆರ್.ರಾಮಚಂದ್ರ ಅವರು ಮಂಡ್ಯ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ನಿಟ್ಟಿನಲ್ಲಿ ತೆರವಾದ ಸ್ಥಾನಕ್ಕೆ ನಾಳೆ ಚುನಾವಣೆ ನಡೆಯಲಿದೆ.

12 ನಿರ್ದೇಶಕ ಸ್ಥಾನ ಹೊಂದಿರುವ ಮನ್‌ಮುಲ್‌ನಲ್ಲಿ 7 ಮಂದಿ ಜೆಡಿಎಸ್, 3 ಮಂದಿ ಕಾಂಗ್ರೆಸ್, ಇಬ್ಬರು ಬಿಜೆಪಿ ನಿರ್ದೇಶಕರಿದ್ದು, ಮೂವರು ಅಧಿಕಾರಿಗಳಿಗೆ ಮತದಾನ ಮಾಡುವ ಹಕ್ಕು ಇದೆ. ಜೊತೆಗೆ ಸರ್ಕಾರದಿಂದ ಓರ್ವ ನಾಮ ನಿರ್ದೇಶಿತ ಸದಸ್ಯರ ನೇಮಕ ಸಹ ಆಗಲಿದ್ದು, ಈ ನಿಟ್ಟಿನಲ್ಲಿ ಒಟ್ಟು 16 ಮಂದಿಗೆ ಮತದಾನ ಮಾಡುವ ಹಕ್ಕು ಸಿಗಲಿದ್ದು, ಕಾಂಗ್ರೆಸ್‌ಗೆ ಮೂವರು ನಿರ್ದೇಶಕರು, ಮೂರು ಮಂದಿ ಅಧಿಕಾರಿಗಳು ಹಾಗೂ ಓರ್ವ ನಾಮನಿರ್ದೇಶಿತ ನಿರ್ದೇಶಕನ ಬೆಂಬಲದೊಂದಿಗೆ ಕಾಂಗ್ರೆಸ್ ಸಂಖ್ಯೆ ಏಳಕ್ಕೆ ಏರಲಿದೆ.

ಜೆಡಿಎಸ್ ನಿರ್ದೇಶಕರ ಸಂಖ್ಯೆಯೂ ಏಳು ಇರವುದರಿಂದ ಜೆಡಿಎಸ್ ಮತ್ತು ಕಾಂಗ್ರೆಸ್ ಬಳಿ ಸಮಬಲದ ಮತಗಳಿದ್ದು, ಬಿಜೆಪಿ ಬಳಿ ಇರುವ 2 ಮತಗಳು ನಿರ್ಣಾಯಕ ಪಾತ್ರ ವಹಿಸಲಿವೆ. ಬಿಜೆಪಿಯ ನಿರ್ದೇಶಕರು ಯಾರಿಗೆ ಬೆಂಬಲ ನೀಡುತ್ತಾರೋ ಅವರಿಗೆ ಅಧಿಕಾರ ಸಿಗುವುದು ನಿಚ್ಚಳವಾಗಿದ್ದು, ಕಾಂಗ್ರೆಸ್ ಮಣಿಸಲು ಜೆಡಿಎಸ್ ಜೊತೆ ಬಿಜೆಪಿ ಕೈ ಜೋಡಿಸುವ ಸಾಧ್ಯತೆ ಇದೆ.

ಕಾಂಗ್ರೆಸ್ ತಂತ್ರಗಾರಿಕೆ ಏನು?: ಸದ್ಯ ಕಾಂಗ್ರೆಸ್‌ನ ಬೆಂಬಲಿತರಾಗಿ ಗೆದ್ದವರ ಪೈಕಿ ಮಂಡ್ಯದ ಉಮ್ಮಡಹಳ್ಳಿ ಶಿವಪ್ಪ ಹಾಗೂ ಶ್ರೀರಂಗಪಟ್ಟಣದ ಬೋರೇಗೌಡ ಅಧ್ಯಕ್ಷ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಇದಲ್ಲದೇ ಕಾಂಗ್ರೆಸ್‌ನಿಂದ ಗೆದ್ದಿದ್ದ ಡಾಲು ರವಿ ಸದ್ಯ ಜೆಡಿಎಸ್‌ಗೆ ಹೋಗಿದ್ದು, ಜೆಡಿಎಸ್‌ನಲ್ಲಿದ್ದ ಪಾಂಡವಪುರದ ರಾಮಚಂದ್ರ ಕಾಂಗ್ರೆಸ್‌ಗೆ ಬಂದಿದ್ದಾರೆ. ಇದಲ್ಲದೇ ನಾಮ ನಿರ್ದೇಶಿತ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿಯಾಗಿರುವ ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ ನೇಮಕವಾದರೆ ಅವರು ಸಹ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಲಿದ್ದಾರೆ. ಇನ್ನೊಂದು ಮತಕ್ಕಾಗಿ ಬಿಜೆಪಿ ಮತ್ತು ಜೆಡಿಎಸ್‌ನ ನಿರ್ದೇಶಕರುಗಳಿಗೆ ಕಾಂಗ್ರೆಸ್ ಗಾಳ ಹಾಕಿದೆ.

ಜೆಡಿಎಸ್ ಲೆಕ್ಕಾಚಾರವೇನು?: ಏಳು ನಿರ್ದೇಶಕ ಬಲದ ಜೆಡಿಎಸ್‌ನಲ್ಲಿ ಅಧ್ಯಕ್ಷ ಆಕಾಂಕ್ಷಿಗಳೇ ಇಲ್ಲದಂತಾಗಿದ್ದು, ಇದಕ್ಕೆ ಪ್ರಮುಖ ಕಾರಣ. ಹಾಲಿ ಅಧ್ಯಕ್ಷರಾಗಿದ್ದ ಬಿ.ಆರ್.ರಾಮಚಂದ್ರ ರಾಜೀನಾಮೆ ನೀಡಿರುವುದರಿಂದ ಅವರು ಆಕಾಂಕ್ಷಿಯಲ್ಲ. ಎಂ.ಎಸ್.ರಘುನಂದನ್ ಉಪಾಧ್ಯಕ್ಷರಾಗಿರುವುದರಿಂದ ಅವರು ಅಧ್ಯಕ್ಷ ಸ್ಥಾನಕ್ಕೆ ಆಸಕ್ತಿ ತೋರಿಲ್ಲ. ಕೆ.ಎಂ.ವಿಶ್ವನಾಥ್ ಮನ್‌ಮುಲ್ ಜೊತೆಗೆ ಕೆಎಂಎಫ್ ನಿರ್ದೇಶಕರಾಗಿರುವುದರಿಂದ ಅವರು ಸಹ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ. ಮತ್ತೋರ್ವ ಪ್ರಮುಖ ನಿರ್ದೇಶಕ ಹೆಚ್.ಟಿ.ಮಂಜು ಕೆ.ಆರ್.ಪೇಟೆ ಶಾಸಕರಾಗಿರುವುದರಿಂದ ಅವರು ಒಲವು ತೋರಿಲ್ಲ.

ಇನ್ನು ನೆಲ್ಲಿಗೆರೆ ಬಾಲು ಒಕ್ಕಲಿಗರ ನಿರ್ದೇಶಕರಾಗಿರುವುದರಿಂದ ಮನ್‌ಮುಲ್ ಅಧ್ಯಕ್ಷ ಸ್ಥಾನಕ್ಕೆ ಅವರನ್ನು ಇತರೆ ನಿರ್ದೇಶಕರು ಒಪ್ಪಲಿದ್ದಾರಾ ಎಂಬ ಪ್ರಶ್ನೆ ಇದ್ದು, ಮತ್ತೋರ್ವ ನಿರ್ದೇಶಕ ಕೋಟಿರವಿ ಕೂಡ ಅಧ್ಯಕ್ಷ ಸ್ಥಾನಕ್ಕೆ ಒಲವು ತೋರಿಲ್ಲ. ಇನ್ನು ಉಳಿದಿರುವ ಏಕೈಕ ನಿರ್ದೇಶಕ ಎಂದರೆ ಕಾಂಗ್ರೆಸ್‌ನಿಂದ ಜೆಡಿಎಸ್‌ಗೆ ಬಂದಿರುವ ಡಾಲು ರವಿ. ಹೆಚ್.ಟಿ. ಮಂಜು ಗೆಲುವಿಗೆ ಪ್ರಮುಖ ಪಾತ್ರ ವಹಿಸಿರುವ ಅವರು ಪ್ರಬಲ ಆಕಾಂಕ್ಷಿ ಯಾಗಿದ್ದು, ಆದರೆ ಇತ್ತೀಚೆಗೆ ಪಕ್ಷಕ್ಕೆ ಬಂದಿದ್ದಾರೆ ಎಂಬ ಮಾತಿದೆ.

ಬಿಜೆಪಿ ಬೆಂಬಲ ಯಾರಿಗೆ?: ಇನ್ನು ಬಿಜೆಪಿಯ ಎಸ್.ಪಿ.ಸ್ವಾಮಿ ಹಾಗೂ ರೂಪಾ ಯಾರಿಗೆ ಬೆಂಬಲ ನೀಡುತ್ತಾರೋ ಅವರು ಗೆಲ್ಲುವ ಸಾಧ್ಯತೆ ಇದೆ. ಎಸ್.ಪಿ.ಸ್ವಾಮಿ ಮದ್ದೂರಿನಿಂದ ವಿಧಾನಸಭೆಗೆ ಬಿಜೆಪಿಯಿಂದ ಸ್ಪರ್ಧಿಸಿದ್ದರಿಂದ ಅವರು ಪಕ್ಷದ ಅಣತಿಯಂತೆ ಮತ ಚಲಾಯಿಸಲಿದ್ದಾರೆ. ಅಥವಾ ಗೈರು ಹಾಜರಾದರೂ ಅಚ್ಚರಿ ಇಲ್ಲ. ಇನ್ನೋರ್ವ ನಿರ್ದೇಶಕಿ ರೂಪಾ ಜೆಡಿಎಸ್‌ಗೆ ಸಹಾಯ ಮಾಡಿದರೆ ಸುಲಭವಾಗಿ ಜೆಡಿಎಸ್‌ಗೆ ಅಧಿಕಾರ ಸಿಗಲಿದ್ದು, ಮನ್‌ಮುಲ್ ಅಧ್ಯಕ್ಷಗಿರಿ ಯಾರಿಗೆ ಎಂಬುದು ಬಹಳ ಕುತೂಹಲ ಮೂಡಿಸಿದೆ.

ಎನ್‌ಸಿಪಿ ಬಲಾಬಲ: ಅಜಿತ್ ಪವಾರ್ ಜತೆ 35, ಶರದ್ ಪವಾರ್ ಕಡೆ 13 ಶಾಸಕರು



ಅಜಿತ್ ಪವಾರ್

ಮುಂಬೈ: ಎನ್‌ಸಿಪಿ ಮುಖ್ಯಸ್ಥ, ತಮ್ಮ ಚಿಕ್ಕಪ್ಪ ಶರದ್ ಪವಾರ್ ವಿರುದ್ಧವೇ ಬಂಡಾಯವೆದ್ದಿರುವ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್, ಬುಧವಾರ ಮುಂಬೈನಲ್ಲಿ ಕರೆದಿದ್ದ ಪಕ್ಷದ ಸಭೆಯಲ್ಲಿ 53 ಎನ್‌ಸಿಪಿ ಶಾಸಕರ ಪೈಕಿ 35 ಶಾಸಕರು ಹಾಜರಿದ್ದರು. ಅಲ್ಲದೆ ಈ ಸಂಖ್ಯೆ ಇನ್ನೂ ಹೆಚ್ಚಾಗಲಿದೆ ಎಂದು ಅವರು ಹೇಳಿದ್ದಾರೆ.

ಉಪನಗರ ಬಾಂದ್ರಾದಲ್ಲಿ ನಡೆದ ಅಜಿತ್ ಪವಾರ್ ಶಕ್ತಿ ಪ್ರದರ್ಶನದ ಸಭೆಯಲ್ಲಿ ಎಂಟು ಎನ್‌ಸಿಪಿ ಎಂಎಲ್‌ಸಿಗಳ ಪೈಕಿ ಐವರು ಭಾಗವಹಿಸುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಅನಂತ್ ಕಲ್ಸೆ ಪ್ರಕಾರ, ಅಜಿತ್ ಪವಾರ್ ಅವರ ಬಣ ಅನರ್ಹತೆಯಿಂದ ತಪ್ಪಿಸಲು ಕನಿಷ್ಠ 36 ಶಾಸಕರ ಬೆಂಬಲದ ಅಗತ್ಯವಿದೆ ಎಂದು ಹೇಳಿದ್ದಾರೆ. ಅಜಿತ್ ಪವಾರ್ ಅವರು ಎನ್‌ಸಿಪಿಯ ಬಹುಪಾಲು ಶಾಸಕರ ಬೆಂಬಲ ತಮಗೆ ಇದೆ ಎಂಬುದನ್ನು ಸಾಬೀತುಪಡಿಸಲು ಮುಂಬೈನ ಬಾಂದ್ರಾದಲ್ಲಿ ಸಭೆ ಕರೆದಿದ್ದರು. ಇದಕ್ಕೆ ಪ್ರತಿಯಾಗಿ ಶರದ್ ಪವಾರ್ ಅವರು ದಕ್ಷಿಣ ಮುಂಬೈನ ಯಶವಂತರಾವ್ ಚವಾಣ್ ಸೆಂಟರ್‌ನಲ್ಲಿ ಪಕ್ಷದ ನಾಯಕರ ಸಭೆ ಕರೆದಿದ್ದಾರೆ.

ನಾನು ಮಹಾರಾಷ್ಟ್ರ ಮುಖ್ಯಮಂತ್ರಿಯಾಗಬೇಕು –ಅಜಿತ್ ಪವಾರ್

ಮುಂಬೈ: ಜನರ ಕಲ್ಯಾಣಕ್ಕಾಗಿ ಕೆಲವು ಯೋಜನೆಗಳನ್ನು ಜಾರಿಗೆ ತರಲು ನಾನು ಮಹಾರಾಷ್ಟ್ರ ಮುಖ್ಯಮಂತ್ರಿಯಾಗಲು ಬಯಸುತ್ತೇನೆ" ಎಂದು ಎನ್‌ಸಿಪಿ ಬಂಡಾಯ ನಾಯಕ, ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಬುಧವಾರ ಹೇಳಿದ್ದಾರೆ. ಇಂದು ಮುಂಬೈನ ಬಾಂದ್ರಾದಲ್ಲಿ ತಾವು ಕರೆದಿದ್ದ ಬೆಂಬಲಿಗರ ಸಭೆಯಲ್ಲಿ ಮಾತನಾಡಿದ ಅಜಿತ್ ಪವಾರ್, 2004ರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಸಿಪಿ ಕಾಂಗ್ರೆಸ್‌ಗಿಂತ ಹೆಚ್ಚು ಸ್ಥಾನಗಳನ್ನು ಪಡೆದಿತ್ತು. ಆ ಸಮಯದಲ್ಲಿ ನಾವು ಕಾಂಗ್ರೆಸ್‌ಗೆ ಮುಖ್ಯಮಂತ್ರಿ ಸ್ಥಾನ ನೀಡದಿದ್ದರೆ, ಇಲ್ಲಿಯವರೆಗೆ ಮಹಾರಾಷ್ಟ್ರದಲ್ಲಿ ಎನ್‌ಸಿಪಿಯವರೇ ಮುಖ್ಯಮಂತ್ರಿಯಾಗಿ ಇರುತ್ತಿದ್ದರು ಎಂದರು.

2017ರಲ್ಲೂ ವರ್ಷಾ ಬಂಗಲೆಯಲ್ಲಿ ಸಭೆ ನಡೆಸಿದ್ದೆವು. ಪಕ್ಷದ ಹಿರಿಯ ನಾಯಕರಾದ ಛಗನ್ ಭುಜಬಲ್, ಜಯಂತ್ ಪಟೇಲ್, ನಾನು ಮತ್ತು ಇನ್ನೂ ಹಲವರು ಅಲ್ಲಿಗೆ ಹೋಗಿದ್ದೆವು. ಬಿಜೆಪಿಯ ಹಲವಾರು ನಾಯಕರು ಸಹ ಅಲ್ಲಿದ್ದರು. ಸಚಿವ ಸ್ಥಾನ ಮತ್ತು ಖಾತೆ ಹಂಚಿಕೆ ಬಗ್ಗೆಯೂ ಚರ್ಚೆ ಆಗಿತ್ತು. ಆದರೆ ನಂತರ ನಮ್ಮ ಪಕ್ಷ ಒಂದು ಹೆಜ್ಜೆ ಹಿಂದಕ್ಕೆ ಸರಿಯಿತು ಎಂದು ಅಜಿತ್ ಪವಾರ್ ಹೇಳಿದ್ದಾರೆ. ಇದೇ ವೇಳೆ 83 ವರ್ಷದ ಶರದ್ ಪವಾರ್ ಅವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅಜಿತ್ ಪವಾರ್, ಬಿಜೆಪಿಯಲ್ಲಿ 75 ವರ್ಷ ಮೇಲ್ಪಟ್ಟ ನಾಯಕರು ನಿವೃತ್ತರಾಗುತ್ತಾರೆ. ಆದರೆ ನಿಮಗೆ 83 ವರ್ಷ. ನೀವು ಯಾವಾಗ ನಿವೃತ್ತಿಯಾಗುತ್ತೀರಿ? ಎಂದು ತಮ್ಮ ಚಿಕ್ಕಪ್ಪನನ್ನು ಪ್ರಶ್ನಿಸಿದರು. ನೀವು ಎಲ್ಲರ ಮುಂದೆ ನನ್ನನ್ನು ಖಳನಾಯಕನಂತೆ ಬಿಂಬಿಸಿದ್ದೀರಿ. ನನಗೆ ಅವರ(ಶರದ್ ಪವಾರ್) ಬಗ್ಗೆ ಇನ್ನೂ ಆಳವಾದ ಗೌರವವಿದೆ ... ಐಎಎಸ್ ಅಧಿಕಾರಿಗಳು 60ನೇ ವಯಸ್ಸಿನಲ್ಲಿ ನಿವೃತ್ತರಾಗುತ್ತಾರೆ ... ರಾಜಕೀಯದಲ್ಲಿಯೂ – ಬಿಜೆಪಿ ನಾಯಕರು 75 ನೇ ವಯಸ್ಸಿನಲ್ಲಿ ನಿವೃತ್ತರಾಗುತ್ತಾರೆ. ಎಲ್.ಕೆ. ಅಡ್ವಾಣಿ ಮತ್ತು ಮುರಳಿ ಮನೋಹರ ಜೋಶಿಯವರ ಉದಾಹರಣೆಯನ್ನು ನೀವು ನೋಡಬಹುದು ... ಅದು ಹೊಸ ಪೀಳಿಗೆಗೆ ಅನುವು ಮಾಡಿಕೊಡುತ್ತದೆ ಎಂದಿದ್ದಾರೆ.

ಶರದ್ ಪವಾರ್ ಅವರ ಸಭೆಯಲ್ಲಿ ಕೇವಲ 13 ಶಾಸಕರು ಭಾಗವಹಿಸಿದ್ದಾರೆ. ಅನಿಲ್ ದೇಶ್‌ಮುಖ್, ಅಶೋಕ್ ಪವಾರ್, ರೋಹಿತ್ ಪವಾರ್, ಕಿರಣ್ ಲಹ್ಮತೆ ಸೇರಿದಂತೆ ಕೆಲವೇ ಮಂದಿ ಶರದ್ ಪವಾರ್ ಅವರಿಗೆ ಬೆಂಬಲ ತೋರಿಸಿದ್ದಾರೆ. ಈ ಸಭೆಗೆ ಎನ್‌ಸಿಪಿಯ ಎಲ್ಲಾ ಶಾಸಕರೂ ಹಾಜರಾಗಬೇಕು ಎಂದು ಪಕ್ಷದ ಮುಖ್ಯ ವಿಪ್ ಜಿತೇಂದ್ರ ಅವ್ಹಾದ್ ಅವರು ವಿಪ್ ಜಾರಿ ಮಾಡಿದ್ದರು.

ಐವರು ಸಂಸದರಾದ ಶ್ರೀನಿವಾಸ್ ಪಾಟೀಲ್(ಲೋಕಸಭೆ), ಸುಪ್ರಿಯಾ ಸುಳೆ(ಲೋಕಸಭೆ), ಅಮೋಲ್ ಕೋಲ್ಹೆ (ಲೋಕಸಭೆ), ಫೌಜಿಯಾ ಖಾನ್ (ರಾಜ್ಯಸಭೆ) ವಂದನಾ ಚವಾಣ್ (ರಾಜ್ಯಸಭೆ) ಮತ್ತು ಮೂವರು ಎಂಎಲ್ಸಿಗಳಾದ ಶಶಿಕಾಂತ್ ಶಿಂಧೆ, ಬಾಬಾಜಾನಿ ದುರಾನಿ, ಏಕನಾಥ್ ಖಡ್ಸೆ ಅವರು ಸಹ ಶರದ್ ಪವಾರ್ ಸಭೆಯಲ್ಲಿ ಭಾಗವಹಿಸಿದ್ದರು.

ಎನ್‌ಸಿಪಿ ಚಿಹ್ನೆಗೆ ಆಯೋಗದ ಮೊರೆ ಹೋದ ಅಜಿತ್: ನ್ಯಾಶನಲಿಸ್ಟ್ ಕಾಂಗ್ರೆಸ್ ಪಕ್ಷ(ಎನ್‌ಸಿಪಿ)ದಲ್ಲಿನ ಬಣ ಹೋರಾಟ ಈಗ ಚುನಾವಣಾ ಆಯೋಗದ ಕದ ತಟ್ಟಿದ್ದು, ಪಕ್ಷದ ಹೆಸರು ಮತ್ತು ಚಿಹ್ನೆ ತಮಗೆ ನೀಡುವಂತೆ ಕೋರಿ ಅಜಿತ್ ಪವಾರ್ ನೇತೃತ್ವದ ಬಣ ಕೇಂದ್ರ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿದೆ.

ತಮಗೆ 40ಕ್ಕೂ ಹೆಚ್ಚು ಶಾಸಕರು ಮತ್ತು ಸಂಸದರ ಬೆಂಬಲ ಇದೆ ಎಂದು ಅಜಿತ್ ಪವಾರ್ ಬಣ ಚುನಾವಣಾ ಆಯೋಗಕ್ಕೆ ಅಫಿಡವಿಟ್‌ಗಳನ್ನು ಸಲ್ಲಿಸಿದೆ. ಇದನ್ನು ವಿರೋಧಿಸಿ ಶರದ್ ಪವಾರ್ ಪಾಳಯ, ಚುನಾವಣಾ ಆಯೋಗಕ್ಕೆ ಕೇವಿಯಟ್ ಸಲ್ಲಿಸಿದ್ದು, ಬಣ ಜಗಳಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವನ್ನು ನೀಡುವ ಮುನ್ನ ತಮ್ಮ ವಾದವನ್ನು ಆಲಿಸುವಂತೆ ಒತ್ತಾಯಿಸಿದೆ ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ಚುನಾವಣಾ ಆಯೋಗವು ಮುಂದಿನ ದಿನಗಳಲ್ಲಿ ಉಭಯ ಬಣಗಳ ಅರ್ಜಿಗಳನ್ನು ಪರಿಗಣಿಸಿ, ತನ್ನ ಮುಂದೆ ಸಲ್ಲಿಸಿದ ಆಯಾ ದಾಖಲೆಗಳನ್ನು ವಿನಿಮಯ ಮಾಡಿಕೊಳ್ಳಲು ಎರಡೂ ಕಡೆಯವರಿಗೂ ಸೂಚಿಸುವ ಸಾಧ್ಯತೆಯಿದೆ.

ಈ ಮಧ್ಯೆ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು, ಪಕ್ಷದ ಚಿಹ್ನೆ ಕಸಿದುಕೊಳ್ಳಲು ಯಾರಿಗೂ ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದಾರೆ. ಅಲ್ಲದೆ ಅಜಿತ್ ಪವಾರ್ ಬಣ ತಮ್ಮ ಫೋಟೋ ಬಳಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಶರದ್ ಪವಾರ್

ದಕ್ಷಿಣ ಮುಂಬೈನ ಚವಾಣ್ ಸೆಂಟರ್‌ನಲ್ಲಿ ಸುಮಾರು 13 ಎನ್‌ಸಿಪಿ ಶಾಸಕರು ಹಾಜರಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡಿದ 83 ವರ್ಷದ ಪವಾರ್, ಪ್ರಧಾನಿ ನರೇಂದ್ರ ಮೋದಿ ಎನ್‌ಸಿಪಿಯನ್ನು ಭ್ರಷ್ಟ ಪಕ್ಷ ಎಂದು ಕರೆದರೂ ಅಧಿಕಾರಕ್ಕಾಗಿ ಬಿಜೆಪಿಯೊಂದಿಗೆ ಹೋಗುತ್ತಿದ್ದಾರೆ ಎಂದು ಅಜಿತ್ ಪವಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ಕೆಲವು ದಿನಗಳ ಹಿಂದೆ, ಅವರು (ಅಜಿತ್ ಪವಾರ್) ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರನ್ನು ಅವಹೇಳನ ಮಾಡಿದರು. ತಾವು ಇಷ್ಟು ವರ್ಷಗಳಲ್ಲಿ ಅಂತಹ ಸಿಎಂ ಅನ್ನು ನೋಡಿಲ್ಲ ಎಂದು ಟೀಕಿಸಿದ್ದರು. ಈಗ ಅವರೊಂದಿಗೆ ಸೇರಿಕೊಂಡಿದ್ದಾರೆ ಎಂದು ಶರದ್ ಪವಾರ್ ತಿರುಗೇಟು ನೀಡಿದರು. 1999ರಲ್ಲಿ ಎನ್‌ಸಿಪಿ ಸ್ಥಾಪಿಸಿದಾಗ ಜನಸಾಮಾನ್ಯರೊಂದಿಗಿನ ತಮ್ಮ ಸಂಪರ್ಕವನ್ನು ನೆನಪಿಸಿಕೊಂಡ ಪವಾರ್, "ಇಂದು ನಾವು ಅಧಿಕಾರದಲ್ಲಿ ಇಲ್ಲದಿರಬಹುದು, ಆದರೆ ನಾವು ಜನರ ಹೃದಯದಲ್ಲಿದ್ದೇವೆ' ಎಂದು ಹೇಳಿದರು.

ಜು.9ರಂದು ಗ್ರಾಹಕ ಪರಿಷತ್ತಿನ ಮಾಸಿಕ ಸಭೆ

ಮೈಸೂರು, ಜು.5(ಎಸ್‌ಪಿಎನ್)–ಮೈಸೂರು ಗ್ರಾಹಕರ ಪರಿಷತ್ತಿನ ಜುಲೈ ಮಾಸಿಕ ಸಭೆಯಲ್ಲಿ ಮೈಸೂರು ನಗರದ ಒಳಚರಂಡಿ ವ್ಯವಸ್ಥೆಯ ಸಮಸ್ಯೆಗಳ ಕುರಿತು ಒಳಚರಂಡಿ ನಿರ್ವಹಣೆಯ ಎಕ್ಸಿಕ್ಯೂಟಿವ್ ಎಂಜಿನಿಯರ್ ಬಿ.ನಾಗರಾಜ್ ಅವರೊಂದಿಗೆ ಯಾದವಗಿರಿಯ ಮೈಗ್ರಾಪ ಕಚೇರಿಯಲ್ಲಿ ಜು.9ರಂದು ಸಂಜೆ 4ಗಂಟೆಗೆ ಸಾಧಕ–ಬಾಧಕಗಳ ಬಗ್ಗೆ ಮಾಹಿತಿ ವಿನಿಮಯ, ಸಂವಾದ ನಡೆಯಲಿದೆ. ಮಾಜಿ ಶಾಸಕ ವಾಸು ಅವರೊಂದಿಗೆ ಮೈಸೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆ ಕುರಿತು ಚರ್ಚೆ ನಡೆಸಲಿದ್ದು, ಒಳಚರಂಡಿ ವ್ಯವಸ್ಥೆ ಸರಿಪಡಿಸಲು ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ನೀಡಲಿದ್ದಾರೆ. ಮುಂಬರುವ ದಿನಗಳಲ್ಲಿ ಒಳಚರಂಡಿ, ಕುಡಿಯುವ ನೀರಿನ ಕೊರತೆ ಇತ್ಯಾದಿ ನಗರದ ತೀವ್ರತರವಾದ ಸಮಸ್ಯೆಗಳ ಕುರಿತು ಮೈಗ್ರಾಪ ಸದಸ್ಯ ರೊಂದಿಗೆ ಸಂವಾದ ನಡೆಸಲಿದ್ದಾರೆ. ಹಾಗಾಗಿ ಈ ಚರ್ಚೆಯಲ್ಲಿ ಪಾಲ್ಗೊಳ್ಳುವ ಪದಾಧಿಕಾರಿಗಳು ಈ ಇಮೇಲ್ ವಿಳಾಸಕ್ಕೆ mygrapa@gmail.com ಕಳುಹಿಸುವಂತೆ ಮೈಗ್ರಾಪ ಅಧ್ಯಕ್ಷರು ಮನವಿ ಮಾಡಿದ್ದಾರೆ.

ಇಂದು ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಜು. 5–ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ಶ್ರೀ ಬೀರೇಶ್ವರಸ್ವಾಮಿ ಟ್ರಸ್ಟ್, ರೋಟರಿ ಪಂಚಶೀಲ, ಮೈಸೂರು ರೇಸ್ ಕ್ಲಬ್ ಚಾರಿಟೆಬಲ್ ಕಣ್ಣಿನ ಆಸ್ಪತ್ರೆ ಮತ್ತು ಮೈಸೂರು ಜಿಲ್ಲಾ ಅಂಧತ್ವ ನಿವಾರಣೆ ಸಂಸ್ಥೆ ಸಹಯೋಗದಲ್ಲಿ ನಾಳೆ (ಜು.6) ಬೆಳಗ್ಗೆ 10 ಗಂಟೆಗೆ ಟಿ.ಕೆ. ಲೇಔಟ್‌ನ ಶ್ರೀ ಬಿಸಿಲು ಮಾರಮ್ಮ ದೇವಸ್ಥಾನದ ಆವರಣದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವನ್ನು ಮಾಜಿ ಶಾಸಕ ವಾಸು ಉದ್ಘಾಟಿಸುವರು. ಶ್ರೀ ಬೀರೇಶ್ವರ ಸ್ವಾಮಿ ಟ್ರಸ್ಟ್ ಅಧ್ಯಕ್ಷ ಸಿ. ಜವರಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪಾಲಿಕೆ ಮಾಜಿ ಸದಸ್ಯ ಟಿ.ಬಿ. ಚಿಕ್ಕಣ್ಣ, ಪಾಲಿಕೆ ಸದಸ್ಯ ಜೆ.ಗೋಪಿ, ಸಮಾಜ ಸೇವಕರಾದ ಶ್ರೀಮತಿ ಸುಶೀಲ ಮರಿಗೌಡ ಮತ್ತು ಜಯ ಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್ ಅಧ್ಯಕ್ಷ ಬಿ.ಎಂ.ನಾಗೇಶ್ ಭಾಗವಹಿಸುವರು.

ಒಂದನೇ ಪುಟದಿಂದ

ಸೆ.9ರವರೆಗೆ ಮತ್ತೆ ಅವಕಾಶ

ರಿಯಾಯಿತಿ ನೀಡಿದಾಗ ವಾಹನಗಳ ಮಾಲೀಕರು ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಮುಗಿಬಿದ್ದು ದಂಡ ಪಾವತಿಸಿ ಬಾಕಿ ಇ–ಚಲನ್ ಪ್ರಕರಣ ಗಳನ್ನು ಇತ್ಯರ್ಥಗೊಳಿಸಿಕೊಂಡಿದ್ದರು. 2023ರ ಫೆಬ್ರವರಿ 3ರಿಂದ 11ರವರೆಗೆ ಮೈಸೂರು ನಗರದಲ್ಲಿ 5,19,418 ಪ್ರಕರಣ ಗಳಲ್ಲಿ 11,30,58,650 ರೂ. ದಂಡ ಪಾವತಿಸಿದ್ದರು. ಮತ್ತೆ ಶೇ. 50ರ ರಿಯಾ ಯಿತಿಯನ್ನು ವಿಸ್ತರಿಸಿದಾಗ ಮಾರ್ಚ್ 4ರಿಂದ 18ರವರೆಗೆ 1,71,603 ಪ್ರಕರಣ ಗಳಲ್ಲಿ 3,32,60,500 ರೂ. ದಂಡವನ್ನು ಸಾರ್ವಜನಿಕರು

ಪಾವತಿಸಿದ್ದರು. ಅದರಂತೆ ಒಟ್ಟು 6,91,021 ಸಂಚಾರ ನಿಯಮ ಪ್ರಕರಣಗಳಲ್ಲಿ 15,63,19,150 ರೂ.ಗಳನ್ನು ದಂಡದ ರೂಪದಲ್ಲಿ ಪಾವತಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ರಿಯಾಯಿತಿಯಲ್ಲಿ ದಂಡದ ಹಣ ಪಾವತಿಸಲು ಮೈಸೂರಿನ ದೇವರಾಜ ಮೊಹಲ್ಲಾದ ದೇವರಾಜ ಸಂಚಾರ ಠಾಣೆ, ಜೆಎಲ್‌ಬಿ ರಸ್ತೆಯ ಲಕ್ಷ್ಮೀಪುರಂ ಠಾಣೆ ಪಕ್ಕದ ಕೆ.ಆರ್. ಸಂಚಾರ ಠಾಣೆ, ವಿವಿ ಮೊಹಲ್ಲಾದಲ್ಲಿರುವ ವಿವಿ ಪುರಂ ಸಂಚಾರ ಠಾಣೆ, ಸೇಂಟ್ ಫಿಲೋಮಿನಾ ಚರ್ಚ್ ಬಳಿ ಅಶೋಕ ರಸ್ತೆಯಲ್ಲಿರುವ ಎನ್.ಆರ್. ಸಂಚಾರ ಠಾಣೆ, ಕುರುಬಾರಹಳ್ಳಿ ಸರ್ಕಲ್ ಬಳಿಯ ಸಿದ್ಧಾರ್ಥ ಸಂಚಾರ ಠಾಣೆಗಳಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ತಿಳಿಸಿದ್ದಾರೆ.

ಮಿತಿ ಕ್ರಮಕ್ಕೆ ವಾಹನ ಚಾಲಕರ ಆಕ್ಷೇಪ

ಕಂಟ್ರಿ ವೇರ್ ಪೊಲೀಸ್ ಬ್ಯಾರಿಕೇಡ್ಸ್ ಆರ್ ಪ್ಲೇಸ್ಡ್ ಆನ್ ಎನ್ ಎಕ್ಸ್‌ಪ್ರೆಸ್‌ವೇ ಟು ಕಂಟ್ರೋಲ್ ಸ್ಪೀಡ್" ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾರ್ತಿಕ್ ಎಂಬುವರು "ನಿಮ್ಮ ಬ್ಯಾರಿಕೇಡ್‌ಗಳು ಮತ್ತಷ್ಟು ಜನರನ್ನು ಕೊಲ್ಲುತ್ತವೆ" ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಲಕ್ಕಿ ಲಕ್ಷ್ಮಣ್ ಎಂಬುವರು ಎಕ್ಸ್‌ಪ್ರೆಸ್‌ವೇನಲ್ಲಿರುವ ಬ್ಯಾರಿಕೇಡ್‌ಗಳ ಅಂಚಿನಲ್ಲಿ ಪೊಲೀಸ್ ವಾಹನಗಳ ನಿಲ್ಲಿಸಲಾಗಿದೆ. ಇದರಿಂದಾಗಿ ವಾಹನಗಳು ಸರಾಗವಾಗಿ ಚಲಿಸಲು ಅಡಚಣೆಯಾಗಿ ಎಕ್ಸ್‌ಪ್ರೆಸ್‌ವೇನಲ್ಲಿ ಟ್ರಾಫಿಕ್ ಜಾಮ್ ಉಂಟಾಗುತ್ತದೆ ಎಂದಿದ್ದಾರೆ. ಸೈನ್ ಬೋರ್ಡ್‌ನಲ್ಲಿ ನಮೂದಿಸಿರುವ ವೇಗದ ಮಿತಿ ಹಾಗೂ ಪ್ರತ್ಯೇಕ ಲೇನ್‌ಗಳ ಬಗ್ಗೆಯೂ ಆಕ್ಷೇಪಿಸಿ, ಇದು ಎಕ್ಸ್‌ಪ್ರೆಸ್ ಹೈವೇ ಬದಲು ನಾರ್ಮಲ್ ಹೈವೇ ಎಂದು ಹೆಸರಿಸಿ ಜಾಡಿಸಿದ್ದಾರೆ.

ಗ್ರಾಪಂ ಪಿಡಿಓ ಹುದ್ದೆ ಶೀಘ್ರವೇ ಭರ್ತಿ

ಮಾಡಲಾಗುವುದು ಎಂದು ತಿಳಿಸಿದರು. ಗ್ರಾಮ ಪಂಚಾಯಿತಿಗಳಿಗೆ ಕಾರ್ಯದರ್ಶಿ ಗ್ರೇಡ್ 1 ಅಡಿಯಲ್ಲಿ 2194 ಹುದ್ದೆಗಳು ಮಂಜೂರಾಗಿವೆ. ಈ ಪೈಕಿ 1590 ಹುದ್ದೆ ಭರ್ತಿಯಾಗಿದೆ. 604 ಹುದ್ದೆಗಳು ಖಾಲಿ ಇವೆ. ಅದೇ ರೀತಿ ಗ್ರೇಡ್ 2 ಅಡಿಯಲ್ಲಿ 3827 ಹುದ್ದೆ ಮಂಜೂರಾಗಿದ್ದರೆ, 3108 ಹುದ್ದೆ ಭರ್ತಿಯಾಗಿವೆ. 719 ಹುದ್ದೆಗಳು ಖಾಲಿ ಇವೆ. ದ್ವಿತೀಯ ದರ್ಜೆ ಲೆಕ್ಕಸಹಾಯಕ ಹುದ್ದೆಗಳು 2579 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 2234 ಹುದ್ದೆಗಳನ್ನು ತುಂಬಲಾಗಿದೆ. 345 ಹುದ್ದೆಗಳು ಖಾಲಿ ಇದ್ದು, ಎಲ್ಲಾ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು ಎಂದು ಹೇಳಿದರು.



ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಮೈಸೂರು ನಗರದ ಬೋಗಾದಿಯ ಶಾರದಾನಗರ ರೈಲ್ವೆ ಬಡಾವಣೆಯ ಶರಣು ಕುಟೀರದಲ್ಲಿ ವಚನಗುಮ್ಮಟ ಡಾ.ಫ.ಗು ಹಳಕಟ್ಟಿ ಮತ್ತು ನಿಜಸುಖಿ ಹಡಪದ ಅಪ್ಪಣ್ಣರವರ ಜಯಂತಿಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ವಚನ ಕುಮಾರಸ್ವಾಮಿ, ರೂಪ ಕುಮಾರಸ್ವಾಮಿ, ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ವಾಜಂತ್ರಿ, ಕೇಂದ್ರೀಯ ಸಂಚಾಲಕರಾದ ಕಾವೇರಿ ವಾಜಂತ್ರಿ, ವಿ. ಲಿಂಗಣ್ಣ, ನಿವೃತ್ತ ಮುಖ್ಯ ಆರೋಗ್ಯ ಮೇಲ್ವಿಚಾರಣಾಧಿಕಾರಿ ಎಸ್.ಪಿ ರಾಜೇಂದ್ರಪ್ಪ, ನಿವೃತ್ತ ಹಿರಿಯ ಶಿಕ್ಷಕ ಮೃತ್ಯುಂಜಯ, ವಚನ ಉಪಸ್ಥಿತರಿದ್ದರು.

ಹಣಕಾಸು ಸಂಸ್ಥೆ ಉದ್ಯೋಗಿ ಅನುಮಾನಾಸ್ಪದ ಸಾವು



ಹುಣಸೂರು, ಜು.5– ತಾಲೂಕಿನ ಬಿಳಿಕೆರೆಯ ಕೆರೆಯ ಬಳಿಯ ಪೊದೆಯೊಂದರಲ್ಲಿ ಯುವಕನೊಬ್ಬ ಅನುಮಾನಾಸ್ಪದವಾಗಿ ಮೃತ ಪಟ್ಟಿದ್ದಾನೆ. ತಾಲೂಕಿನ ಕೊಳಗಟ್ಟ ಗ್ರಾಮದ ಸಿದ್ದೇಶ್ ಅವರ ಮಗ ಅರುಣ(21) ಎಂಬಾತನೆ ಮೃತಪಟ್ಟಿರುವ ನತದೃಷ್ಟ ಯುವಕನಾಗಿದ್ದಾನೆ.

ಘಟನೆ ವಿವರ: ನಿನ್ನೆ ಮಧ್ಯಾಹ್ನ ಮೂರು ಘಂಟೆ ಸಮಯದಲ್ಲಿ ತನ್ನ ಬೈಕ್‌ನಲ್ಲಿ ಮನೆಯಿಂದ ಹೊರಟ ಅರುಣ ಸಂಜೆ 5ರ ಸುಮಾರಿಗೆ ತನ್ನ ಮೊಬೈಲ್ ಮೂಲಕ ಮೆಸೇಜ್ ಮಾಡಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಸ್ನೇಹಿತ ಗಿರೀಶ್ ಮತ್ತಿತರರಿಗೆ ಸಂದೇಶ ಕಳುಹಿಸಿದ್ದಾನೆ.

ಈ ವಿಚಾರ ಮನೆಯವರಿಗೆ ತಿಳಿಸಿ ಹುಡುಕಾಟ ಶುರು ಮಾಡಿದಾಗ ನಿಮ್ಮ ಮಗ ಸಂಜೆ ಬಿಳಿಕೆರೆ ಹತ್ತಿರ ಇದ್ದ ಎಂದು ಹೇಳಿದ ಮಾಹಿತಿ ಮೇರೆಗೆ ಕೆರೆಯ ಸುತ್ತಮುತ್ತ ಹುಡುಕಾಟ ಮಾಡಿದಾಗ ಕೆರೆಯ ಬಯಲಿನ ಪೊದೆಯೊಂದರಲ್ಲಿ ಮೃತದೇಹ ಪತ್ತೆಯಾಗಿದೆ. ಸಮೀಪದಲ್ಲೇ ಮೃತ ಅರುಣನ ಬೈಕ್ ಸಹ ನಿಂತಿದ್ದು ಹಣದ ವಿಚಾರಕ್ಕಾಗಿ ಯಾರೋ ಕೆರೆಯ ಬಯಲಿಗೆ ಕರೆದೊಯ್ದು ಹತ್ಯೆ ಮಾಡಿರಬಹುದು ಎಂದು ಮನೆಯವರು ಅನುಮಾನ ವ್ಯಕ್ತಪಡಿಸಿದ್ದಾರೆ.

ಅಲ್ಲದೆ ಈ ಸಂಬಂಧ ಮೃತ ಅರುಣನ ತಾಯಿ ಲತಾರವರು ನನ್ನ ಮಗ ಕೆ.ಆರ್. ನಗರ ಫೈನಾನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದು ಹಣಕಾಸಿನ ವಿಚಾರಕ್ಕೆ ಯಾರೋ ನನ್ನ ಮಗನನ್ನು ಸಾಯಿಸಿರಬಹುದು ನನ್ನ ಮಗನ ಮುಖ ಮತ್ತಿತರ ಕಡೆಗಳಲ್ಲಿ ಗಾಯದ ಗುರುತುಗಳಿವೆ ತನಿಖೆ ಮಾಡಿ ಎಂದು ಪೊಲೀಸರಿಗೆ ದೂರು ನೀಡಿದ್ದಾರೆ. ಮೃತನ ಅಂತ್ಯಕ್ರಿಯೆ ಬುಧವಾರ ಸಂಜೆ ಕೆಳಗಟ್ಟ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಈ ಸಂಬಂಧ ಬಿಳಿಕೆರೆ ಪೊಲೀಸರು ದೂರು ದಾಖಲು ಮಾಡಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ. ಮೃತದೇಹವನ್ನು ಮೈಸೂರಿಗೆ ಕೆಆರ್ ಆಸ್ಪತ್ರೆಗೆ ಕಳುಹಿಸಿ ಮರಣೋತ್ತರ ಪರೀಕ್ಷೆ ಮಾಡಿ ನಂತರ ವಾರಸುದಾರರಿಗೆ ನೀಡಲಾಯಿತು. ಮೃತನ ತಾಯಿ ನೀಡಿರುವ ದೂರಿನ ಸಂಬಂಧ ತನಿಖೆ ನಡೆಯುತ್ತಿದೆ

ಪದೇ ಪದೆ ಎದ್ದು ನಿಂತು ಮಾತಾಡಿದ್ರೆ ನಿಮ್ಮನ್ನು ವಿಪಕ್ಷ ನಾಯಕ ಮಾಡುತ್ತಾರೆ ಅಂದುಕೊಂಡಿದ್ದೀರಾ?

ಯತ್ನಾಳ್ ಮೇಲೆ ಸಿದ್ದರಾಮಯ್ಯ ವ್ಯಂಗ್ಯಾಸ್ತ್ರ ಪ್ರಯೋಗ



ಬೆಂಗಳೂರು: ವಿರೋಧ ಪಕ್ಷದ ನಾಯಕ ನಿಲ್ಲದೇ ವಿಧಾಸಭೆ ಅಧಿವೇಶನ ನಡೆಯುತ್ತಿದ್ದು, ಇದಕ್ಕೆ ಮಾತಿನಲ್ಲೇ ಆಡಳಿತರೂಢ ಕಾಂಗ್ರೆಸ್ ನಾಯಕರು, ಬಿಜೆಪಿ ಬಗ್ಗೆ ವ್ಯಂಗ್ಯವಾಡುತ್ತಿದ್ದಾರೆ.

ಇಂದು ಸದನದಲ್ಲಿ ಪದೇ ಪದೆ ಎದ್ದೆದ್ದು ಮಾತನಾಡುತ್ತಿದ್ದ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ನಿಮ್ಮನ್ನು ವಿಪಕ್ಷ ನಾಯಕನಾಗಿ ಮಾಡುತ್ತಾರೆ ಅಂದುಕೊಂಡಿದ್ದೀರಾ ಎಂದು ಕಾಲೆಳೆದರು.

ನಿಲುವಳಿ ಪ್ರಸ್ತಾವ ಮಂಡನೆ ವೇಳೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದ ವೇಳೆ ಮಧ್ಯೆ ಪ್ರವೇಶಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಿಮ್ಮನ್ನು ವಿಪಕ್ಷ ನಾಯಕರಾಗಿ ಮಾಡ್ತಾರೋ ಇಲ್ವೋ ಗೊತ್ತಿಲ್ಲ. ಇಲ್ಲಿ ಎದ್ದೆದ್ದು ನಿಂತು ಮಾತಾಡಿದ್ರೆ ನಿಮ್ಮನ್ನು ವಿಪಕ್ಷ ನಾಯಕ ಮಾಡುತ್ತಾರೆ ಅಂತಾ ಅಂದುಕೊಂಡಿದ್ದೀರಾ ಎಂದು ಟಾಂಗ್ ಕೊಟ್ಟರು.

ಸದನ ಆರಂಭವಾಗಿ 3 ದಿನ ಆದರೂ ವಿಪಕ್ಷ ನಾಯಕ ಆಯ್ಕೆಯಾಗಿಲ್ಲ. ಇಲ್ಲಿ ಬಂದು ಬುರುಡೆ ಹೊಡೆಯುತ್ತಿದ್ದೀರಿ. ಅಶೋಕ್ ಮಾತಾಡುವುದು ನೋಡಿದರೆ ಮಹಿಳೆಯರಿಗೆ ಫ್ರೀ ಕೊಟ್ಟಿರುವುದನ್ನೇ ವಿರೋಧಿಸುತ್ತಿರುವಂತೆ ಕಾಣುತ್ತಿದೆ ಎಂದು ಶಾಸಕ ಅಶೋಕ್‌ಗೆ ಕಿಚಾಯಿಸಿದರು.

ಮುಂದಿನ 3 ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ಪತನ



ದಾವಣಗೆರೆ: ಸುಳ್ಳು ಭರವಸೆಗಳನ್ನು ನೀಡಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಮುಂದಿನ ಮೂರು ತಿಂಗಳಲ್ಲಿ ಪತನವಾಗಲಿದೆ ಎಂದು ಬಿಜೆಪಿ ಹಿರಿಯ ನಾಯಕ ಕೆ.ಎಸ್.ಈಶ್ವರಪ್ಪ ಹೇಳಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಅವರ 71ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಲುವಾಗಿ ಬುಧವಾರ ನಗರಕ್ಕೆ ಬಂದಿದ್ದ ಅವರು ಮಾಧ್ಯಮದವರ ಜೊತೆ ಮಾತನಾಡಿದರು.

ಮಹಾರಾಷ್ಟ್ರದ ರೀತಿಯಲ್ಲೇ ರಾಜ್ಯದಲ್ಲೂ ಕ್ಷಿಪ್ರ ರಾಜಕೀಯ ಬೆಳವಣಿಗೆಗಳು ನಡೆಯಲಿವೆ. ಅಜಿತ್ ಪವಾರ್ ಅವರು ಎನ್‌ಸಿಪಿ ತೊರೆದು ಬಿಜೆಪಿಗೆ ಬೆಂಬಲ ಸೂಚಿಸಿದ ಹಾಗೆ ರಾಜ್ಯ ಕಾಂಗ್ರೆಸ್‌ನ ಕೆಲ ನಾಯಕರೂ ಆ ಪಕ್ಷದಿಂದ ಹೊರ ಬರುತ್ತಾರೆ ಎಂದು ಹೇಳಿದರು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಹಳ ಕಾಲ ಇರುವುದಿಲ್ಲ. ಅದರ ಅವಧಿ ಮೂರು ತಿಂಗಳು ಮಾತ್ರ, ರಾಜ್ಯ ರಾಜಕಾರಣದಲ್ಲಿ ಮಹತ್ವದ ಬೆಳವಣಿಗೆ ನಡೆಯುತ್ತೆ. ಕಾದು ನೋಡಿ ಎಂದರು.

ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದಿದ್ದೇವೆ ಎಂಬ ಕೊರಗಿನಲ್ಲೇ ಕಾಂಗ್ರೆಸ್ ಪಕ್ಷದ ಶಾಸಕರು ದಿನ ದೂಡುತ್ತಿದ್ದಾರೆ ಎಂದರು. ವಿರೋಧ ಪಕ್ಷದ ನಾಯಕನ ನೇಮಕ ವಿಳಂಬವಾಗಿರುವ ಕುರಿತ ಪ್ರಶ್ನೆಗೆ, ಶೀಘ್ರವೇ ವಿರೋಧ ಪಕ್ಷದ ನಾಯಕ ಹಾಗೂ ರಾಜ್ಯ ಘಟಕದ ಅಧ್ಯಕ್ಷರನ್ನು ನೇಮಿಸಲಾಗುತ್ತದೆ. ಮುಂಬರುವ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಅತ್ಯಂತ ಸಮರ್ಥರಾದವರನ್ನು ಈ ಹುದ್ದೆಗಳಿಗೆ ನೇಮಕ ಮಾಡಲಾಗುತ್ತದೆ' ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕರಿಗೆ ಪಿಎಚ್.ಡಿ ಕಡ್ಡಾಯವಲ್ಲ; NET, SET, SLET ಪ್ರಮುಖ ಮಾನದಂಡ



ನವದೆಹಲಿ: ಸಹಾಯಕ ಪ್ರಾಧ್ಯಾಪಕರಾಗಲು ಇನ್ನುಮುಂದೆ ಪಿಎಚ್.ಡಿ ಕಡ್ಡಾಯವಲ್ಲ. ಇದು ಐಚ್ಛಿಕವಾಗಲಿದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಬುಧವಾರ ಪ್ರಕಟಿಸಿದೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇರ ನೇಮಕಾತಿಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET), ರಾಜ್ಯ ಅರ್ಹತಾ ಪರೀಕ್ಷೆ (SET) ಮತ್ತು ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆ (SLET) ಪ್ರಮುಖ ಮಾನದಂಡವಾಗಿದೆ ಎಂದು ಯುಜಿಸಿ ತಿಳಿಸಿದೆ. ಜುಲೈ 1, 2023ರಿಂದ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಪಿಎಚ್.ಡಿ ಕಡ್ಡಾಯವಲ್ಲ. ಅದು ಐಚ್ಛಿಕವಾಗಿರುತ್ತದೆ ಎಂದು ಯುಜಿಸಿ ಅಧ್ಯಕ್ಷ ಪ್ರೊ.ಎಂ.ಜಗದೇಶ್‌ಕುಮಾರ್ ಟ್ವೀಟ್ ಮೂಲಕ ತಿಳಿಸಿದ್ದಾರೆ. ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇರ ನೇಮಕಾತಿಗೆ NET/SET/SLET ಕನಿಷ್ಠ ಮಾನದಂಡವಾಗಿದೆ ಎಂದು ಹೇಳಿದ್ದಾರೆ.

ಜು.19ರಂದು ರಾಜ್ಯ ಮಟ್ಟದ ಯುವ ಕಬಡ್ಡಿ ಪಂದ್ಯಾವಳಿಯ ಸಮಾರೋಪ

ವಿಜೇತರಿಗೆ ಯದುವೀರ್ ಬಹುಮಾನ ವಿತರಣೆ

ಮೈಸೂರು,ಜು.5(ಬಿಎಲ್‌ಯು)– ಮೈಸೂರಿನಲ್ಲಿ ನಡೆಯುತ್ತಿರುವ ರಾಷ್ಟ್ರ ಮಟ್ಟದ ಯುವ ಕಬಡ್ಡಿ ಪಂದ್ಯಾವಳಿಯ ಸಮಾರೋಪ ಸಮಾರಂಭ ಜುಲೈ 19 ರಂದು ನಡೆಯಲಿದ್ದು, ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಜೇತರಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ಯುವ ಕಬಡ್ಡಿ ಸಂಚಾಲಕ ಬಿಂದು ಕಿರಣ್ ತಿಳಿಸಿದರು.

ಮೈಸೂರಿನ ಚಾಮುಂಡಿವಿಹಾರ ಸ್ಟೇಡಿಯಂನಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಪುರಾತನ ಕ್ರೀಡೆಗಳಲ್ಲಿ ಕಬಡ್ಡಿ ಕೂಡ ಒಂದು. ಗ್ರಾಮೀಣ ಕ್ರೀಡೆಯಾಗಿರುವ ಕಬಡ್ಡಿಗೆ 4 ಸಾವಿರ ವರ್ಷಗಳ ಇತಿಹಾಸವಿದೆ. ಆದರೆ ಆಧುನಿಕ ಕ್ರೀಡೆಗಳ ಭರಾಟೆಯಲ್ಲಿ ಕಬಡ್ಡಿ ಮರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಬಡ್ಡಿ ಕ್ರೀಡೆಯನ್ನು ಉತ್ತೇಜಿಸಲು ಈ ಪಂದ್ಯಾವಳಿ ನಡೆಸಲಾಗುತ್ತಿದೆ ಎಂದರು.

ರಾಷ್ಟ್ರ ಮಟ್ಟದ ಕಬಡ್ಡಿ ಪಂದ್ಯಾವಳಿ ಪ್ರತಿ ತಿಂಗಳು ಭಾರತದ ಒಂದೊಂದು ರಾಜ್ಯದಲ್ಲಿ ನಿರಂತರವಾಗಿ ನಡೆಯುತ್ತದೆ. ಅದರಂತೆ ಈಗ ಮೈಸೂರಿನಲ್ಲಿ ಯುವ ಕಬಡ್ಡಿ ಪಂದ್ಯಾವಳಿ ನಡೆಯುತ್ತಿದ್ದು, ಜೂನ್ 17ರಿಂದ ಆರಂಭವಾಗಿದೆ. ಜುಲೈ 19 ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಜೇತರಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ತಿಳಿಸಿದರು.

ಯುವ ಕಬಡ್ಡಿ ಮತ್ತು ಕರ್ನಾಟಕ ಕಬಡ್ಡಿ ಅಸೋಸಿಯೇಷನ್ ಈ ಪಂದ್ಯಾವಳಿ ಆಯೋಜನೆ ಮಾಡಿದೆ. 23 ವರ್ಷದೊಳಗಿನ 120 ಆಟಗಾರರು ಭಾಗವಹಿಸಿದ್ದು, ಕರ್ನಾಟಕ ಸೇರಿದಂತೆ ಭಾರತದ 7 ರಾಜ್ಯಗಳ ಕಬಡ್ಡಿ ತಂಡಗಳು ಆಟವಾಡುತ್ತಿವೆ. ಒಂದು ತಿಂಗಳ ಪಂದ್ಯಾವಳಿ ವೇಳೆ ಸೇಫ್ ಅಂಡ್ ಕ್ಲೀನ್ ಸ್ಪೋರ್ಟ್ಸ್ ಹಾಗೂ ಗೋ ಗ್ರೀನ್ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿಂದು ಕಿರಣ್ ಹೇಳಿದರು. ಕರ್ನಾಟಕ ಕಬಡ್ಡಿ ಅಸೋಸಿಯೇಷನ್ ಕಾರ್ಯ ನಿರ್ವಹಣಾಧಿಕಾರಿ ವಿಕಾಸ್ ಗೌತಮ್ ಅವರು ಮಾಧ್ಯಮ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜು.17, ಬೆಂಗಳೂರಲ್ಲಿ ವಿಪಕ್ಷ ನಾಯಕರ ಸಭೆ

ಬೆಂಗಳೂರು: ರಾಷ್ಟ್ರಮಟ್ಟದಲ್ಲಿ ಬಿಜೆಪಿಗೆ ಭಾರೀ ಸ್ಪರ್ಧೆಯೊಡ್ಡಲು ಪರ್ಯಾಯ ಶಕ್ತಿ ರಚಿಸಲು ವಿಪಕ್ಷಗಳೆಲ್ಲಾ ಒಗ್ಗೂಡಿದ್ದು, ಎಲ್ಲಾ ಪ್ರತಿಪಕ್ಷ ನಾಯಕರ 2ನೇ ಸುತ್ತಿನ ಸಭೆ ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೊಟೇಲ್‌ನಲ್ಲಿ ನಡೆಯಲಿದೆ. ಸುಮಾರು 80 ಮಂದಿ ವಿಪಕ್ಷ ನಾಯಕರು ಸಭೆಯಲ್ಲಿ ಭಾಗವಹಿಸಲಿದ್ದು, ಜು.17ರಂದು ರಾತ್ರಿ ಸಿಎಂ ಸಿದ್ದರಾಮಯ್ಯ ಔತಣಕೂಟ ಏರ್ಪಡಿಸಿದ್ದಾರೆ. ಆರಂಭದಲ್ಲಿ ಜು.13 ಮತ್ತು 14ರಂದು ಸಭೆ ದಿನಾಂಕಗಳು ನಿಗದಿಯಾಗಿದ್ದವು. ಆದರೆ ಅದನ್ನು ಮುಂದೂಡಿ ಇದೀಗ ಜು.17 ಮತ್ತು 18ರಂದು ಬೆಂಗಳೂರಿನಲ್ಲಿಯೇ ನಡೆಸಲು ನಿರ್ಧರಿಸಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಟ್ವೀಟ್ ಮೂಲಕ ತಿಳಿಸಿದ್ದಾರೆ.

ಪತ್ನಿ ಹತ್ಯೆ: ಪತಿಗೆ ಜೀವಾವಧಿ ಶಿಕ್ಷೆ

ಮೈಸೂರು, ಜು.5(ಆರ್‌ಕೆ)– ಕಬ್ಬಿಣದ ಕುರ್ಪಿಯಿಂದ ತಲೆಗೆ ಹೊಡೆದು ಪತ್ನಿ ಹತ್ಯೆಗೈದಿದ್ದ ಪತಿಗೆ ಮೈಸೂರು ನ್ಯಾಯಾಲಯವು ಜೈಲು ಶಿಕ್ಷೆ ವಿಧಿಸಿದೆ.

ಮೈಸೂರು ತಾಲೂಕು, ಜಯಪುರ ಹೋಬಳಿ, ನಾರ್ತಹಳ್ಳಿ ಗ್ರಾಮದ ರಮೇಶ ನಾಯಕ ಶಿಕ್ಷೆಗೊಳಗಾದವನಾಗಿದ್ದು, ಈತ ಸೈಕಲ್‌ನಲ್ಲಿ ಹೂ ಮಾರಿಕೊಂಡಿದ್ದ ಆತ, ಕುಡಿಯುವ ಚಟಕ್ಕೆ ಬಲಿಯಾಗಿ ನಿತ್ಯ ಹೆಂಡತಿ ಕುಮಾರಿ ಹಾಗೂ ಮಕ್ಕಳಿಗೆ ಹೊಡೆದು ಹಿಂಸೆ ನೀಡುತ್ತಿದ್ದ.

2021ರ ಫೆಬ್ರವರಿ 25ರಂದು ಮುಂಜಾನೆ ಮನೆಯಲ್ಲಿದ್ದ ಕಬ್ಬಿಣದ ಅಲ್ಲೆ (ಕುರ್ಪಿ) ಯಿಂದ ಕುಮಾರಿಯ ತಲೆಗೆ ಹೊಡೆದು ಕೊಲೆ ಮಾಡಿದ್ದ. ರಮೇಶನಾಯಕನ ವಿರುದ್ಧ ಪ್ರಕರಣ ದಾಖಲಿಸಿದ್ದ ಜಯಪುರ ಠಾಣೆ ಪೊಲೀಸರು, ವಿಚಾರಣೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗುರುರಾಜ್ ಸೋಮಕ್ಕಲವರ್ ಅವರು ಸಾಕ್ಷ್ಯಾಧಾರಗಳಿಂದ ಕೃತ್ಯ ಸಾಬೀತಾದ ಹಿನ್ನೆಲೆಯಲ್ಲಿ ಕಲಂ 498(ಎ) ಅಡಿ ಆರೋಪಿಗೆ 2 ವರ್ಷ ಕಠಿಣ ಶಿಕ್ಷೆ, 1000 ರೂ. ದಂಡ, ಕಲಂ 302 ಅಡಿ ಜೀವಾವಧಿ ಶಿಕ್ಷೆ ಹಾಗೂ 5,000 ರೂ. ದಂಡ ವಿಧಿಸಿ ಆದೇಶ ನೀಡಿದ್ದಾರೆ.

ಸರ್ಕಾರದ ಪರವಾಗಿ ಐದನೇ ಅಧಿಕ ಸರ್ಕಾರಿ ಅಭಿಯೋಜಕಿ ಎಂ.ಎಸ್.ಮಂಜುಳಾ ಅವರು ವಾದ ಮಂಡಿಸಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಅಂದಿನ ಜಯಪುರ ಸರ್ಕಲ್ ಇನ್ಸ್‌ಪೆಕ್ಟರ್ ಎಂ.ಮಹೇಶ್, ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಮೈಸೂರಿನ ಪಾರಂಪರಿಕ ಕಟ್ಟಡಗಳ ಪುನರುಜ್ಜೀವನಕ್ಕೆ 1,000 ಕೋಟಿ ರೂ. ವಿಶೇಷ ಅನುದಾನ ಅಗತ್ಯ

ರಾಜ್ಯ ಬಜೆಟ್‌ನಲ್ಲಿ ಕಲ್ಪಿಸುವಂತೆ ಮುಖ್ಯಮಂತ್ರಿಗಳಿಗೆ ಮೇಯರ್ ಮನವಿ




ಮೈಸೂರು, ಜು. 5(ಆರ್‌ಕೆ)– ಶಿಥಿಲಾವಸ್ಥೆಯಲ್ಲಿರುವ ಮೈಸೂರಿನ ಪಾರಂಪರಿಕ ಕಟ್ಟಡಗಳ ಪುನರುಜ್ಜೀವನಕ್ಕೆ 1000 ಕೋಟಿ ರೂ. ವಿಶೇಷ ಅನುದಾನ ನೀಡುವಂತೆ ಮೇಯರ್ ಶಿವ್‌ಕುಮಾರ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೋರಿಕೊಂಡಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಜುಲೈ 7ರಂದು ಮಂಡಿಸಲಿರುವ ರಾಜ್ಯ ಬಜೆಟ್‌ನಲ್ಲಿ ಸಾಂಸ್ಕೃತಿಕ ನಗರಿಯಲ್ಲಿರುವ ಅತೀ ಹಳೆಯ ಪಾರಂಪರಿಕ ಕಟ್ಟಡಗಳನ್ನು ರಿಪೇರಿ ಮಾಡಿ ಸದೃಢಗೊಳಿಸಿ ಸಂರಕ್ಷಿಸಲು 1000 ಕೋಟಿ ರೂ. ವಿಶೇಷ ಅನುದಾನವನ್ನು ಮೀಸಲಿರಿಸುವಂತೆ ಮನವಿ ಮಾಡಲಾಗಿದೆ ಎಂದರು.

ಮಹಾರಾಜ, ಮಹಾರಾಣಿ ಕಾಲೇಜು, ವಾಣಿವಿಲಾಸ, ಮಂಡಿ ಮಾರುಕಟ್ಟೆ, ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್, ಸ್ಮಾರಕಗಳು ಸೇರಿದಂತೆ ಮೈಸೂರಿನ 100 ವರ್ಷ ಹಳೆಯದಾದ ಹಲವು ಪಾರಂಪರಿಕ ಕಟ್ಟಡಗಳು ಶಿಥಿಲಗೊಂಡು ಹಾಳಾಗುವ ಸ್ಥಿತಿಯಲ್ಲಿವೆ. ರಾಜ–ಮಹಾರಾಜರು ನಿರ್ಮಿಸಿದ ಈ ಅಪರೂಪದ ಪಾರಂಪರಿಕ ನಿರ್ಮಾಣಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಬೇಕಾಗಿರುವುದರಿಂದ ಮೈಸೂರು ಜಿಲ್ಲೆಯವರೇ ಆದ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ವಿಶೇಷ ಅನುದಾನ ಘೋಷಿಸಬೇಕೆಂದು ತಿಳಿಸಿದ್ದಾರೆ.






ಈಗಾಗಲೇ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿಯಿಂದ ಮೈಸೂರು ನಗರ ಪಾರಂಪರಿಕ ಕಟ್ಟಡಗಳ ಸ್ಥಿತಿ–ಗತಿ ಬಗ್ಗೆ ಅಧ್ಯಯನ ನಡೆಸಿದೆ. ಅದರ ವರದಿ ಆಧರಿಸಿ ಅವುಗಳನ್ನು ಪುನರುಜ್ಜೀವನಗೊಳಿಸುವುದು ಅವಶ್ಯವಾಗಿರುವುದರಿಂದ ಸರ್ಕಾರ ಮೈಸೂರು ಮಹಾನಗರ ಪಾಲಿಕೆಗೆ ವಿಶೇಷ ಅನುದಾನ ನೀಡಬೇಕು ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಅಲ್ಲದೇ ರಸ್ತೆ, ನೀರು, ಒಳಚರಂಡಿ, ಪಾರ್ಕ್, ಸ್ಮಶಾನಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗಾಗಿ ಮೈಸೂರಿಗೆ ವಿಶೇಷ ಪ್ಯಾಕೇಜ್ ನೀಡಬೇಕು, ಇಂದೋರ್ ಮಾದರಿ ಕಸ ಸಂಗ್ರಹ, ತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಛತೆಗಾಗಿ ಅಗತ್ಯವಿರುವ ಹೆಚ್ಚುವರಿ ಪೌರಕಾರ್ಮಿಕರನ್ನು ನೇಮಿಸಲು ಅನುಮತಿ ನೀಡಿ ಆರ್ಥಿಕ ನೆರವು ನೀಡಬೇಕೆಂದು ಮುಖ್ಯಮಂತ್ರಿಗಳನ್ನು ಕೋರಿದ್ದಾರೆ. ಆಸ್ತಿ ತೆರಿಗೆ, ನೀರಿನ ಶುಲ್ಕ, ಪಾಲಿಕೆ ಕಟ್ಟಡಗಳ ಬಾಡಿಗೆ, ಉದ್ದಿಮೆ ರಹದಾರಿ ಶುಲ್ಕ ಸೇರಿದಂತೆ ವಿವಿಧ ಬಾಬ್ತಿನಿಂದ ಬರುವ ಸಂಪನ್ಮೂಲದಲ್ಲಿ ಮೈಸೂರು ನಗರದ ನಾಗರಿಕ ಸೌಲಭ್ಯ ಒದಗಿಸುವುದು, ನಿರ್ವಹಣೆ ದುಸ್ತರವಾಗಿರುವುದರಿಂದ ಸರ್ಕಾರ ವಿಶೇಷ ಪ್ಯಾಕೇಜ್ ನೀಡಬೇಕೆಂದು ಮೇಯರ್ ಶಿವಕುಮಾರ್ ಆಗ್ರಹಿಸಿದ್ದಾರೆ.

ಬನ್ನಿಮಂಟಪದ ಜೋಡಿ ತೆಂಗಿನಮರ ರಸ್ತೆ ಅಭಿವೃದ್ಧಿಗೆ ಕಡೆಗೂ ಟೆಂಡರ್



ಮೈಸೂರು, ಜು.5(ಆರ್‌ಕೆ)–ಹಳ್ಳ-ಕೊಳ್ಳಗಳಿಂದ ಕೂಡಿರುವ ಮೈಸೂರಿನ ಬನ್ನಿಮಂಟಪದ ಜೋಡಿ ತೆಂಗಿನ ಮರ ರಸ್ತೆಗೆ ಕಡೆಗೂ ಮುಕ್ತಿ ಸಿಗುವ ಕಾಲ ಸನ್ನಿಹಿತವಾಗಿದೆ.

ಹೈವೇ ಸರ್ಕಲ್‌ನಿಂದ ಡಿಸ್ಟಿಲರಿ ಫ್ಯಾಕ್ಟರಿವರೆಗೆ ಗುಂಡಿಗಳನ್ನು ಮುಚ್ಚಿ ಡಾಂಬರು ಹಾಕಲು 50 ಲಕ್ಷ ರೂ. ಅಂದಾಜು ವೆಚ್ಚದ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ ಎಂದು ಮೇಯರ್ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಈ ಹಿಂದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಜೋಡಿ ತೆಂಗಿನಮರದ ರಸ್ತೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿ ಮಾಡಲಾಗಿತ್ತು. ಇದೀಗ ಉತ್ತರ ಭಾಗ (ಹೈವೇ ಸರ್ಕಲ್‌ನಿಂದ ಡಿಸ್ಟಿಲರಿ ಫ್ಯಾಕ್ಟರಿವರೆಗೆ) ಹಳ್ಳ-ಕೊಳ್ಳಗಳಿಂದ ಕೂಡಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿ ಬಂದಿದ್ದು, ರಿಪೇರಿ ಮಾಡುವಂತೆ ಒತ್ತಾಯಿಸಿರುವ ಹಿನ್ನೆಲೆಯಲ್ಲಿ ಪಾಲಿಕೆಯಿಂದ ಈ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡಿದ್ದೇವೆ ಎಂದು ಶಿವಕುಮಾರ್ ತಿಳಿಸಿದ್ದಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ, ತ್ರಿಚಕ್ರ ವಾಹನ ನಿಷೇಧಿಸಿ



ಬೆಂಗಳೂರು: ವಿಧಾನಪರಿಷತ್ ಕಲಾಪದಲ್ಲಿ ಬೆಂಗಳೂರು–ಮೈಸೂರು ದಶಪಥ ರಸ್ತೆ ಅಪಘಾತ ವಿಚಾರ ಸದ್ದು ಮಾಡಿದೆ. ಹೆದ್ದಾರಿಯಲ್ಲಿ ಬೈಕ್ ಹಾಗೂ ತ್ರಿಚಕ್ರ ವಾಹನಗಳ ಓಡಾಟ ನಿಷೇಧ ಮಾಡುವಂತೆ ಪರಿಷತ್ ಕಲಾಪದ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್ ನಾಯಕ ಮರಿತಿಬ್ಬೇಗೌಡ ಒತ್ತಾಯಿಸಿದ್ದಾರೆ.

ದಶಪಥ ರಸ್ತೆ ಸಾವಿನ ಹೆದ್ದಾರಿಯಾಗಿದೆ. 6 ತಿಂಗಳಲ್ಲಿ 512 ಅಪಘಾತಗಳಾಗಿವೆ. ಅದರಲ್ಲಿ ಇಲ್ಲಿಯವರೆಗೂ 123 ಜನ ಮೃತಪಟ್ಟಿದ್ದಾರೆ. 575 ಜನರಿಗೆ ತೀವ್ರ ಗಾಯಗಳಾಗಿವೆ. ಅಪಘಾತದಲ್ಲಿ ಅನೇಕ ಪ್ರಾಣಿಗಳು ಸತ್ತಿವೆ. ಈ ಹೆದ್ದಾರಿಯಲ್ಲಿ ಫೆನ್ಸಿಂಗ್ ಸರಿಯಾಗಿ ಆಗಿಲ್ಲ. ಮೇಲ್ಸೇತುವೆ ಮಳೆ ಬಂದರೆ ಸೋರುತ್ತಿದೆ. ಹೆದ್ದಾರಿ ಕೆಲಸ ಇನ್ನು 30% ಬಾಕಿ ಇದೆ. ಮದ್ದೂರು ಬಳಿ ಈಗ ಟೋಲ್ ಸಂಗ್ರಹ ಮಾಡುತ್ತಿದ್ದಾರೆ. ಆದರೆ ಸುರಕ್ಷಿತ ಕ್ರಮಗಳು ಸರಿಯಾಗಿ ಇಲ್ಲ ಎಂದಿದ್ದಾರೆ.



ಹೆದ್ದಾರಿಯಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಇಲ್ಲ. ಅಪಘಾತವಾದರೆ ಅಂಬುಲೆನ್ಸ್ ವ್ಯವಸ್ಥೆ ಇಲ್ಲ. ಈ ಬಗ್ಗೆ ರಾಜ್ಯ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ಕೂಡಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಇದರ ಬಗ್ಗೆ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದ್ದಾರೆ.

ಇದಕ್ಕೆ ಉತ್ತರ ನೀಡಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಇದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವ್ಯಾಪ್ತಿಗೆ ಬರುತ್ತದೆ. ಈಗಾಗಲೇ ಕೇಂದ್ರದ ಮಂತ್ರಿಗಳಿಗೆ ಮನವರಿಕೆ ಮಾಡಲಾಗಿದೆ. ಇಲಾಖೆ ಪ್ರಧಾನ ಕಾರ್ಯದರ್ಶಿಗಳು, ಪೊಲೀಸ್ ಅಧಿಕಾರಿಗಳು ಸಭೆ ಮಾಡಿ ಕ್ರಮಗಳನ್ನು ಸೂಚಿಸಿದ್ದಾರೆ. ಇದನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಗಮನಕ್ಕೆ ತಂದು ಸರಿ ಮಾಡಿಸುವ ಕೆಲಸ ಮಾಡಲಾಗುತ್ತದೆ ಎಂದು ಭರವಸೆ ನೀಡಿದ್ದಾರೆ.

ಚಂದ್ರಯಾನ–3: ಚಂದ್ರನ ಅಂಗಳಕ್ಕೆ ನೆಗೆಯಲು ಮಾರ್ಕ್–3 ಸಜ್ಜು



ಶ್ರೀಹರಿಕೋಟಾ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ)ಯ ಮಹತ್ವಾಕಾಂಕ್ಷೆಯ ಚಂದ್ರಯಾನ–3 ಯೋಜನೆಗೆ ಸಿದ್ಧತೆಗಳು ಭರದಿಂದ ಸಾಗಿದ್ದು, ಉಡಾವಣಾ ವಾಹನ ಮಾರ್ಕ್–3 (ಜಿಎಸ್‌ಎಲ್‌ವಿ ಎಂಕೆ–3)ರ ಜೋಡಣಾ ಕಾರ್ಯ ನಡೆದಿದೆ.

ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಬೃಹತ್ ಉಡಾವಣಾ ವಾಹನಕ್ಕೆ ಇಂಧನ ಪೂರೈಸುವ ಭಾಗವನ್ನು ಅಳವಡಿಸುವ ಕಾರ್ಯವನ್ನು ತಂತ್ರಜ್ಞರು ನಡೆಸಿದರು. ಭೂಮಿಯ ಏಕೈಕ ನೈಸರ್ಗಿಕ ಉಪಗ್ರಹ ಚಂದ್ರನ ಮೇಲೆ ನೌಕೆಯನ್ನು ಇಳಿಸುವ ಚಂದ್ರಯಾನ–3 ಜು.13ರಂದು ಆರಂಭವಾಗಲಿದೆ. ಇದು ಚಂದ್ರಯಾನ–2ರ ಮುಂದುವರಿದ ಭಾಗವಾಗಿದೆ. ಇದರ ಪ್ರಗತಿಯನ್ನು ಇಸ್ರೊ ತನ್ನ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದೆ.

ಪ್ರಧಾನಿ ಗ್ರಾಮೀಣ ಅವಾಸ್ ಯೋಜನೆಯಡಿ ವಸತಿರಹಿತರಿಗೆ ಮನೆ

ವಾರದಲ್ಲಿ ಗ್ರಾಮಸಭೆಗಳು ಫಲಾನುಭವಿಗಳ ಅಂತಿಮ ಪಟ್ಟಿ ಸಲ್ಲಿಕೆಗೆ ವಸತಿ ಸಚಿವ ಜಮೀರ್ ನಿರ್ದೇಶನ



ಬೆಂಗಳೂರು, ಜು.5(ಕೆಎಂಶಿ)– ಪ್ರಧಾನಮಂತ್ರಿ ಗ್ರಾಮೀಣ ಅವಾಸ್ ಯೋಜನೆಯಡಿ ಗ್ರಾಮೀಣ ಭಾಗದ ವಸತಿರಹಿತರಿಗೆ ಮನೆ ಕಟ್ಟಿಸಿಕೊಡುವ ಯೋಜನೆಗೆ ಗ್ರಾಮ ಸಭೆಗಳಿಂದ ಒಂದು ವಾರದಲ್ಲಿ ಫಲಾನುಭವಿಗಳ ಪಟ್ಟಿ ಅಂತಿಮಗೊಳಿಸಿ ಕಳುಹಿಸುವಂತೆ ವಸತಿ ಸಚಿವ ಜಮೀರ್ ಅಹಮದ್‌ಖಾನ್ ನಿರ್ದೇಶನ ನೀಡಿದ್ದಾರೆ.

ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ರಾಜ್ಯಕ್ಕೆ 1.41 ಲಕ್ಷ ಮನೆ ಹಂಚಿಕೆಯಾಗಿದ್ದು ಇದುವರೆಗೂ 63 ಸಾವಿರ ಮನೆಗೆ ಫಲಾನುಭವಿಗಳ ಆಯ್ಕೆಯಾಗಿದ್ದಾರೆ. ಉಳಿದ 78 ಸಾವಿರ ಮನೆಗಳಿಗೆ ಫಲಾನುಭವಿಗಳ ಆಯ್ಕೆ ಮಾಡಬೇಕಾಗಿದೆ. ಸಂಬಂಧಪಟ್ಟ ಶಾಸಕರು ಈ ಬಗ್ಗೆ ಗಮನಹರಿಸಿ ತಕ್ಷಣ ಗ್ರಾಮ ಸಭೆಗಳಿಂದ ಫಲಾನುಭವಿಗಳ ಪಟ್ಟಿ ಅಂತಿಮಗೊಳಿಸಲು ಖುದ್ದು ಆಸಕ್ತಿ ವಹಿಸಬೇಕು ಎಂದು ಜಮೀರ್ ಅಹಮದ್ ಹೇಳಿದ್ದಾರೆ.

ಈಗಾಗಲೇ ಯೋಜನೆಯ ಫಲಾನುಭವಿಗಳ ಆಯ್ಕೆಗೆ ಎರಡು ಬಾರಿ ಗಡುವು ವಿಸ್ತರಣೆ ಮಾಡಿದ್ದರೂ ಪಟ್ಟಿ ನೀಡಿಲ್ಲ. ಇದೀಗ ಜುಲೈ 20ಕ್ಕೆ ಪಟ್ಟಿ ಅಂತಿಮಗೊಳಿಸಲು ಡೆಡ್‌ಲೈನ್ ನೀಡಲಾಗಿದೆ. ಹೀಗಾಗಿ ಇದುವರೆಗೆ ಪಟ್ಟಿ ಅಂತಿಮಗೊಳಿಸದ ಶಾಸಕರು ಕೂಡಲೇ ಕ್ರಮ ವಹಿಸಬೇಕು. ಇಲ್ಲದಿದ್ದರೆ ಯೋಜನೆ ಕೇಂದ್ರಕ್ಕೆ ವಾಪಸ್ ಹೋಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ವಸತಿ ರಹಿತರ ಪಟ್ಟಿ ಸಿದ್ಧಪಡಿಸಿ ಯೋಜನೆಗೆ ಅರ್ಹತೆ ಪಡೆದಿರುವವರನ್ನು ಗುರುತಿಸಲಾಗಿದೆ.



ಆ ಪಟ್ಟಿಯಲ್ಲಿ ಹಂಚಿಕೆಗೆ ನಿಗದಿಯಾಗಿರುವ ಮನೆಗಳ ಸಂಖ್ಯೆಯಷ್ಟು ಫಲಾನುಭವಿಗಳ ಆಯ್ಕೆ ಆಗಬೇಕಾಗಿದೆ. ಗ್ರಾಮ ಸಭೆಗಳಿಗೆ ಈ ಕುರಿತು ಶಾಸಕರು ಸೂಚನೆ ನೀಡಿ ಒಂದು ವಾರದಲ್ಲಿ ಪಟ್ಟಿ ಅಂತಿಮಗೊಳಿಸಿದರೆ ಯೋಜನೆಯ ಲಾಭ ರಾಜ್ಯದ ವಸತಿರಹಿತರಿಗೆ ಸಿಗುತ್ತದೆ. ಆನ್‌ಲೈನ್ ಮೂಲಕವೇ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಸಚಿವ ಜಮೀರ್ ಅಹಮದ್ ಹೇಳಿದ್ದಾರೆ.

ಈ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ 60:40 ಅನುದಾನ ನೀಡಲಿದೆ. ಸಾಮಾನ್ಯ ವರ್ಗಕ್ಕೆ ಒಂದು ಲಕ್ಷದ ಮೂರು ಸಾವಿರ ರೂ. ಎಸ್ಸಿ–ಎಸ್ಟಿ ಸಮುದಾಯಕ್ಕೆ ಒಂದು ಲಕ್ಷ ಇಪ್ಪತ್ತು ಸಾವಿರ ರೂ. ಸಬ್ಸಿಡಿ ಸಿಗಲಿದ್ದು, 150ರಿಂದ 700 ಚದರಡಿವರೆಗೆ ವೈಯಕ್ತಿಕ ಮನೆ ನಿರ್ಮಾಣ ಮಾಡಿಕೊಡಲಾಗುವುದು ಎಂದು ಸಚಿವ ಜಮೀರ್ ಅಹಮದ್ ಖಾನ್ ಮಾಹಿತಿ ನೀಡಿದ್ದಾರೆ.

ಗ್ರಾಮೀಣ ವಸತಿ ಯೋಜನೆ ಅಷ್ಟೇ ಅಲ್ಲದೆ ನಗರ ಪ್ರದೇಶದ ವಸತಿ ಯೋಜನೆಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳ ಆಯ್ಕೆ ಶಾಸಕರ ಸಮಿತಿ ಮಾಡಬೇಕಿದ್ದು, ನಗರ ಮತ್ತು ಗ್ರಾಮೀಣ ಸೇರಿ ವಿವಿಧ ಯೋಜನೆಗಳಲ್ಲಿ 2,90,878 ಫಲಾನುಭವಿಗಳ ಆಯ್ಕೆ ಮಾಡಬೇಕಾಗಿದೆ. ಆ ಬಗ್ಗೆಯೂ ಶಾಸಕರಿಗೆ ಮನವಿ ಮಾಡಲಾಗಿದೆ. ಶಾಸಕರು ಫಲಾನುಭವಿಗಳ ಆಯ್ಕೆ ಪಟ್ಟಿ ಕೊಟ್ಟ ತಕ್ಷಣ ಹಂಚಿಕೆ ಹಾಗೂ ಇತರೆ ಪ್ರಕ್ರಿಯೆ ನಡೆಸಲಾಗುವುದು.

ಆನಂದಾಮೃತಕರ್ಷಿಣಿ ನೃತ್ಯ ಪ್ರದರ್ಶನ ವೇಳೆ ಮೈಸೂರಲ್ಲಿ ಮಳೆ!

ಮೈಸೂರು,ಜು.5(ಎಸ್‌ಪಿಎನ್)– ನಾಟ್ಯಸೆಲ್ವಿ ಪ್ರಸನ್ನ ಲಕ್ಷ್ಮೀ ಕಳಾಧರ್ ಅವರ ನಿರ್ದೇಶನದಲ್ಲಿ ಶ್ರೀ ನೃತ್ಯ ನಿಕೇತನ ನಾಟ್ಯ ಶಾಲೆ ವತಿಯಿಂದ ವರುಣನ ಆಗಮನಕ್ಕಾಗಿ ಆಯೋಜಿಸಿದ್ದ 'ನೃತ್ಯ ಸಿಂಚನ ಭರತನಾಟ್ಯ ಮತ್ತು ಕೂಚುಪುಡಿ' ನೃತ್ಯ ಪ್ರದರ್ಶನ ನೃತ್ಯ ಪ್ರಿಯರ ಗಮನ ಸೆಳೆಯಿತು.

ಮೈಸೂರು ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತೀ ಆವರಣದ ರಮಾಗೋವಿಂಧ ವೇದಿಕೆಯಲ್ಲಿ ನಡೆದ 'ನೃತ್ಯ ಸಿಂಚನ ಭರತನಾಟ್ಯ'ಕ್ಕೆ ಹಿರಿಯ ಕಲಾವಿದೆ ವಿದುಷಿ ಡಾ.ಸುಕನ್ಯಾ ಚಾಲನೆ ನೀಡಿ, ಮಾತನಾಡಿದರು. ಕರ್ನಾಟಕದಲ್ಲಿವರುಣನ ಮುನಿಸಿನಿಂದ ಬರಗಾಲದ ಛಾಯೆ ಆರಂಭವಾಗಿದೆ. ರಾಜ್ಯಕ್ಕೆ ಬರಗಾಲದಿಂದ ಮುಕ್ತಿ ನೀಡಲು ಶ್ರೀ ನೃತ್ಯ ನಿಕೇತನ ನಾಟ್ಯಶಾಲೆಯ ವಿದ್ಯಾರ್ಥಿಗಳು ಖ್ಯಾತ ಕಲಾವಿದ ಮುತ್ತುಸ್ವಾಮಿ ದೀಕ್ಷಿತರ್ ಸಂಯೋಜನೆಯ ಆನಂದಾಮೃತಕರ್ಷಿಣಿಯ (ಅಮೃತವರ್ಷಿಣಿ ರಾಗ) ಹಾಡಿಗೆ ನೃತ್ಯ ಪ್ರದರ್ಶಿಸಿ, ಎಲ್ಲರ ಗಮನ ಸೆಳೆದರು. ಈ ವೇಳೆ ಹೊರಗಡೆ ತುಂತುರು ಮಳೆಯಾಗುತ್ತಿರುವುದು ಅಪೂರ್ವ ಕ್ಷಣ ಎಂದರು.

ಈ ರಾಗದ ಬಗ್ಗೆ ಒಂದು ಜನಪ್ರಿಯ ವ್ಯಾಖ್ಯಾನವಿದೆ. ತಮಿಳುನಾಡಿನ ಪುಟ್ಟ



ಗ್ರಾಮವೊಂದಕ್ಕೆ ಹಿರಿಯ ಕಲಾವಿದ ಮುತ್ತುಸ್ವಾಮಿ ದೀಕ್ಷಿತರ್ ಒಮ್ಮೆ ಭೇಟಿ ನೀಡಿದ್ದರು. ಆ ವೇಳೆ ಬರಪೀಡಿತ ಆ ಗ್ರಾಮದಲ್ಲಿ ತೀವ್ರ ನೀರಿನ ಕೊರತೆಯಿಂದ ಅಲ್ಲಿನ ಜನರ ಬವಣೆಯನ್ನು ಕಂಡು ಸ್ವತಃ ದೀಕ್ಷಿತರೇ 'ಆನಂದಾಮೃತಕರ್ಷಿಣಿ (ಅಮೃತವರ್ಷಿಣಿ ರಾಗ) ಹಾಡಿನಲ್ಲಿ 'ಸಲಿಲಂ ವರ್ಷಾಯ ವರ್ಷಯಾ' ಎಂದು ಸಂಬೋಧಿಸಿದರು. ಅಂದರೆ 'ಮಳೆ ಸುರಿಯಲಿ' ಎಂದು ಹಾಡಿದಾಗ, ತಕ್ಷಣವೇ ಆಕಾಶದಲ್ಲಿ ಮೋಡ ಸರಿದು ಧಾರಾಕಾರ ಮಳೆಯಾದ ಸಂದರ್ಭವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ದೀಕ್ಷಿತರಿದ್ದ ಸ್ಥಳವೆಲ್ಲಾ ಮಳೆಯಿಂದ ಜಲಾವೃತ್ತವಾದಾಗ ಧೋ ಎಂದು ಸುರಿಯುತ್ತಿದ್ದ ಮಳೆಯನ್ನು ನಿಲ್ಲಿಸಲು 'ಸ್ತಂಭಯ ಸ್ತಂಭಯ', ಅಂದರೆ 'ನಿಲ್ಲಿಸು, ನಿಲ್ಲಿಸು' ಎಂದು ವರುಣನಲ್ಲಿ ಮನವಿ ಮಾಡಿದ ಪ್ರಸಂಗವನ್ನು ವಿವರಿಸಿದರು. ಅಲ್ಲದೆ, ಅಲ್ಲಿನ ಜನರಿಗೆ ವಿಸ್ಮಯ ತೋರಿದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿದರು. ಅಂದಿನಿಂದ ಯಾವುದೇ ಸ್ಥಳದಲ್ಲಿ ಮಳೆ ಬಾರದಿದ್ದರೆ, ತಕ್ಷಣವೇ ಸಂಗೀತಗಾರರು ಒಟ್ಟಾಗಿ ಸೇರಿ ಈ ರಾಗ–ಸಂಯೋಜನೆಯ ಆನಂದಾಮೃತಕರ್ಷಿಣಿ ರಾಗವನ್ನು ಹಾಡುವ ಅಭ್ಯಾಸ ಇಂದಿಗೂ ಬೆಳೆದುಬಂದಿದೆ. ಮಳೆ ಬಾರದೇ ಹೈರಾಣಾಗಿರುವ ಮೈಸೂರಿಗೆ ವರುಣ ದಯೆ ತೋರಲು 'ನೃತ್ಯ ಸಿಂಚನ' ಶೀರ್ಷಿಕೆಯಡಿ ಶ್ರೀ ನೃತ್ಯ ನಿಕೇತನ ಸಂಸ್ಥೆ ವಿದ್ಯಾರ್ಥಿಗಳು 'ಆನಂದಾಮೃತಕರ್ಷಿಣಿ' ಹಾಡಿಗೆ ನೃತ್ಯ ಪ್ರದರ್ಶಿಸಿದ ಸಂದರ್ಭದಲ್ಲಿ ಸಭಾಂಗಣದ ಸುತ್ತಮುತ್ತ ತುಂತುರು ಮಳೆಯಾಗಿರುವುದೇ ಸಾಕ್ಷಿ ಎಂದರು.



ಪ್ರಸ್ತುತ ಕರ್ನಾಟಕದಲ್ಲಿ ಮಳೆಬಾರದೇ ಬರದ ಛಾಯೆ ಆವರಿಸಿರುವ ವೇಳೆ ವರುಣನ ತೃಪ್ತಿಪಡಿಸಲು ಶ್ರೀ ನೃತ್ಯ ಕಲಾ ನಿಕೇತನ ವತಿಯಿಂದ 'ನೃತ್ಯ ಸಿಂಚನ ಭರತನಾಟ್ಯ' ಶೀರ್ಷಿಕೆಯಡಿ ಕಾರ್ಯಕ್ರಮ ಆಯೋಜಿಸಿರುವ ನಾಟ್ಯಸೆಲ್ವಿ ಪ್ರಸನ್ನ ಲಕ್ಷ್ಮೀ ಕಳಾಧರ್ ಕಾರ್ಯ ಶ್ಲಾಘನೀಯ ಎಂದರು.

ಈ ವೇಳೆ ಗಜನಾಯುದಮ್ ಪುಷ್ಪಾಂಜಲಿ, ರಂಗಪೂಜೆ, ಸ್ವಾಗತಂ ಕೃಷ್ಣಾಯೆಂದರೂ ಮಹಾನುಭಾವುಲು, ಬೋ ಶಂಭೋ, ಶ್ರೀ ಚಾಮುಂಡೇಶ್ವರಿ ಪಾಲಾಯಂ, ವೆಂಕಟಾಚಲ ನಿಲಯಂ, ಅಡಿಗೋ ಆಲಾಡಿಗೋ, ಕ್ಷೀರಸಾಗರ ಸಯನ ಶಾಂಭವಿ, ಶಂಭೋ ಶಿವ ಶಂಭೋ, ಶಿವ ಸ್ತುತಿ, ತರಂಗಂ, ಪ್ರದೋಷಾ ಭೂಮಿ ಕಲಾಪಂ, ರಾಮಚಂದ್ರ ಕೃಪಾಲು, ಜಗೋದೋದ್ಧಾರಕನ, ರಾಜಸ್ತಾನಿ, ಕೋಲಾಟ, ಶ್ರೀ ಕೃಷ್ಣ ಮಧುರಾಷ್ಟಕಂ, ಮಂಗಳ ನೃತ್ಯ ಪ್ರದರ್ಶನದೊಂದಿಗೆ ನೃತ್ಯ ಸಿಂಚನ ಭರತನಾಟ್ಯ ಪ್ರದರ್ಶನ ಕೊನೆಗೊಂಡಿತು. ಈ ವೇಳೆ ವಿದ್ವಾನ್ ಅಶೋಕ್, ವಿದುಷಿ ಪ್ರಸನ್ನ ಲಕ್ಷ್ಮೀ ಕಳಾಧರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಗುರುವಾರ 6 ಜುಲೈ 2023

ಆತಂಕ ಸೃಷ್ಟಿಸಿದ ಬಿಸಿಯೂಟದ ಸಾಂಬಾರು...

ಊಟ ಸೇವಿಸಿದ ವಿದ್ಯಾರ್ಥಿಗಳಿಗೆ ಆಸ್ಪತ್ರೆಯಲ್ಲಿ ತಪಾಸಣೆ

- ಆರೋಗ್ಯದಲ್ಲಿ ಏನೂ ವ್ಯತ್ಯಾಸವಾಗದ ಮಕ್ಕಳು
- ಸಾಂಬಾರು ಹಸಿರು ಬಣ್ಣಕ್ಕೆ ತಿರುಗಿ ನೊರೆ ಬಂದಿದ್ದು ಏಕೆ?

ನಾಪೋಕ್ಲು, ಜು.5– ಹಸಿರು ಬಣ್ಣಕ್ಕೆ ತಿರುಗಿದ್ದ ಬಿಸಿಯೂಟದ ಸಾಂಬಾರಿನಿಂದ ಶಿಕ್ಷಕರು ಮತ್ತು ಪೋಷಕರು ಆತಂಕಗೊಂಡಿದ್ದ ಘಟನೆ ಇಲ್ಲಿಗೆ ಸಮೀಪದ ಪೇರೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದೆ.

ಮಕ್ಕಳಿಗೆ ಮಧ್ಯಾಹ್ನ ನೀಡಿದ ಬಿಸಿಯೂಟದಲ್ಲಿ ವ್ಯತ್ಯಯ ಉಂಟಾಗಿರಬಹುದು ಎಂದು ಸಂಶಯಗೊಂಡ ಆಡಳಿತ ಮಂಡಳಿ, ಶಿಕ್ಷಕರು ಮತ್ತು ಪೋಷಕರು ವಿದ್ಯಾರ್ಥಿಗಳನ್ನು ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರಕ್ಕೆ ಆಂಬುಲೆನ್ಸ್‌ನಲ್ಲಿ ಕರೆದೊಯ್ದು ತಪಾಸಣೆಗೊಳಪಡಿಸಬೇಕಾಯಿತು.

ಶಾಲೆಯಲ್ಲಿ ಎಸ್‌ಡಿಎಂಸಿ ಸಭೆಯನ್ನು ಏರ್ಪಡಿಸಲಾಗಿತ್ತು. ಎಂದಿನಂತೆ ಮುಖ್ಯ ಅಡುಗೆಯವರಾದ ಕಟ್ಟಿ ಶಾಲಾ ವಿದ್ಯಾರ್ಥಿಗಳಿಗೆ ಬಿಸಿಯೂಟವನ್ನು ಸಿದ್ಧಪಡಿಸಿ ಮಧ್ಯಾಹ್ನ ವಿದ್ಯಾರ್ಥಿಗಳಿಗೆ ಬಿಸಿ ಊಟವನ್ನು ಬಡಿಸಿದ್ದರು. ಮಕ್ಕಳು ಊಟ ಮಾಡಿ ತರಗತಿಗಳಿಗೆ ತೆರಳಿದ್ದರು. ಬಳಿಕ ಶಿಕ್ಷಕರು ಬಿಸಿಯೂಟ ಸೇವಿಸಲು ಅಣಿಯಾದ ಸಂದರ್ಭ ಸಾಂಬಾರಿನ ಬಣ್ಣ ಹಸಿರಾಗಿ ಬದಲಾವಣೆಗೊಂಡು ನೊರೆ ಬರುತ್ತಿರುವುದನ್ನು ಕಂಡು ಆತಂಕಗೊಂಡರು.

ಶಾಲಾ ಮುಖ್ಯ ಶಿಕ್ಷಕಿ ಶೋಭಾ ಕೂಡಲೇ ಇಲಾಖೆಗೆ ಮಾಹಿತಿ ನೀಡಿದರು. ಆ ಬಳಿಕ ಶಾಲೆಗೆ ಹಾಜರಾಗಿದ್ದ 22 ವಿದ್ಯಾರ್ಥಿಗಳನ್ನು ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ವೈದ್ಯರು ಪರೀಕ್ಷೆ ಗೊಳಪಡಿಸಿದ್ದು, ಸೂಕ್ತ ಸಲಹೆ ಸೂಚನೆ ನೀಡಿ ಕಳುಹಿಸಿದರು. ಮಕ್ಕಳು ಆರೋಗ್ಯವಾಗಿದ್ದರು.

ವಿಷಯ ತಿಳಿದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡ ಭೇಟಿ ನೀಡಿ ವಿದ್ಯಾರ್ಥಿಗಳ ಯೋಗಕ್ಷೇಮ ವಿಚಾರಿಸಿದರು. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಶಾಲೆಯಲ್ಲಿ ಶಿಕ್ಷಕರು ಬಿಸಿಯೂಟ ಮಾಡುವ ಸಂದರ್ಭ ಸಾಂಬಾರಿನ ಬಣ್ಣ ಬದಲಾವಣೆಯಾಗಿದ್ದು, ಈ ಬಗ್ಗೆ ಇಲಾಖೆ ಗಮನಕ್ಕೆ ತಂದಿದ್ದಾರೆ.



ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ವಿದ್ಯಾರ್ಥಿಗಳನ್ನು ಕರೆ ತಂದಿರುವುದು

ಮಕ್ಕಳ ಬಿಸಿಯೂಟವನ್ನು ಸೇವಿಸಿದ್ದು ಅನುಮಾನಗೊಂಡ ಶಿಕ್ಷಕರು ಮಕ್ಕಳ ಆಹಾರದಲ್ಲಿ ಏನಾದರೂ ವ್ಯತ್ಯಾಸವಾಗಿರಬಹುದೇ ಎಂಬುದನ್ನು ಪರೀಕ್ಷಿಸಲು ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರಕ್ಕೆ ವಿದ್ಯಾರ್ಥಿಗಳನ್ನು ಚಿಕಿತ್ಸೆಗಾಗಿ ಕರೆತಂದಿದ್ದರು. ಮಕ್ಕಳ ಆರೋಗ್ಯದಲ್ಲಿ ಯಾವುದೇ ವ್ಯತ್ಯಾಸ ಉಂಟಾಗಿಲ್ಲ ಎಂದು ವೈದ್ಯಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ ಎಂದರು.

ಮುಖ್ಯ ಶಿಕ್ಷಕಿ ಶೋಭಾ ಮಾತನಾಡಿ ಮಕ್ಕಳಿಗೆ ನೀಡಿದ ಊಟದಲ್ಲಿ ಯಾವುದೇ ವ್ಯತ್ಯಾಸ ಕಂಡು ಬರಲಿಲ್ಲ. ಶಿಕ್ಷಕರ ಸಾಂಬಾರಿನಲ್ಲಿ ವ್ಯತ್ಯಾಸ ಕಂಡು ಬಂದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಆರೋಗ್ಯ ತಪಾಸಣೆ ಮಾಡಲಾಗಿದೆ ಎಂದರು. ನಂತರ ಶಿಕ್ಷಕರು ಊಟ ಮಾಡದೆ ಆ ಸಾಂಬಾರ್ ಅನ್ನು ಹೊರಗೆ ಚೆಲ್ಲಿದರು ಎನ್ನಲಾಗಿದೆ.

ಅಂಬೇಡ್ಕರ್ ಭವನ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಲು ಶಾಸಕರಿಗೆ ಮನವಿ



ವಿರಾಜಪೇಟೆ, ಜು.5– ವಿರಾಜಪೇಟೆ ನಗರದಲ್ಲಿ ನಿರ್ಮಾಣಗೊಳ್ಳುತ್ತಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನದ ಕಾಮಗಾರಿ ಮುಗಿಯುವ ಹಂತದಲ್ಲಿದ್ದು, ಇನ್ನು ಬಾಕಿ ಇರುವ ಸಣ್ಣ ಪುಟ್ಟ ಕೆಲಸ ಪೂರ್ಣಗೊಳಿಸುವ ಮೂಲಕ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಲು ಕ್ರಮ ಕೈಗೊಳ್ಳಬೇಕೆಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಅಂಬೇಡ್ಕರ್ ಯೋಜನಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದ್ದಾರೆ.

ಅಂಬೇಡ್ಕರ್ ಭವನಕ್ಕೆ ಕಳೆದ 5 ವರ್ಷಗಳ ಹಿಂದೆ ಭೂಮಿ ಪೂಜೆ ನಡೆದು ಅಂದಿನ ಸರಕಾರ ಕಟ್ಟಡ ನಿರ್ಮಾಣಕ್ಕೆ 180 ಲಕ್ಷ ರೂ. ಅನುದಾನ ನಿಗದಿಪಡಿಸಿತ್ತು. ನಂತರ ನಿರ್ಮಿತಿ ಕೇಂದ್ರದವರು ಕಾಮಗಾರಿ ಪ್ರಾರಂಬಿಸಿದರು. ಕೊನೆಗೆ ಅಂದಿನ ಸರಕಾರ 150 ಲಕ್ಷ ರೂ. ಬಿಡುಗಡೆಗೊಳಿಸಿ ನಂತರ ಉಳಿದ 30 ಲಕ್ಷವನ್ನು ಸ್ಥಳೀಯ ಸಂಸ್ಥೆಗಳಿಂದ ಪಡೆದುಕೊಳ್ಳಲು ತಿಳಿಸಿತ್ತು. ತಾಲೂಕು ಪಂಚಾಯಿತಿಯಿಂದ ಮಂಜೂರಾದ 5 ಲಕ್ಷ ರೂ. ಪಟ್ಟಣ ಪಂಚಾಯಿತಿಯಿಂದ 5 ಲಕ್ಷ ರೂ, ಹಾಗೂ ಉಳಿಕೆ ಹಣವನ್ನು ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಿಂದ ಪಡೆಯಲಾಗಿತ್ತು. ಅಂಬೇಡ್ಕರ್ ಭವನ ಕಾಮಗಾರಿ ಮುಗಿಯುವ ಹಂತದಲ್ಲಿದೆ.

ಅದರಿಂದ ಕಟ್ಟಡದ ಉಳಿಕೆ ಕಾಮಗಾರಿ ಪೂರ್ಣಗೊಳಿಸಿ ಕಟ್ಟಡಕ್ಕೆ ಮೂಲ ಸೌಕರ್ಯ ಒದಗಿಸಿಕೊಡುವುದರೊಂದಿಗೆ ಸಮಾಜ ಕಲ್ಯಾಣ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕಾಗಿದೆ. ಕಟ್ಟಡವನ್ನು ಸರ್ಕಾರಿ ಕಾರ್ಯಕ್ರಮಗಳಿಗೆ ಮತ್ತು ಸಾರ್ವಜನಿಕರ ಉಪಯೋಗಕ್ಕೆ ಬಳಸಲು ಅನುವುಮಾಡಿ ಕೊಡುವಂತೆ ಶಾಸಕ ಪೊನ್ನಣ್ಣರಿಗೆ ನೀಡಿದ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಅಂಬೇಡ್ಕರ್ ಯೋಜನಾಭಿವೃದ್ಧಿ ಸಂಘದ ಪದಾಧಿಕಾರಿಗಳಾದ ಎನ್.ವಿರಭದ್ರಯ್ಯ, ಹೆಚ್.ಆರ್.ಶಿವಪ್ಪ, ಮಹದೇವ, ಸಣ್ಣಯ್ಯ, ಗಾಯತ್ರಿ ನರಸಿಂಹ, ರಜನಿಕಾಂತ್ ಮತ್ತು ಸತೀಶ್ ಉಪಸ್ಥಿತರಿದ್ದರು.

ಜೆಸಿಐ ಪೊನ್ನಂಪೇಟೆ ನಿಸರ್ಗ ಘಟಕಕ್ಕೆ 15ಕ್ಕೂ ಹೆಚ್ಚು ಪ್ರಶಸ್ತಿಗಳು

ಗೋಣಿಕೊಪ್ಪ, ಜು.5– ಜೆಸಿಐ ಭಾರತದ ವಲಯ 14ರ ಮಧ್ಯ ವಾರ್ಷಿಕ ಸಮ್ಮೇಳನದಲ್ಲಿ ಜೆಸಿಐ ಪೊನ್ನಂಪೇಟೆ ನಿಸರ್ಗ ಘಟಕವು ವಿವಿಧ ವಿಭಾಗಗಳಲ್ಲಿ 15ಕ್ಕೂ ಹೆಚ್ಚು ಪ್ರಶಸ್ತಿಯನ್ನು ಪಡೆದುಕೊಂಡಿದೆ.

ಜೆಸಿಐ ಬೀರೂರು ಘಟಕದ ಸಹಯೋಗದಲ್ಲಿ ಬೀರೂರಿನ ಶ್ರೀ ತರಳಬಾಳು ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಭಾರತದ ವಲಯ 14ರ ಮಧ್ಯ ವಾರ್ಷಿಕ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಾಂತ್ಯ ಬಿ ವಿಭಾಗದ, ವೈಯಕ್ತಿಕ ಪ್ರಶಸ್ತಿ ವಿಭಾಗದಲ್ಲಿ ಅತ್ಯುತ್ತಮ ಘಟಕಾಧಿಕಾರಿ ಪ್ರಶಸ್ತಿಯನ್ನು ಜೆಸಿಐ ಪೊನ್ನಂಪೇಟೆ ನಿಸರ್ಗ ಘಟಕದ ಕಾರ್ಯದರ್ಶಿಗಳಾದ ಚೆಟ್ರೋಳಿರ ಶರತ್ ಸೋಮಣ್ಣ ಪಡೆದುಕೊಂಡರು. ಅತ್ಯುತ್ತಮ ಘಟಕ ವಿಭಾಗದಲ್ಲಿ ವಿಜೇತರಾದರು, ಅತ್ಯುತ್ತಮ ಕಾರ್ಯಕ್ರಮ ವಿಭಾಗದಲ್ಲಿ ರನ್ನರ್ ಅಪ್ ಪ್ರಶಸ್ತಿ ದೊರೆಯಿತು.

ವಲಯ ವಿಭಾಗದಲ್ಲಿ ಘಟಕ ಅಧ್ಯಕ್ಷರಾದ ನೀತ್ ಅಯ್ಯಪ್ಪ ಅವರಿಗೆ ವಿದ್ಯಾರತ್ನ ಪುರಸ್ಕಾರ್ ನೀಡಿ ಸನ್ಮಾನಿಸಲಾಯಿತು. ಮತ್ತು 2ನೇ ವಲಯ ಆಡಳಿತ ಮಂಡಳಿ ಸಭೆಯನ್ನು ಆಯೋಜಿಸಿದಕ್ಕೆ ಘಟಕಕ್ಕೆ ವಿಶೇಷ ಮನ್ನಣೆ ಪ್ರಶಸ್ತಿ, ಘಟಕ ಅಧ್ಯಕ್ಷರಿಗೆ ವಿಶೇಷ ಮನ್ನಣೆ ಪ್ರಶಸ್ತಿ ಸೇರಿದಂತೆ ವಿವಿಧ ವಿಭಾಗಗಳಲ್ಲಿ 15ಕ್ಕೂ ಹೆಚ್ಚು ಪ್ರಶಸ್ತಿಯನ್ನು ಜೆಸಿಐ ಪೊನ್ನಂಪೇಟೆ ನಿಸರ್ಗ ಘಟಕವು ಪಡೆದುಕೊಂಡಿತು. ಪ್ರಶಸ್ತಿಯನ್ನು ವಲಯಾಧ್ಯಕ್ಷೆ ಯಶಸ್ವಿನಿ, ವಲಯ ಉಪಾಧ್ಯಕ್ಷೆ ಆಶಾ ಜೈನ್ ಹಾಗೂ ವಲಯ ಘಟಕ ಆಡಳಿತ ಮಂಡಳಿಯವರಿಂದ ನೀಡಲಾಯಿತು.

ವಲಯ 14ರ ಪ್ರಾಂತ್ಯ ಡಿ ಉಪಾಧ್ಯಕ್ಷ ಕಳಸ ಘಟಕದ ಎಚ್. ಆರ್. ಪ್ರಶಾಂತ್, ಜೆಸಿಐ ಪೊನ್ನಂಪೇಟೆ ನಿಸರ್ಗ ಘಟಕದ ಖಜಾಂಚಿ ಬಿ.ಎಂ ಚಂಗಪ್ಪ, ಸದಸ್ಯರಾದ ಎಚ್. ಆರ್. ಸತೀಶ್, ಜೆ.ಪಿ. ಸ್ವಾಮಿ, ಎಲ್.ಎನ್. ಅಣ್ಣಪ್ಪ, ಟಿ.ಎಸ್ ಅಕ್ಷಯ್, ಎಸ್‌ಎಂಎ ಸದಸ್ಯರಾದ ಬಿ.ಇ. ಕಿರಣ್, ಎನ್.ಜಿ. ಸುರೇಶ್ ಇದ್ದರು.

ಕುಡಿದ ಮತ್ತಿನಲ್ಲಿ ಪತ್ನಿ, ಮಗುವಿನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಪತಿ

ನಾಪೋಕ್ಲು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ

ಮಡಿಕೇರಿ, ಜು.5– ಕ್ಷುಲ್ಲಕ ಕಾರಣಕ್ಕೆ ಕುಡಿದ ಮತ್ತಿನಲ್ಲಿ ಪತಿ ಮಹಾಶಯನೊಬ್ಬ ತನ್ನ ಪತ್ನಿ ಮತ್ತು ಮಗುವಿನ ಮೇಲೆ ಕತ್ತಿಯಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಅಮಾನುಷ ಘಟನೆ ನಾಪೋಕ್ಲು ಠಾಣಾ ವ್ಯಾಪ್ತಿಯ ಕೋಕೇರಿ ಗ್ರಾಮದಲ್ಲಿ ನಡೆದಿದೆ.

ನರಿಯಂದಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೆಯ್ಯಂಡಾಣೆ ಸಮೀಪದ ಕೋಕೇರಿ ಗ್ರಾಮದ ಚೇರುವಾಳಂಡ ಲವಿನ್ ಎಂಬವರ ಲೈನ್ ಮನೆಯಲ್ಲಿ ಕಾರ್ಮಿಕನಾಗಿ ಕೆಲಸ ನಿರ್ವಹಿಸುತ್ತಿದ್ದ ಭರತ್ ಎಂಬಾತನನ್ನು ಈ ಸಂಬಂಧ ಪೊಲೀಸರು ಬಂಧಿಸಿದ್ದಾರೆ. ಕಂಠಪೂರ್ತಿ ಕುಡಿದು ಮನೆಗೆ ಬಂದ ಭರತ್ ಊಟ ಮಾಡಿದ ಬಳಿಕ ಸಂಜೆ 4 ಗಂಟೆಗೆ ಅನ್ನ ಮಾಡುವಂತೆ ಪತ್ನಿ ಪ್ರೇಮಾಳಿಗೆ ಹೇಳಿದ್ದಾನೆ. ರಾತ್ರಿಗೆ ಇನ್ನು ಸಮಯ ಇದ್ದು, ಕೆಲ ಸಮಯದ ಬಳಿಕ ಅನ್ನ ತಯಾರಿಸುವುದಾಗಿ ಪತ್ನಿ ಪ್ರೇಮಾ ಉತ್ತರಿಸಿದ್ದಾಳೆ.

ಇದರಿಂದ ಆಕ್ರೋಶಗೊಂಡ ಪತಿ ಭರತ್ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಾಫಿ ಗಿಡ ಕಪಾತು ಮಾಡುವ ಕತ್ತಿಯಿಂದ ಪತ್ನಿ ಪ್ರೇಮಾಳ ಎಡಗೈಗೆ ಹಲ್ಲೆ ಮಾಡಿದ್ದಾನೆ. ಹಲ್ಲೆಯಿಂದ ಪ್ರೇಮಾಳ ಕೈಗೆ ಗಂಭೀರ ಗಾಯವಾಗಿದೆ. ಇದೇ ಸಂದರ್ಭ ಪ್ರೇಮಾಳ ಕೈಯಲ್ಲಿದ್ದ 2 ವರ್ಷದ ಮಗುವಿನ ಕಾಲಿಗೂ ಗಂಭೀರ ಗಾಯವಾಗಿದೆ. ತಾಯಿ ಮಗುವಿನ ಕಿರುಚಾಟ ಕೇಳಿ ಪಕ್ಕದ ಮನೆಯಲ್ಲಿದ್ದ ಪ್ರೇಮಾಳ ಅಕ್ಕ ಮತ್ತು ಭಾವ ಸ್ಥಳಕ್ಕೆ ಓಡಿಬಂದು ಇಬ್ಬರ ಜಗಳವನ್ನು ಬಿಡಿಸಿ ತೋಟದ ಮಾಲೀಕರಿಗೆ ಮಾಹಿತಿ ನೀಡಿದ್ದಾರೆ. ಮಾಲೀಕರಾದ ಚೇರುವಾಳಂಡ ಲವೀನ್ ಸ್ಥಳಕ್ಕೆ ಬಂದು ಗಂಭೀರ ಗಾಯಗೊಂಡ ತಾಯಿ ಹಾಗೂ ಮಗುವನ್ನು ತಮ್ಮ ವಾಹನದಲ್ಲಿ ನಾಪೋಕ್ಲುವಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.



ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ನಿ ಪ್ರೇಮಾ ನಾಪೋಕ್ಲು ಠಾಣೆಗೆ ನೀಡಿದ ದೂರಿನ ಅನ್ವಯ ನಾಪೋಕ್ಲು ಪೊಲೀಸರು ಆರೋಪಿ ಭರತ್‌ನನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೈಮಾಸ್ಟ್ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ: ಸಣ್ಣಪುಟ್ಟ ಗಾಯಗಳೊಂದಿಗೆ ಪಾರು

ಸುಂಟಿಕೊಪ್ಪ, ಜು.5– ಗದ್ದೆಹಳ್ಳ ರಾಷ್ಟ್ರೀಯ ಹೆದ್ದಾರಿ ಸರ್ಕಲ್ ಬಳಿ ಹೈ ಮಾಸ್ಟ್ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ ಹೊಡೆದಿದ್ದು, ಸಣ್ಣಪುಟ್ಟ ಗಾಯಗಳೊಂದಿಗೆ ಕಾರಿನಲ್ಲಿದ್ದವರು ಪಾರಾಗಿದ್ದಾರೆ.

ಸುಂಟಿಕೊಪ್ಪ ಗ್ರಾಮ ಪಂಚಾಯಿತಿ ವತಿಯಿಂದ ಸುಮಾರು 40 ಸಾವಿರ ವೆಚ್ಚದಲ್ಲಿ ನಿರ್ಮಿಸಿದ್ದ ಹೈಮಾಸ್ಟ್ ಲೈಟ್ ಕಂಬಕ್ಕೆ ಬೆಳಗಿನ ಜಾವ 4 ಗಂಟೆ ಸುಮಾರಿನಲ್ಲಿ ಕುಶಾಲನಗರ ದಿಂದ ಮಡಿಕೇರಿ ಕಡೆಗೆ ತೆರಳುತ್ತಿದ್ದ ಮಾರುತಿ ಆಲ್ಟೋ ಕಾರು ಡಿಕ್ಕಿ ಹೊಡೆ ದಿದೆ. ಇದರಿಂದ ವಿದ್ಯುತ್ ಕಂಬ ತುಂಡಾಗಿ ಬಿದ್ದು ಬಲ್ಬ್‌ಗಳಿಗೆ ಹಾನಿಯಾಗಿದೆ. ಈ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೇಣು ಗೋಪಾಲ್ ಸುಂಟಿಕೊಪ್ಪ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಡಿಕ್ಕಿಯಾದ ವೇಗಕ್ಕೆ ಕಾರಿನ ಎರಡು ಟೈರುಗಳು ಸಿಡಿದು ಹೋಗಿದ್ದು, ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿ ಪಾರಾಗಿದ್ದಾರೆ. ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಠಾಣಾಧಿಕಾರಿ ಶ್ರೀಧರ್ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.



ಇಬ್ಬರು ಗಾಂಜಾ ಮಾರಾಟಗಾರರ ಬಂಧನ

ಮಡಿಕೇರಿ, ಜು.5– ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಮಾಲು ಸಹಿತ ನಾಪೋಕ್ಲು ಪೊಲೀಸರು ಬಂಧಿಸಿದ್ದಾರೆ. ಮಡಿಕೇರಿ ವಿದ್ಯಾನಗರದ ನಿವಾಸಿ ಆರ್.ವಿನೋದ್, ನಾಪೋಕ್ಲು ಬೇತು ಗ್ರಾಮದ ನಿವಾಸಿ ವಿಷ್ಣು ಎಂ.ವಿ ಬಂಧಿತ ಆರೋಪಿಗಳಾಗಿದ್ದಾರೆ.






ನಾಪೋಕ್ಲು ಸಮೀಪದ ಬೇತು ಗ್ರಾಮದಲ್ಲಿರುವ ಪ್ರಯಾಣಿಕರ ಬಸ್ ತಂಗುದಾಣ ಬಳಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಲಭಿಸಿದ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು 230 ಗ್ರಾಂ ಗಾಂಜಾ ವಶಪಡಿಸಿಕೊಂಡು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ. ರಾಮರಾಜನ್, ಹೆಚ್ಚುವರಿ ಪೊಲೀಸ್ ಉಪ ಅಧೀಕ್ಷಕ ಸುಂದರ್ ರಾಜ್ ನಿರ್ದೇಶನದಂತೆ, ಮಡಿಕೇರಿ ಉಪ ವಿಭಾಗದ ಡಿವೈಎಸ್ಪಿ ಜಗದೀಶ್, ಮಡಿಕೇರಿ ಗ್ರಾಮಾಂತರ ವೃತನಿರೀಕ್ಷಕ ಅನೂಪ್ ಮಾದಪ್ಪ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಬಿಳಿಗಿರಿರಂಗನ ಬೆಟ್ಟದ ಬಳಿ ಕಾಡಾನೆ ದಾಂಧಲೆ



- ರೈತರ ಬೆಳೆ ನಾಶ
- ಮುಚ್ಚಿ ಹೋದ ಕಂದಕ, ಕೆಟ್ಟು ನಿಂತಿರುವ ಸೌರ ವಿದ್ಯುತ್ ಬೇಲಿ ದಾಟಿ ಲಗ್ಗೆಯಿಡುವ ಗಜಪಡೆ

ಯಳಂದೂರು, ಜು.5– ತಾಲೂಕಿನ ಬಿಳಿಗಿರಿರಂಗನಬೆಟ್ಟದ ಹುಲಿ ರಕ್ಷಿತಾರಣ್ಯದ ವ್ಯಾಪ್ತಿಗೆ ಒಳಪಡುವ ಮುಂಟಿಪಾಳ್ಯ ಗ್ರಾಮದ ಹತ್ತಾರು ರೈತರ ಕೃಷಿ ಜಮೀನಿಗೆ ಕಾಡಾನೆಗಳು ನುಗ್ಗಿ ಫಸಲು ತಿಂದು ನಾಶಪಡಿಸಿವೆ. ಬಾಳೆ, ತೆಂಗಿನ ಸಸಿಗಳ ಸುಳಿ ತಿಂದು ಹಾಕಿದ್ದಲ್ಲದೆ, ಮಾವಿನ ಮರಗಳ ರೆಂಬೆಗಳನ್ನು ಮುರಿದು ಹಾಕುವುದರ ಜೊತೆ ಕೆಲವು ಮಾವಿನ ಗಿಡಗಳನ್ನು ತುಳಿದು ಹಾಕಿದ್ದು, ರೈತರು ಅಪಾರ ಪ್ರಮಾಣದ ಬೆಳೆ ನಷ್ಟದಿಂದ ಕಂಗಾಲಾಗಿದ್ದಾರೆ.

ಕಾಡಾನೆ ಹಿಂಡು ರೈತರ ಕೃಷಿ ಜಮೀನುಗಳಿಗೆ ನುಗ್ಗಿ ಫಸಲು ತಿಂದು ದಾಂಧಲೆ ನಡೆಸುತ್ತಿದ್ದರೂ ಅರಣ್ಯ ಇಲಾಖೆ ಸಿಬ್ಬಂದಿ ಆನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸಲು ವಿಫಲರಾಗಿದ್ದಾರೆ. ಬಿಆರ್‌ಟಿ ಹುಲಿ ರಕ್ಷಿತಾರಣ್ಯದ ಗಡಿಯಾಂಚಿನಲ್ಲಿ ಸೋಲಾರ್ ತಂತಿ ಅಳವಡಿಸಿರುವುದಲ್ಲದೆ, ಕಂದಕಗಳನ್ನು ನಿರ್ಮಿಸಿದ್ದರೂ ಕೂಡಾ ಅದು ಉಪಯೋಗಕ್ಕೆ ಬಾರದ ರೀತಿಯಾಗಿದೆ. ಬಹುತೇಕ ಕಡೆ ಆನೆ ಕಂದಕಗಳು ಮುಚ್ಚಿ ಹೋಗುವುದರ ಜೊತೆ ಸೋಲಾರ್ ವಿದ್ಯುತ್ ಬೇಲಿ ಕೂಡಾ ಕಾರ್ಯನಿರ್ವಹಿಸದೆ ಕೆಟ್ಟು ಹೋಗಿರುವುದರಿಂದ ಕಾಡಿನಿಂದ ಆನೆಗಳು ಸಲಿಸಾಗಿ ಸೋಲಾರ್ ಬೇಲಿಗಳನ್ನು ಮುರಿದು, ಕೃಷಿ ಜಮೀನಿಗೆ ನುಗ್ಗುತ್ತಿರುವುದು ರೈತರಿಗೆ ಫಸಲು ರಕ್ಷಣೆ ಮಾಡಿಕೊಳ್ಳುವುದೇ ದೊಡ್ಡ ಸವಾಲಾಗಿದೆ.

ದೂರಿಗೆ ಸ್ಪಂದಿಸದ ಅರಣ್ಯ ಇಲಾಖೆ: ಆನೆಗಳು ಕಾಡಿನಿಂದ ಕೃಷಿ ಜಮೀನಿಗೆ ಬರುತ್ತಿದಂತೆ ರೈತರು ಸಂಬಂಧಪಟ್ಟ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಫೋನ್ ಮಾಡಿ ಮಾಹಿತಿ ನೀಡಿದರೆ ನಮ್ಮ ಇಲಾಖೆ ವಾಚರ್, ಫಾರೆಸ್ಟ್ ಬರುತ್ತಾರೆ ಎಂದು ನುಣುಚಿಕೊಳ್ಳುತ್ತಿ ದ್ದಾರೆ. ಆನೆಗಳು ಬಂದು ಫಸಲು ತಿಂದು ಹೋದ ಮಾರನೇ ದಿನ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ಮಾಡಿ ವಾಪಸ್ ಹೋಗುತ್ತಿದ್ದಾರೆ. ಇದನ್ನು ಪ್ರಶ್ನಿಸಿದರೆ ವಾಹನ ಸೌಲಭ್ಯವಿಲ್ಲ, ಪರಿಹಾರಕ್ಕೆ ಅರ್ಜಿ ಸಲ್ಲಿಸಿ ಎಂದು ಹೇಳಿ ಅಡ್ಡಗೋಡೆ ಮೇಲೆ ದೀಪಾ ಇಟ್ಟಂತೆ ಹಾರಿಕೆ ಉತ್ತರ ನೀಡುತ್ತಿದ್ದಾರೆ ಎಂದು ರೈತರು ಆರೋಪವಾಗಿದೆ.



> ❝ ರೈತನ ಕೃಷಿ ಜಮೀನುಗಳಿಗೆ ಕಾಡು ಪ್ರಾಣಿಗಳು ನುಗ್ಗಿ ಪಸಲು ತಿಂದು ನಾಶ ಮಾಡಿದರೆ. ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ನಿಗದಿಯಾಗುವ ಮಾರುಕಟ್ಟೆಯ ದರದಲ್ಲೇ ರೈತರಿಗೆ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕಾಗಿದೆ. ರೈತರ ದೂರುಗಳನ್ನು ನಿರ್ಲಕ್ಷ್ಯ ಮಾಡುವ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಸ್ಥಳೀಯ ಶಾಸಕರು ಗಮನಹರಿಸಿ ಸೂಕ್ತ ಕಾನೂನು ಕ್ರಮ ವಹಿಸುವ ಕೆಲಸ ಮಾಡಬೇಕಾಗಿದೆ.
>
> -ಹೊನ್ನೂರು ಪ್ರಕಾಶ್, ಜಿಲ್ಲಾಧ್ಯಕ್ಷರು ರೈತ ಸಂಘ

> ❝ ತೋಟದ ಎದುರೇ ಅರಣ್ಯ ಇಲಾಖೆ ಸಿಬ್ಬಂದಿ ತಂಗುವ ಕ್ಯಾಂಪ್ ಇದೆ. ಆನೆಗಳು ಜಮೀನಿಗೆ ನುಗ್ಗಿ ಪಸಲು ನಾಶಪಡಿಸುತ್ತಿದ್ದರು ನೋಡುತ್ತಲೇ ಕುಳಿತುಕೊಳ್ಳುತ್ತಾರೆ. ಇನ್ನು ನಾವು ಯಾರಿಗೆ ನಮ್ಮ ಕಷ್ಟ ಹೇಳಿಕೊಳ್ಳುವುದು.
>
> -ಬಿ.ರಾಜೀವ್, ನೊಂದ ರೈತರು ಮುಂಟಿಪಾಳ್ಯ

ಬಿಆರ್‌ಟಿಯಲ್ಲೂ ಆನೆಗಳ ದಾಂಧಲೆ: ಬಿಳಿಗಿರಿರಂಗಬೆಟ್ಟದ ರೈತರು ಬೆಳೆದಿರುವ ಕಾಫಿ ತೋಟದಲ್ಲಿ ಹಲಸಿನ ಹಣ್ಣು, ಬಾಳೆ, ಮಾವು, ಸೀಬೆ, ಚಕೋತ, ಬೆಣ್ಣೆಹಣ್ಣು ಸೇರಿದಂತೆ ಇತರೆ ಫಸಲು ತಿನ್ನಲು ತೋಟಗಳಿಗೆ ನುಗ್ಗಿ ಮರದ ರೆಂಬೆಗಳನ್ನು ಮುರಿದು ಹಾಕುವುದರ ಜೊತೆಗೆ ಕಾಫಿ ಸಸಿಗಳನ್ನು ತುಳಿದು ನಾಶಪಡಿಸುತ್ತಿರುವುದರಿಂದ ಸೋಲಿಗರು ಆತಂಕಗೊಂಡಿದ್ದಾರೆ.

ಇನ್ನಾದರೂ ಅರಣ್ಯ ಇಲಾಖೆ ಅಧಿಕಾರಿಗಳು ರೈತರ ಫಸಲು ರಕ್ಷಣೆ ಮಾಡಲು ಮುಂದಾಗುತ್ತಾರೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

ಕಂಪ್ಯೂಟರ್ ಅರ್ಜಿಯಲ್ಲಿ ಆರಾಧ್ಯ ಜಾತಿ ಕಾಲಂ ನಾಪತ್ತೆ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ನಿವೃತ್ತ ತಹಶೀಲ್ದಾರ್ ಆತಂಕ

ಚಾಮರಾಜನಗರ, ಜು.5– ಕರ್ನಾಟಕ ಸರ್ಕಾರದ ಜಾತಿವಾರು ಪಟ್ಟಿಯಲ್ಲಿ ಆರಾಧ್ಯ ಜನಾಂಗದ ಹೆಸರನ್ನು ಕೈಬಿಡಲಾಗಿದ್ದು, ಜಾತಿ ಕಾಲಂನಲ್ಲಿ ಆರಾಧ್ಯ ಎಂದು ನಮೂದಿಲಾಗುತ್ತಿಲ್ಲ. ಆದ್ದರಿಂದ ಸರ್ಕಾರ ಜಾತಿಗಳ ಪಟ್ಟಿಯಲ್ಲಿ ಆರಾಧ್ಯ ಹೆಸರನ್ನು ಸೇರಿಸಬೇಕು ಎಂದು ನಿವೃತ್ತ ತಹಶೀಲ್ದಾರ್ ಶಿವಕುಮಾರಸ್ವಾಮಿ ಒತ್ತಾಯಿಸಿದರು.

ನಗರದ ಮಹಾಮನೆಯಲ್ಲಿ ಆರಾಧ್ಯ ಟ್ರಸ್ಟ್ ವತಿಯಿಂದ ನಡೆದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶತಮಾನಗಳ ಹಿಂದಿನಿಂದಲೂ ಆಂಧ್ರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಆರಾಧ್ಯ ಸಮಾಜ ಅಸ್ತಿತ್ವದಲ್ಲಿದೆ. ಸುಮಾರು 50 ವರ್ಷಗಳ ಹಿಂದೆ ಜಾತಿ ಪಟ್ಟಿಯಲ್ಲಿ ಆರಾಧ್ಯ ಎಂದು ನಮೂದಿಸಲು ಅವಕಾಶವಿತ್ತು. ಆದರೆ ಏಕೋ ಏನೋ ಜಾತಿ ಪಟ್ಟಿಯಲ್ಲಿ ಆರಾಧ್ಯ ಜನಾಂಗದ ಹೆಸರನ್ನು ಕೈಬಿಡಲಾಯಿತು. ಆದರೂ ಶಾಲಾ ದಾಖಲಾತಿಗಳಲ್ಲಿ ಕೆಲವರು ಆರಾಧ್ಯ ಎಂದೇ ಬರೆಯುತ್ತಿದ್ದರು. ಈಗ ಕಂಪ್ಯೂಟರೈಸ್ಡ್ ಅರ್ಜಿಗಳನ್ನು ತುಂಬುವಾಗ ಜಾತಿ ಕಾಲಂನಲ್ಲಿ ಆರಾಧ್ಯ ಎಂಬ ಹೆಸರೇ ನಾಪತ್ತೆಯಾಗಿದೆ ಎಂದರು.

ವಾಸ್ತವವಾಗಿ ಆರಾಧ್ಯ ಸಮಾಜ ತನ್ನದೇ ಪ್ರತ್ಯೇಕ ಅಸ್ಮಿತೆ ಹೊಂದಿದೆ. ಆಂಧ್ರ ಹಾಗೂ ಕರ್ನಾಟಕದಲ್ಲಿ ಸಾವಿರಾರು ಮಂದಿ ಆರಾಧ್ಯ ಜನಸಂಖ್ಯೆ ಇದೆ. ಜಾತಿ ಕಾಲಂನಲ್ಲಿ ಆರಾಧ್ಯ ಹೆಸರನ್ನು ಕೈಬಿಟ್ಟಿರುವುದು ವಿಷಾದನೀಯ ಎಂದು ಅವರು ಹೇಳಿದರು. ಈಗಲಾದರೂ ಆರಾಧ್ಯ ಸಮಾಜ ಎಚ್ಚೆತ್ತುಕೊಳ್ಳಬೇಕಿದೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಗಮನ ಸೆಳೆದು, ಆರಾಧ್ಯ ಹೆಸರನ್ನು ಸೇರಿಸಲು ವಿವಿಧ ಹಂತದ ಹೋರಾಟಗಳನ್ನು ನಡೆಸಬೇಕಿದೆ. ಈಗ ಅದಕ್ಕಾಗಿ ಹೋರಾಟ ನಡೆಸಿದರೆ ಮುಂದೆ ಪ್ರತಿಫಲ ದೊರಕಲಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆರಾಧ್ಯ ಟ್ರಸ್ಟ್ ಅಧ್ಯಕ್ಷ ಎ.ಎನ್. ವಿಶ್ವಾರಾಧ್ಯ (ಗಣೇಶ್) ಮಾತನಾಡಿ, ವಿದ್ಯಾರ್ಥಿಯಲ್ಲಿ ಜ್ಞಾನ ಮತ್ತು ವಿದ್ಯೆ ಎರಡೂ ಸಮ್ಮಿಳಿತವಾಗಿದ್ದರೆ ಆತ ಉನ್ನತ ಹಂತಕ್ಕೇರುತ್ತಾನೆ. ಐಶ್ವರ್ಯ, ಹಣ, ಅಂತಸ್ತು ಎಲ್ಲಕ್ಕಿಂತ ದೊಡ್ಡದು ಜ್ಞಾನ ಮತ್ತು ವಿದ್ಯೆ. ಆದ್ದರಿಂದ ವಿದ್ಯಾರ್ಥಿಗಳು ಶ್ರದ್ಧೆಯಿಂದ ವ್ಯಾಸಂಗ ಮಾಡಿ ಉನ್ನತ ಸ್ಥಾನಕ್ಕೇರಬೇಕು ಎಂದು ಸಲಹೆ ನೀಡಿದರು.

ಆರಾಧ್ಯ ಸಮಾಜದಲ್ಲಿ ಅನೇಕರು ಪೌರೋಹಿತ್ಯ, ಆಗಮ, ಜ್ಯೋತಿಷ್ಯವನ್ನು ನೆಚ್ಚಿಕೊಂಡಿದ್ದಾರೆ. ಹಾಗಾಗಿ ಆಸಕ್ತ ಯುವಕರಿಗೆ ಪೌರೋಹಿತ್ಯ ತರಗತಿಗಳನ್ನು ನಗರದಲ್ಲಿ ಕಲಿಸಲಾಗುತ್ತಿದೆ. ಈಗ ಮಹಿಳೆಯರೂ ಪೌರೋಹಿತ್ಯ ಕಲಿಯಲು ಆಸಕ್ತಿ ವಹಿಸಿದ್ದು, ಅಂಥವರಿಗೂ ಪಾಠ ಹೇಳಿಕೊಡಲಾಗುವುದು ಎಂದು ತಿಳಿಸಿದರು.

ಗುಂಡ್ಲುಪೇಟೆ ತಾಲೂಕು ಉಪಾಧ್ಯಕ್ಷ ಕೆ.ಸಿ. ರಾಜಶೇಖರ ಆರಾಧ್ಯ, ನಿವೃತ್ತ ಅಧ್ಯಾಪಕ ಆರ್. ಪಿ. ನಿರಂಜನ್ ಮಾತನಾಡಿದರು.



ಆರಾಧ್ಯ ಟ್ರಸ್ಟ್‌ನ ಗೌರವಾಧ್ಯಕ್ಷ ವಕೀಲ ಎಸ್. ರುದ್ರಾರಾಧ್ಯ, ಉಪಾಧ್ಯಕ್ಷ ಅಗರ ರಾಮಾರಾಧ್ಯ, ಕಾರ್ಯದರ್ಶಿ ಮಹದೇವಾರಾಧ್ಯ, ಖಜಾಂಚಿ ಬಿ. ಮಲ್ಲಾರಾಧ್ಯ, ಸಂಘಟನಾ ಕಾರ್ಯದರ್ಶಿ ಎಂ.ಆರ್. ಶಿವಶಂಕರಾರಾಧ್ಯ, ಸದಸ್ಯರಾದ ಗುರುಮಲ್ಲಾರಾಧ್ಯ, ಸಿದ್ದರಾಮಾರಾಧ್ಯ, ಮಲ್ಲಾರಾಧ್ಯ, ಚಂದ್ರಶೇಖರಾರಾಧ್ಯ, ನಿಜಗುಣಾರಾಧ್ಯ, ಗಣೇಶಾರಾಧ್ಯ, ಚಂದ್ರಶೇಖರಾರಾಧ್ಯ, ಕೆ. ಸೋಮಾರಾಧ್ಯ, ಎಂ.ಎಸ್. ಗಾಯತ್ರಿ, ಶಿಕ್ಷಕ ಸಿ.ಕೆ. ಮಹೇಶಾರಾಧ್ಯ, ಅರಳಿಕಟ್ಟೆ ನವೀನ್ ಆರಾಧ್ಯ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ. 85ಕ್ಕಿಂತಲೂ ಅಧಿಕ ಅಂಕ ಗಳಿಸಿದ ಜಿಲ್ಲೆಯ ಆರಾಧ್ಯ ಸಮಾಜದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪಣ್ಯದಹುಂಡಿ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಬದನಗುಪ್ಪೆ ಜು.5– ಚಾಮರಾಜನಗರ ತಾಲೂಕು ಪಣ್ಯದಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಪಿ.ಹೆಚ್. ಕುಮಾರ ಮತ್ತು ಉಪಾಧ್ಯಕ್ಷರಾಗಿ ಎಸ್. ನಾಗರಾಜುರವರು ಅವಿರೋಧವಾಗಿ ಆಯ್ಕೆಯಾದರು. ಸಂಘದ ಅಧ್ಯಕ್ಷರಾಗಿದ್ದ ಜೆ. ಸಂತೋಷ್ ನೂತನ ಅಧ್ಯಕ್ಷ ಪಿ.ಹೆಚ್. ಕುಮಾರ್ ಅವರಿಗೆ ಅಧಿಕಾರ ವಹಿಸಿಕೊಟ್ಟರು. ಚುನಾವಣಾಧಿಕಾರಿಗಳಾದ ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಹೇಮಂತ್‌ಕುಮಾರ್ ಅವರು ಅವಿರೋಧ ಆಯ್ಕೆ ಘೋಷಿಸಿದರು. ಈ ವೇಳೆ ಗ್ರಾಮದ ಮುಖಂಡರು ಮತ್ತು ನೂತನವಾಗಿ ಆಯ್ಕೆಯಾದ ಕಾರ್ಯಕಾರಿ ಮಂಡಳಿಯ ಸದಸ್ಯರುಗಳು ಹಾಜರಿದ್ದರು.

ಅಕ್ಕಿ ನೀಡದ ಕೇಂದ್ರ ಸರ್ಕಾರದ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ

ಸಂಸದ ವಿ.ಶ್ರೀನಿವಾಸಪ್ರಸಾದ್‌ರವರ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ

ಚಾಮರಾಜನಗರ, ಜು.5– ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರ ಅಕ್ಕಿ ನೀಡುತ್ತಿಲ್ಲ ಎಂದು ಆರೋಪಿಸಿ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಅಜೀಜ್ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ನಗರದ ಜಿಲ್ಲಾಡಳಿತ ಭವನದಲ್ಲಿರುವ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ಕಚೇರಿಗೆ ಮುತ್ತಿಗೆ ಹಾಕಿ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಅಜೀಜ್ ಮಾತನಾಡಿ, ನಮ್ಮ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಯುವ ಸರ್ಕಾರ. ಅನ್ನಭಾಗ್ಯ ಯೋಜನೆಯಡಿಯಲ್ಲಿ ಬಡವರಿಗೆ ವಿತರಿಸಲು ಅಕ್ಕಿ ಕೇಳಿದರೆ ಕೇಂದ್ರ ಸರ್ಕಾರ ಕೊಡುವುದಾಗಿ ಒಪ್ಪಿಕೊಂಡು ತದನಂತರ ಅಕ್ಕಿ ವಿತರಿಸದೇ ಇರುವುದು ಅತ್ಯಂತ ಖಂಡನೀಯ ಎಂದರು. ಬಿಜೆಪಿ ಸಂಸದರು ರಾಜ್ಯದ ಹಿತ ಕಾಯುವಲ್ಲಿ ವಿಫಲರಾಗಿದ್ದಾರೆ. ಈ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜನತೆ ಕಾಂಗ್ರೆಸ್‌ಗೆ ಬಹುಮತ ತಂದು ಕೊಡುವ ಮೂಲಕ ತಕ್ಕಪಾಠ ಕಲಿಸಿದ್ದಾರೆ. ಅಕ್ಕಿ ದಾಸ್ತಾನು ಇದ್ದರೂ ಕೂಡ ಅಕ್ಕಿ ವಿತರಿಸದೆ ಬಡವರ ಹೊಟ್ಟೆಯ ಮೇಲೆ ಹೊಡೆಯುತ್ತಿದೆ ಎಂದು ಆರೋಪಿಸಿದರು.



ಜಿಲ್ಲಾ ಕಾರ್ಯಾಧ್ಯಕ್ಷ ಹೊಸಹಳ್ಳಿ ಮಧುಸೂದನ್ ಮಾತನಾಡಿ, ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಅನ್ನಭಾಗ್ಯ ಯೋಜನೆಯಡಿಯಲ್ಲಿ ರಾಜ್ಯದ ಜನತೆಗೆ 10 ಕೆಜಿ ಉಚಿತ ಅಕ್ಕಿ ವಿತರಿಸಲು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ನವರು, ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ರಾಜ್ಯ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ಅಗತ್ಯಪ್ರಮಾಣದ ಅಕ್ಕಿ ಖರೀದಿಸಲು ಸಿದ್ಧವಿದ್ದರೂ ಕೇಂದ್ರ ಸರ್ಕಾರ ನೀಡುತ್ತಿಲ್ಲ. ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ಮಧು ಹೆಬ್ಬಸೂರು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನಾಗೇಂದ್ರನಾಯಕ, ಶ್ರೀನಿವಾಸ, ಸೋಮೇಶ್, ಕಿರಣ, ಗಿಡ್ಡಯ್ಯ, ಹರವೆ ನಾಗೇಶ್, ಕೇಶವಮೂರ್ತಿ, ಚಾಮರಾಜನಗರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ತೌಸಿಫ್, ಎನ್‌ಎಸ್‌ಯುಐ ಅಧ್ಯಕ್ಷ ಮೋಹನ್, ಪ್ರಚಾರ ಸಮಿತಿ ಅಧ್ಯಕ್ಷ ಅಕ್ಷಯ್ ಕುಮಾರ್ ಇತರರು ಭಾಗವಹಿಸಿದ್ದರು.



ಭಾರತೀಯ ವೈದ್ಯಕೀಯ ಸಂಘದ ರಾಷ್ಟ್ರೀಯ ಅಧ್ಯಕ್ಷ ಡಾ.ಶರದ್‌ಕುಮಾರ್ ಅಗರ್‌ವಾಲ್ ಅವರು ಭಾರತೀಯ ವೈದ್ಯಕೀಯ ಸಂಘದ ಮೈಸೂರು ಶಾಖೆಗೆ ಇತ್ತೀಚೆಗೆ ಭೇಟಿ ನೀಡಿದ್ದರು. ಈ ವೇಳೆ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಡಾ. ಪವನ್ ಪಾಟೀಲ್, ಡಾ. ಪ್ರಸನ್ನ ಶಂಕರ್, ಡಾ. ಎಂ. ವೆಂಕಟಾಚಲಪತಿ, ಡಾ. ಶಿವಕುಮಾರ್ ಬಿ. ಲಕ್ಕೋಲ್, ಡಾ. ಬಿ.ಎನ್.ಶಿವಶಂಕರ್, ಡಾ. ವೈ.ಎಂ. ಶಿವಕುಮಾರ್, ಡಾ. ದೇವಿ ಆನಂದ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

ಒಂದನೇ ಪುಟದಿಂದ

ಭ್ರಷ್ಟಾಚಾರದ 'ಪೆನ್‌ಡ್ರೈವ್'

ಇದರಲ್ಲಿ ಹಾವಿದೆ ನೋಡಿ ಎಂದು ಪೆನ್‌ಡ್ರೈವ್ ಪ್ರದರ್ಶಿಸಿದರು. ಭ್ರಷ್ಟ ಅಧಿಕಾರಿಯೊಬ್ಬರು ಇಂಧನ ಇಲಾಖೆಯಲ್ಲಿ 10 ಕೋಟಿ ರೂ. ಲಂಚ ನೀಡಿ ಪ್ರಮುಖ ಹುದ್ದೆ ಅಲಂಕರಿಸಿ ದ್ದಾರೆ. ಅವರಿಗೆ ದಿನನಿತ್ಯ 50 ಲಕ್ಷ ರೂ ಲಂಚ ಬರುತ್ತದೆ ಎಂದು ಮತ್ತೊಮ್ಮೆ ಪೆನ್‌ಡ್ರೈವ್ ಪ್ರದರ್ಶಿಸಿದರು. ನಾನೇನು ರೌಡಿಗಳಿಗೆ ಬಾಟಲು ಸರಬರಾಜು ಮಾಡಿ, ಟೆಂಟ್‌ಗಳಲ್ಲಿ ನೀಲಿಚಿತ್ರ ಪ್ರದರ್ಶಿಸಿ ಕಾಸು ಮಾಡಿದವನಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಕಿಡಿಕಾರಿದ ಕುಮಾರಸ್ವಾಮಿ, ನಾನು ತಾಜ್ ವೆಸ್ಟೆಂಡ್ ರೂಂಗೆ ಬಾಡಿಗೆ ಕೊಡದೇ ಇರುವುದು ಅವರಿಗೆ ಗೊತ್ತಾ?

ನಾನು ಚುನಾವಣೆಗಳನ್ನು ನಡೆಸುತ್ತೇನೆ. ಉಳ್ಳವರು, ನನ್ನ ಹಿತೈಷಿಗಳು ನನಗೆ ಹಣ ಕೊಡುತ್ತಾರೆ. ನನಗೆ ಈಗಲೂ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ರೂಂ ಇದೆ. ಆ ಹೋಟೆಲ್‌ನವರು ಕಾಂಗ್ರೆಸ್ ಮಹಾನ್ ನಾಯಕರಿಗೆ ದೂರು ಕೊಟ್ಟಿದ್ದಾರೆಯೇ ಎಂದು ಕಿಡಿಕಾರಿದರು. ಕಾಂಗ್ರೆಸ್ ನಾಯಕರು ಈ ಸಂಬಂಧ ಸರಣಿ ಟ್ವೀಟ್ ಮಾಡಿ ಏನೋ ದೊಡ್ಡ ಮಹಾ ಸಾಧನೆ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ನಾನು ರಾಜಕೀಯಕ್ಕೆ ಬರುವುದಕ್ಕೂ ಮುನ್ನ, ಆ ನಂತರ ನನ್ನ ಹಣಕಾಸು ವಹಿವಾಟಿನ ಬಗ್ಗೆ ತನಿಖೆ ಮಾಡಲಿ. ನಾನೇನು ಇವರ ರೀತಿ ನೀಲಿಚಿತ್ರ ತೋರಿಸಿ ಹಣ ಮಾಡಿಲ್ಲ ಎಂದರು. ಕುಮಾರಸ್ವಾಮಿ ಅವರ ಪೆನ್‌ಡ್ರೈವ್ ವಿಚಾರಕ್ಕೆ ಸಂಬಂಧಿಸಿ ದಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರು ಹತಾಶರಾಗಿ ಮಾತನಾಡುತ್ತಿದ್ದಾರೆ. ಚುನಾವಣಾ ಸೋಲಿನಿಂದ ಹೊರಬರಲಾಗದೆ, ಇಂತಹ ಆರೋಪ ಮಾಡುತ್ತಿದ್ದಾರೆ. ಎಲ್ಲದಕ್ಕೂ ವಿಧಾನಸಭೆಯಲ್ಲೇ ಉತ್ತರ ಕೊಡುವುದಾಗಿ ಹೇಳಿದರು. ಇದೇ ಸಂದರ್ಭದಲ್ಲಿ ಪ್ರತ್ಯೇಕವಾಗಿ ಮಾತನಾಡಿದ ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್, ನನ್ನ ಇಲಾಖೆಯಲ್ಲಿ ವರ್ಗಾವಣೆಯ ದಂಧೆಯ ದಾಖಲೆಗಳಿದ್ದರೆ ಸಭಾಧ್ಯಕ್ಷರಿಗೆ ನೀಡಲಿ. ನಂತರ ಅದಕ್ಕೆ ಉತ್ತರ ನೀಡಿ ತನಿಖೆಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಜಾರಿ ಗ್ಯಾರಂಟಿ

ಪದವಿ ಪಡೆದವರಿಗಷ್ಟೇ ಅನ್ವಯವಾಗಲಿದೆ. ಈಗಾಗಿ ಸ್ವಲ್ಪ ಸಮಯಾವಕಾಶ ತೆಗೆದುಕೊಂಡಿದ್ದೇವೆ ಎಂದು ಸಮರ್ಥಿಸಿಕೊಂಡರು. ಮಧ್ಯೆ ಪ್ರವೇಶಿಸಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನೀವು ಬಿಜೆಪಿಯವರು ಪಶ್ಚಾತ್ತಾಪದಿಂದ ಪ್ರತಿಭಟನೆ ಮಾಡುತ್ತಿದ್ದೀರಿ. ನಿಮ್ಮ ಪ್ರಧಾನಿಯಾಗಲಿ, ನೀವು ಆಡಳಿತದಲ್ಲಿರುವ ರಾಜ್ಯಗಳಲ್ಲಿ ನೀಡಿದ್ದ ಭರವಸೆ ಈಡೇರಿಸಿಲ್ಲ. ನಾವು ಅಧಿಕಾರಕ್ಕೆ ಬಂದ 30 ದಿನದೊಳಗಾಗಿ ಶೇ.60ರಷ್ಟು ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ತಂದಿದ್ದೇವೆ. ಉಳಿದ ಎರಡು ಯೋಜನೆಗಳ ಅನುಷ್ಠಾನಕ್ಕೆ ತರುವ ಹಂತದಲ್ಲಿವೆ. ನೀವು ರಾಜಕೀಯ ಮಾಡಲೇಬೇಕು ಎಂದು ಮಾಡಿದರೂ ಜನ ನಿಮ್ಮನ್ನು ನಂಬುವುದಿಲ್ಲ.

ರಾಜ್ಯದ ಜನತೆ ಸರ್ಕಾರದ ತೀರ್ಮಾನವನ್ನು ಸ್ವಾಗತಿಸಿದ್ದಾರೆ. ನೀವು ಏಕೆ ಸುಮ್ಮನೆ ಇಲ್ಲದ್ದನ್ನು ಮಾತನಾಡುತ್ತೀರಿ. ಅದರ ಬದಲು ವಿಶ್ವಮಟ್ಟದಲ್ಲಿ ಕಚ್ಚಾತೈಲ ಬೆಲೆ ಕುಸಿದಿದೆ. ನೀವು 25 ಸಂಸದರು ಕೇಂದ್ರದ ಮೇಲೆ ಒತ್ತಡ ತಂದು ಪೆಟ್ರೋಲ್ ಮತ್ತು ಡೀಸೆಲ್ ದರ ಇಳಿಸಲು ಹೋರಾಟ ನಡೆಸಿ ಎಂದು ಬಿಜೆಪಿ ಸದಸ್ಯರಿಗೆ ತಿರುಗೇಟು ನೀಡಿದರು.

ಇದಕ್ಕೂ ಮುನ್ನ ಬಿಜೆಪಿಯ ಅಶೋಕ್ ಮಾತನಾಡಿ, ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಯಾವುದೇ ಷರತ್ತಿಲ್ಲದೆ ಅನುಷ್ಠಾನಕ್ಕೆ ತರುವುದಾಗಿ ಐದು ಗ್ಯಾರಂಟಿಗಳ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲೇ ಜಾರಿ ಮಾಡುವುದಾಗಿ ಹೇಳಿತ್ತು. ಆದರೆ, ರಾಜ್ಯ ಸರ್ಕಾರ ಪ್ರತಿಯೊಂದಕ್ಕೂ ಷರತ್ತುಗಳನ್ನು ವಿಧಿಸುತ್ತಿದೆ. 5 ಗ್ಯಾರಂಟಿಗಳು ಗೊಂದಲದ ಗ್ಯಾರಂಟಿಗಳಾಗಿದ್ದು, ವಾರಂಟಿ ಇಲ್ಲದಂತಾಗಿದೆ ಎಂದು ಟೀಕಿಸಿದರು. ಗ್ಯಾರಂಟಿ ಸೌಲಭ್ಯ ಸಿಗುತ್ತದೋ ಇಲ್ಲವೋ ಎಂಬ ಗೊಂದಲದಲ್ಲಿ ಜನರಿದ್ದಾರೆ. ಸರ್ಕಾರ ಜನರ ವಿಶ್ವಾಸವನ್ನು ಕಳೆದುಕೊಂಡಿದೆ. ಜನರಿಗೆ ಮೋಸ ಮಾಡಿದೆ ಎಂದು ಆರೋಪಿಸಿದರು. ಗ್ಯಾರಂಟಿ ಅನುಷ್ಠಾನ ಮಾಡದೇ, ಇಲ್ಲಿ ಕೂರುವ ನೈತಿಕತೆ ನಿಮಗಿಲ್ಲ. ಅನ್ನಭಾಗ್ಯ ಯೋಜನೆಯಡಿ ಕೇಂದ್ರ ಸರ್ಕಾರ ಕೊಡುವ 5 ಕೆ.ಜಿ.ಅಕ್ಕಿ ಹೊರತುಪಡಿಸಿ ಮಾತು ಕೊಟ್ಟಂತೆ ಹತ್ತು ಕೆಜಿ. ಅಕ್ಕಿ ನೀಡಿ ಎಂದು ಒತ್ತಾಯಿಸಿದರು.

ಗ್ಯಾರಂಟಿ ವಿಚಾರದಲ್ಲಿ ಆಡಳಿತ ಮತ್ತು ಬಿಜೆಪಿ ಸದಸ್ಯರ ನಡುವೆ ಪದೇ ಪದೆ ಮಾತಿನ ಚಕಮಕಿ ನಡೆಯಿತು. ಪ್ರಣಾಳಿಕೆಯ ಭರವಸೆ ವಿಚಾರದಲ್ಲಿ ಪರಸ್ಪರ ಆರೋಪ ಮತ್ತು ಪ್ರತ್ಯಾರೋಪಗಳನ್ನು ಮಾಡಿ ಸದನದಲ್ಲಿ ಕಾವೇರಿದ ವಾತಾವರಣ ಉಂಟಾಯಿತು. ಸಭಾಧ್ಯಕ್ಷ ಯು.ಟಿ.ಖಾದರ್ ಮಧ್ಯೆ ಪ್ರವೇಶಿಸಿ ಎರಡೂ ಕಡೆಯವರನ್ನು ಸಮಾಧಾನಪಡಿಸಿದರು. ಬಿಜೆಪಿ ಪ್ರಸ್ತಾಪಿಸಿರುವ ವಿಚಾರ ನಿಲುವಳಿ ಸೂಚನೆಯಡಿ ನಿಯಮಗಳ ಪ್ರಕಾರ ಬರುವುದಿಲ್ಲ. ತಿರಸ್ಕರಿಸಬೇಕು ಎಂದು ಸರ್ಕಾರದ ಪರವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಮನವಿ ಮಾಡಿದರು. ಗ್ಯಾರಂಟಿ ವಿಚಾರದ ವಿಸ್ತೃತ ಚರ್ಚೆಗೆ ಅವಕಾಶ ನೀಡಬೇಕು ಎಂದು ಬಿಜೆಪಿ ಸದಸ್ಯರು ಒತ್ತಾಯಿಸಿದರು. ಆಗ ಸಭಾಧ್ಯಕ್ಷರು ನಿಲುವಳಿ ಸೂಚನೆಯಡಿ ಚರ್ಚೆಗೆ ಬದಲಾಗಿ ನಿಯಮ 69ರಡಿ ಚರ್ಚೆಗೆ ಅವಕಾಶ ನೀಡುವುದಾಗಿ ಪ್ರಕಟಿಸಿ ಕಾವೇರಿದ್ದ ಚರ್ಚೆಗೆ ತೆರೆ ಎಳೆದರು.

ಜು.10ರಂದು ಅಧಿಕೃತ ಚಾಲನೆ

ಜೊತೆ ಆಧಾರ್ ಲಿಂಕ್ ಕಡ್ಡಾಯವಾಗಿ ಆಗಿರಬೇಕು. ಪಡಿತರ ಚೀಟಿಯಲ್ಲಿ ಮನೆ ಮುಖ್ಯಸ್ಥರು ಯಾರು ಎಂಬುದು ಕಾರ್ಡ್ ನಲ್ಲಿ ನಮೂದಾಗಿರುತ್ತದೆ. ಮನೆಯ ಮುಖ್ಯಸ್ಥರು ಸಾಮಾನ್ಯವಾಗಿ ಮಹಿಳೆಯರೇ ಆಗಿರುತ್ತಾರೆ. ಮನೆ ಯಜಮಾನಿಯ ಹೆಸರಿನಲ್ಲಿ ಬ್ಯಾಂಕ್ ಅಕೌಂಟ್ ಖಾತೆ ಇರಬೇಕು. ಅಲ್ಲದೆ ಒಂದು ವೇಳೆ ಮನೆಯ ಮುಖ್ಯಸ್ಥರದ್ದು ಇಲ್ಲದೇ ಹೋದಲ್ಲಿ, ಪಡಿತರ ಚೀಟಿಯಲ್ಲಿರುವ ಯಾರಾದರೂ ಒಬ್ಬರ ಹೆಸರಿನಲ್ಲಿ ಖಾತೆ ಆಧಾರ್ ಲಿಂಕ್ ಆಗಿರಬೇಕು ಎಂದು ಸರ್ಕಾರ ಹೇಳಿದೆ. ಇನ್ನು ಈ ಧನಭಾಗ್ಯಕ್ಕಾಗಿ ಪ್ರತ್ಯೇಕ ಅರ್ಜಿ ಸಲ್ಲಿಕೆ ಮಾಡಬೇಕಿಲ್ಲ ಆದರೆ ಆಧಾರ್ ಲಿಂಕ್ಡ್ ಬ್ಯಾಂಕ್ ಖಾತೆ ವಿವರ ಮಾತ್ರ ಕಡ್ಡಾಯವಾಗಿರುತ್ತದೆ

ವಾಹನಗಳ ಸ್ಪೀಡ್‌ಗೆ ಬ್ರೇಕ್

ನಿಯಂತ್ರಿಸುವ ನಿಟ್ಟಿನಲ್ಲಿ ಸ್ಪೀಡ್ ರೀಡರ್ ಗನ್ ಮತ್ತು ವಾಹನದ ನಂಬರ್ ಪ್ಲೇಟ್ ರೆಕಗ್ನೇಷನ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ ಎಂಬುದನ್ನು ತಿಳಿಸಿರುವುದಲ್ಲದೇ, ಗಸ್ತು ವಾಹನದಲ್ಲಿ ಸ್ಪೀಡ್ ರೀಡರ್ ಗನ್‌ನೊಂದಿಗೆ ಅಪಘಾತ ನಿಯಂತ್ರಣಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ರಾಮನಗರ ಜಿಲ್ಲಾ ಪೊಲೀಸರು ಅತೀ ವೇಗವಾಗಿ ವಾಹನ ಚಾಲನೆ ಮಾಡಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ್ದಾರೆ. ರಾಮನಗರ ಜಿಲ್ಲಾ ಎಸ್ಪಿ ಮತ್ತು ಅವರ ತಂಡವನ್ನು ಶ್ಲಾಘಿಸಿದ್ದಾರೆ. "ದಂಡ ಪಾವತಿಸುವುದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅಲ್ಲ, ಜೀವ ಉಳಿಸಲು ಸಂಚಾರ ನಿಯಮಗಳನ್ನು ಪಾಲಿಸಿ" ಎಂದು ಜನತೆಗೆ ಕರೆ ನೀಡಿದ್ದಾರೆ.

ರಾಮನಗರ ಜಿಲ್ಲಾ ಪೊಲೀಸರು ಅತೀ ವೇಗದ ಚಾಲನೆಗೆ ಸಂಬಂಧಿಸಿದಂತೆ 44 ಪ್ರಕರಣಗಳನ್ನು ದಾಖಲಿಸಿದ್ದಾರೆ. ಗಸ್ತು ವಾಹನಕ್ಕೆ ಸ್ಪೀಡ್ ರೀಡರ್ ಗನ್ ಅಳವಡಿಸಿದ್ದು, ಈ ವಾಹನವು ರಾಮನಗರ ಜಿಲ್ಲಾ ವ್ಯಾಪ್ತಿಯ ಎಕ್ಸ್‌ಪ್ರೆಸ್‌ವೇನಲ್ಲಿ ಸಂಚರಿಸುತ್ತಿದೆ. ಅಪಘಾತ ವಲಯ ಎಂದು ಗುರುತಿಸಲ್ಪಟ್ಟಿರುವ ಸ್ಥಳಗಳಲ್ಲಿ ಕೆಲ ಸಮಯ ಈ ವಾಹನವನ್ನು ನಿಲ್ಲಿಸಲಾಗುತ್ತಿದ್ದು, ಆ ಮಾರ್ಗವಾಗಿ ಸಂಚರಿಸುವ ವಾಹನಗಳ ವೇಗವನ್ನು ರೆಕಾರ್ಡ್ ಮಾಡಿಕೊಂಡು ಪ್ರಕರಣ ದಾಖಲಿಸಲಾಗುತ್ತದೆ. ಇಷ್ಟಕ್ಕೇ ನಿಲ್ಲದ ಪೊಲೀಸರು, ಎಕ್ಸ್‌ಪ್ರೆಸ್‌ವೇನ ಕೆಲವೆಡೆ 2 ಲೇನ್‌ಗಳಿಗೆ ಬ್ಯಾರಿಕೇಡ್‌ಗಳನ್ನು ಅಳವಡಿಸುವ ಮೂಲಕ ನಿಗದಿತ ಸ್ಥಳದಲ್ಲಿ ವಾಹನಗಳ ವೇಗಕ್ಕೆ ಬ್ರೇಕ್ ಹಾಕಲು ಪ್ರಯತ್ನಿಸಿದ್ದಾರೆ. ಈ ಸ್ಥಳಗಳಲ್ಲಿ ಅತೀ ವೇಗವಾಗಿ ಬರುವ ವಾಹನಗಳನ್ನು ನಿಲ್ಲಿಸುವ ಪೊಲೀಸರು ಪ್ರಕರಣ ದಾಖಲಿಸುವುದರ ಜೊತೆಗೆ ಚಾಲಕರಿಗೆ ಬುದ್ಧಿವಾದ ಹೇಳಿ ಕಳುಹಿಸುತ್ತಿದ್ದಾರೆ ಎನ್ನಲಾಗಿದೆ. ಚನ್ನಪಟ್ಟಣ-ಮಂಡ್ಯ ನಡುವೆ ಎಕ್ಸ್‌ಪ್ರೆಸ್‌ವೇನಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸಿದ್ದು, ಸಾವು-ನೋವುಗಳು ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲಾ ಪೊಲೀಸರು ಇಂಟರ್‌ಸೆಪ್ಟರ್‌ಗಳನ್ನು ನಿಯೋಜಿಸಿದ್ದಾರೆ.

ರಾಮನಗರ ಜಿಲ್ಲಾ ಪೊಲೀಸರ ಕಾರ್ಯವೈಖರಿಯನ್ನು ಶ್ಲಾಘಿಸಿ ಎಡಿಜಿಪಿ ಅಲೋಕ್ ಕುಮಾರ್ ಟ್ವೀಟ್ ಮಾಡಿದ ಬೆನ್ನಲ್ಲೇ ಇತ್ತ ಶ್ರೀರಂಗಪಟ್ಟಣ ಡಿವೈಎಸ್ಪಿ ಮುರಳಿ ನೇತೃತ್ವದಲ್ಲಿ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ. ಕುಮಾರ್, ಸಬ್ ಇನ್ಸ್‌ಪೆಕ್ಟರ್ ರವಿ, ಮಂಡ್ಯ ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಕಮಲಾಕ್ಷಿ ಅವರುಗಳು ತಮ್ಮ ಸಿಬ್ಬಂದಿಯೊಂದಿಗೆ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣಾ ವ್ಯಾಪ್ತಿಯ ಕೋಡಿಶೆಟ್ಟಿಪುರ ಬಳಿ ಎಕ್ಸ್‌ಪ್ರೆಸ್‌ನಲ್ಲಿ ಇಂಟರ್‌ಸೆಪ್ಟರ್‌ನೊಂದಿಗೆ ನಿಂತು ಅತೀ ವೇಗವಾಗಿ ಚಲಿಸುವ ವಾಹನಗಳನ್ನು ತಡೆದು ಪ್ರಕರಣ ದಾಖಲಿಸುವ ಕಾರ್ಯಕ್ಕೆ ಮುಂದಾದರು. ಎಕ್ಸ್‌ಪ್ರೆಸ್‌ವೇನಲ್ಲಿ ದಿನನಿತ್ಯ ಅಪಘಾತಗಳು ಸಂಭವಿಸುತ್ತಿದ್ದ ಹಿನ್ನೆಲೆಯಲ್ಲಿ ಇತ್ತೀಚೆಗಷ್ಟೇ ಈ ರಸ್ತೆ ಪರಿಶೀಲನೆ ನಡೆಸಿದ್ದ ಎಡಿಜಿಪಿ ಅಲೋಕ್‌ಕುಮಾರ್ ಅವರು, ಅತೀ ವೇಗವಾಗಿ ಚಾಲನೆ ಮಾಡುವ ವಾಹನ ಚಾಲಕರು ಹಾಗೂ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸುವ ಜೊತೆಗೆ ಡಿಎಲ್ ರದ್ದುಪಡಿಸಲಾಗುವುದು ಎಂದು ಎಚ್ಚರಿಸಿದ್ದರು. ಆನಂತರ ಪೊಲೀಸ್ ಇಲಾಖೆ ವೇಗದ ಮಿತಿ ನಿಗದಿಪಡಿಸಿ, ಸೂಚನಾ ಫಲಕಗಳನ್ನು ಅಳವಡಿಸಿದೆ.

ಡೆಂಗ್ಯೂ, ಚಿಕುನ್‌ಗುನ್ಯಾ, ಮಲೇರಿಯಾ ರೋಗಗಳ ತಡೆಗೆ ಅಗತ್ಯ ಕ್ರಮಕ್ಕೆ ಜಿಲ್ಲಾಧಿಕಾರಿ ಸೂಚನೆ



ಮೈಸೂರು,ಜು.5- ಮುಂಗಾರು ಮಳೆಯು ಪ್ರಾರಂಭವಾಗಿರುವುದರಿಂದ ಅಲ್ಲಲ್ಲಿ ಮಳೆ ನೀರು ನಿಂತು ಡೆಂಗ್ಯೂ, ಚಿಕುನ್‌ಗುನ್ಯಾ, ಮಲೇರಿಯಾ ಹರಡುವ ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗಿರುವುದರಿಂದ ಈ ರೋಗಗಳ ತಡೆಗೆ ಅಗತ್ಯ ಕ್ರಮಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಡಾ ಕೆ.ವಿ.ರಾಜೇಂದ್ರ ತಿಳಿಸಿದರು.

ಬುಧವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ, ಜಿಲ್ಲಾ ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾ ಅಂತರ ಇಲಾಖೆಗಳ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲಾ ನೀರಿನ ತೊಟ್ಟಿಗಳು, ಡ್ರಮ್‌ಗಳು, ಬ್ಯಾರೆಲ್‌ಗಳು, ಏರ್‌ಕೂಲರ್, ತೊಟ್ಟಿ ಇತ್ಯಾದಿಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ, ಸ್ವಚ್ಛಗೊಳಿಸಿ, ಒಣಗಿಸಿ ಮತ್ತೆ ಭರ್ತಿ ಮಾಡಬೇಕು. ನೀರನ್ನು ಖಾಲಿ ಮಾಡಲು ಸಾಧ್ಯವಿಲ್ಲದ ತೊಟ್ಟಿ, ಡ್ರಮ್ ಮುಂತಾದವುಗಳನ್ನು ಸೊಳ್ಳೆಗಳು ಒಳಗೆ ನುಸಳದಂತೆ ಮುಚ್ಚಳದಿಂದ ಮುಚ್ಚಬೇಕು. ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳಾದ ಟೈರು, ಎಳನೀರು ಚಿಪ್ಪು, ಮರದ ಪೊಟರೆಗಳಲ್ಲಿ ಒಡೆದ ಬಾಟಲಿ ಕುಡಿದು ಬಿಸಾಡಿದ ಪ್ಲಾಸ್ಟಿಕ್ ಲೋಟ, ಬಾಟಲ್ ಮುಂತಾದವುಗಳನ್ನು ಸೂಕ್ತ ವಿಲೇವಾರಿ ಮಾಡುವ ಕಾರ್ಯವನ್ನು ಕೈಗೊಳ್ಳಬೇಕು. ಆರೋಗ್ಯ ಇಲಾಖೆಯಿಂದ ಹಮ್ಮಿಕೊಂಡ ಸೊಳ್ಳೆ ನಿಯಂತ್ರಣ ಕ್ರಮಗಳಿಗೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ತಿಳಿಸಿದರು.

ಸ್ವಚ್ಛತೆ ಇಲ್ಲದ ಹೈ-ರಿಸ್ಕ್ ಏರಿಯಾಗಳನ್ನು ಗುರುತಿಸಿ ಸ್ವಚ್ಛತೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ. ಡೆಂಗ್ಯೂ, ಚಿಕುನ್‌ಗುನ್ಯಾಗಳು ಯಾವ ಏರಿಯಾಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ ಎಂದು ಗುರುತಿಸಿ ಆ ಏರಿಯಾಗಳಿಗೆ ಸ್ಯಾನಿಟೈಸೇಶನ್ ಮಾಡಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹಂದಿಗಳನ್ನು ಸಾಕುವ ಸ್ಥಳಗಳಲ್ಲಿ ಕೊಳಚೆಯ ಪ್ರದೇಶಗಳು ನಿರ್ಮಾಣವಾಗುವುದರಿಂದ ಹಂದಿ ಸಾಕಾಣೆಗಾರರೊಂದಿಗೆ ಮಾತನಾಡಿ, ಅವರಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಿ, ಹಂದಿ ಸಾಕಾಣಿಕೆ ಸ್ಥಳಗಳಲ್ಲಿ ಕೊಳಚೆ ಪ್ರದೇಶ ನಿರ್ಮಾಣವಾಗದಂತೆ ಪರ್ಯಾಯ ಮಾರ್ಗ ವ್ಯವಸ್ಥೆಯನ್ನು ಕಂಡುಕೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಡೆಂಗ್ಯೂ, ಚಿಕುನ್‌ಗುನ್ಯಾ, ಮಲೇರಿಯಾ ಪ್ರಕರಣಗಳು ಕಂಡು ಬಂದರೆ ಸಂಬಂಧಪಟ್ಟ ವ್ಯಾಪ್ತಿಯ ವೈದ್ಯರಿಗೆ ಪಿ.ಡಿ.ಒಗಳಿಗೆ ಮಾಹಿತಿ ನೀಡಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಬೇಕು. ಮನೆಗಳಲ್ಲಿ ಸೊಳ್ಳೆಗಳು ಕಚ್ಚದಂತೆ ಸೊಳ್ಳೆ ಪರದೆ, ವಾಲ್‌ಸ್ಪ್ರೇ, ಮೊದಲಾದ ಸೊಳ್ಳೆಗಳಿಂದ ರಕ್ಷಿಸಿಕೊಳ್ಳುವ ಮಾರ್ಗಗಳನ್ನು ಸಾರ್ವಜನಿಕರಿಗೆ ತಿಳಿಸುವ ಕಾರ್ಯಕ್ರಮಗಳನ್ನು ನಡೆಸಬೇಕು ಎಂದರು.

ಕೃಷಿ ಹೊಂಡಗಳಲ್ಲಿ, ಕ್ವಾರೆಗಳಲ್ಲಿನ ಗುಂಡಿಗಳಲ್ಲಿ ಈಡಿಸ್ ಸೊಳ್ಳೆಗಳನ್ನು ಆಹಾರವಾಗಿ ಸೇವಿಸುವ ಮೀನುಗಳನ್ನು ನೀಡುವಂತೆ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಾದ ಡಾ.ಎಸ್. ಚಿದಂಬರ್ ಮಾತನಾಡಿ, ಡೆಂಗ್ಯೂ ಮತ್ತು ಚಿಕುನ್‌ಗುನ್ಯಾ ಜ್ವರಗಳು ವೈರಸ್‌ನಿಂದ ಉಂಟಾಗುವ ಕಾಯಿಲೆಗಳಾಗಿದ್ದು, ಇವು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತವೆ. ಈ ಸೊಳ್ಳೆಗಳು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕಚ್ಚುತ್ತವೆ ಎಂದು ತಿಳಿಸಿದರು.

ಸೋಂಕಿನ ಲಕ್ಷಣ: ಡೆಂಗ್ಯೂ ಜ್ವರ ಬಂದರೆ ವಿಪರೀತ ತಲೆನೋವು, ಕಣ್ಣು ಗುಡ್ಡೆ ಹಿಂಭಾಗದಲ್ಲಿ ವಿಪರೀತ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು ಕಾಣಿಸಿಕೊಳ್ಳುವುದು. ತೀವ್ರ ಸ್ಥಿತಿಯಲ್ಲಿ ಬಾಯಿ, ಮೂಗು, ವಸಡುಗಳಿಂದ ರಕ್ತಸ್ರಾವ ಹಾಗೂ ಚರ್ಮದ ಮೇಲೆ ಅಲ್ಲಲ್ಲಿ ರಕ್ತಸ್ರಾವದ ಗುರುತುಗಳು ಕಾಣಿಸಿಕೊಳ್ಳುತ್ತವೆ. ಹಾಗಾಗಿ ಇವುಗಳು ಮಾರಣಾಂತಿಕವಾಗಿರುವುದರಿಂದ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳಬೇಕು ಎಂದರು.

ನಗರಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತರು ತಿಂಗಳಿಗೊಮ್ಮೆ ಮನೆ-ಮನೆಗಳನ್ನು ಭೇಟಿ ನೀಡಿ ಮನೆಯ ಸುತ್ತಮುತ್ತಲಿರುವ ನಿಂತ ನೀರುಗಳನ್ನು ಪರಿಶೀಲಿಸಿ ಅದರ ಲ್ಲಿನ ಸೊಳ್ಳೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯ ನಿರಂತರ ವಾಗಿ ಸಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಕೆ.ಎಂ ಗಾಯತ್ರಿ, ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ತಾಲೂಕುಗಳ ವೈದ್ಯಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

242 ಮಂದಿಗೆ ಡೆಂಗ್ಯೂ ಸೋಂಕು

2017ರಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ ಯಾವುದೇ ಮಲೇರಿಯಾ ಪ್ರಕರಣಗಳು ಕಂಡುಬಂದಿಲ್ಲ. ಡೆಂಗ್ಯೂ ಜ್ವರಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ 2000 ಸ್ಯಾಂಪಲ್ ಪ್ರಕರಣಗಳನ್ನು ಸಂಗ್ರಹಿಸಲಾಗಿದ್ದು, ಖಾಸಗಿ ವಿಭಾಗದಲ್ಲಿ 81 ಸ್ಯಾಂಪಲ್‌ಗಳನ್ನು ಸಂಗ್ರಹಿಸಲಾಗಿದೆ. ಜಿಲ್ಲೆಯಲ್ಲಿ ಡೆಂಗ್ಯೂ ಜ್ವರದಿಂದ ಯಾವುದೇ ಸಾವು ಆಗಿಲ್ಲವೆಂದು ಮಾಹಿತಿ ನೀಡಿದರು.

ರಾಷ್ಟ್ರೀಯ ರೋಗವಾಹಕ ಹರಡುವ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಮೈಸೂರಿನ ಗ್ರಾಮೀಣ ಪ್ರದೇಶದಲ್ಲಿ 258 ಡೆಂಗ್ಯೂ ಸ್ಯಾಂಪಲ್‌ಗಳನ್ನು ಪರೀಕ್ಷಿಸಲಾಗಿದ್ದು ಅದರಲ್ಲಿ 23 ಪಾಸಿಟಿವ್ ಕೇಸ್‌ಗಳು ಪತ್ತೆಯಾಗಿವೆ. ಮೈಸೂರು ನಗರದಲ್ಲಿ 781 ಡೆಂಗ್ಯೂ ಸ್ಯಾಂಪಲ್‌ಗಳನ್ನು ಪರೀಕ್ಷಿಸಲಾಗಿದ್ದು, ಅದರಲ್ಲಿ 76 ಕೇಸ್‌ಗಳು ಪಾಸಿಟಿವ್ ಬಂದಿವೆ. ಒಟ್ಟಾರೆಯಾಗಿ ಜಿಲ್ಲೆಯಲ್ಲಿ 2636 ಡೆಂಗ್ಯೂ ಸ್ಯಾಂಪಲ್‌ಗಳಲ್ಲಿ 242 ಕೇಸ್‌ಗಳು ಪಾಸಿಟಿವ್ ಬಂದಿದ್ದು, ಯಾವುದೇ ಸಾವು ಸಂಭವಿಸಿರುವುದಿಲ್ಲ ಎಂದರು.

ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಜು.5- ಸಿದ್ಧಾರ್ಥನಗರದಲ್ಲಿನ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರಕಾರಿ ದೃಶ್ಯ ಕಲಾ ಕಾಲೇಜಿನಲ್ಲಿ (ಕಾವಾ), ಬ್ಯಾಚುಲರ್ ಆಫ್ ವಿಶ್ಯುಲ್ ಆರ್ಟ್ಸ್ (ಬಿ.ವಿ.ಎ) ದೃಶ್ಯ ಕಲೆಯಲ್ಲಿ 2023-24ನೇ ಶೈಕ್ಷಣಿಕ ಸಾಲಿಗೆ ಬಾಕಿ ಇರುವ ಸೀಟುಗಳಿಗೆ ಮಾತ್ರ ಪ್ರಥಮ ಬಿ.ವಿ.ಎ ಪದವಿ ಪ್ರವೇಶಾತಿಗಾಗಿ ಆನ್ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು https://uucms.karnataka.gov.in/ ಅಥವಾ https://cavamysore.karnataka.gov.in/ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜುಲೈ 13ರ ಬೆಳಗ್ಗೆ 10:30ರವರೆಗೆ ಅವಕಾಶವಿದ್ದು, ಪ್ರವೇಶಾತಿ ಅರ್ಹತಾ ಪರೀಕ್ಷೆ ಜುಲೈ 13ರ ಬೆಳಗ್ಗೆ 11 ಗಂಟೆಗೆ ಪ್ರಾರಂಭವಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂ.ಸಂ.0821-2438931 ಸಂಪರ್ಕಿಸಬಹುದು ಎಂದು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ಶೈಕ್ಷಣಿಕ ಸಂಯೋಜಕರು ತಿಳಿಸಿದ್ದಾರೆ.

ಅಂಬೇಡ್ಕರ್ ಭವನಗಳ ಉಪಯುಕ್ತತೆ ಕುರಿತಂತೆ ಸಮಗ್ರ ವರದಿಗೆ ಸೂಚನೆ

ವಿಧಾನಸಭೆಯಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಮಹದೇವಪ್ಪ ಮಾಹಿತಿ



ಬೆಂಗಳೂರು, ಜು.5(ಕೆಎಂಶಿ)- ರಾಜ್ಯದಲ್ಲಿ ನಿರ್ಮಾಣಗೊಂಡಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನಗಳ ಉಪಯುಕ್ತತೆ ಕುರಿತಂತೆ ಸಮಗ್ರ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಸಮಾಜಕಲ್ಯಾಣ ಸಚಿವ. ಡಾ.ಎಚ್.ಸಿ.ಮಹದೇವಪ್ಪ ವಿಧಾನಸಭೆಯಲ್ಲಿ ಇಂದು ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಆಡಳಿತ ಪಕ್ಷದ ಸದಸ್ಯ ಅಪ್ಪಾಜಿ ನಾಡಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈಗಾಗಲೇ 7680 ಅಂಬೇಡ್ಕರ್ ಭವನಗಳನ್ನು ರಾಜ್ಯದ ವಿವಿಧ ಕಡೆಗಳಲ್ಲಿ 1745 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಅವೆಲ್ಲಾ ಸಮರ್ಪಕವಾಗಿ ಬಳಕೆಯಾಗುತ್ತಿವೆಯೇ, ಇಲ್ಲವೇ? ಎಂಬುದರ ಬಗ್ಗೆ ವರದಿ ಕೇಳಲಾಗಿದೆ ಎಂದರು. ವಿವಿಧೋದ್ದೇಶಗಳಿಗೆ ಬಳಕೆ ಮಾಡಿಕೊಂಡಲ್ಲಿ ಭವನಗಳ ನಿರ್ಮಾಣದ ಉದ್ದೇಶ ಸಾರ್ಥಕವಾಗಲಿದ್ದು, ಗ್ರಂಥಾಲಯ, ವಿವಿಧ ತರಬೇತಿ ಸೌಲಭ್ಯ ಸೇರಿದಂತೆ ಸಾಮಾಜಿಕ ಚಟುವಟಿಕೆಗಳಿಗೆ ಬಳಕೆ ಮಾಡಿಕೊಳ್ಳಬೇಕೆಂಬ ನಿಟ್ಟಿನಲ್ಲಿ ಚಿಂತನೆ ನಡೆದಿದೆ. ವರದಿ ಬಂದ ನಂತರ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಗ್ರಾಮ, ಹೋಬಳಿ, ತಾಲೂಕು ಮಟ್ಟದಲ್ಲಿ ಅಂಬೇಡ್ಕರ್ ಭವನಗಳನ್ನು ನಿರ್ಮಿಸಲು ಕ್ರಮವಾಗಿ 20 ಲಕ್ಷ ರೂ, ಹೋಬಳಿಗೆ 75 ಲಕ್ಷ ರೂ., ತಾಲೂಕಿಗೆ 2 ಕೋಟಿ ರೂ., ಜಿಲ್ಲೆಗೆ 4 ಕೋಟಿ ರೂ. ನೀಡಲಾಗುತ್ತಿದೆ. ಈ ಪ್ರಮಾಣದಲ್ಲಿ ಖರ್ಚು ಮಾಡಿ ಭವನಗಳನ್ನು ನಿರ್ಮಿಸಿ ಅವು ಸದ್ಬಳಕೆ ಆಗಲಿಲ್ಲವೆಂದರೆ ಸಾರ್ವಜನಿಕರ ಹಣ ವ್ಯರ್ಥವಾಗಲಿದೆ. ಇದಕ್ಕೆ ಅವಕಾಶ ಕೊಡದೆ ಭವನಗಳನ್ನು ಸಾಮಾಜಿಕ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಅವಕಾಶ ಮಾಡಿಕೊಡುವ ಚಿಂತನೆ ತಮ್ಮದಾಗಿದೆ. ಈ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಲಾಗುತ್ತಿದೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಶಾಸಕ ಅಪ್ಪಾಜಿ ನಾಡಗೌಡ, ತಾಲೂಕಿಗೊಂದು ಅಥವಾ ದೊಡ್ಡ ಪಟ್ಟಣಗಳಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಿದರೆ ವಿವಿಧ ಸಮುದಾಯದವರು ಮದುವೆ ಮತ್ತಿತರ ಸಮಾರಂಭಗಳನ್ನು ನಡೆಸಲು ಬಡವರಿಗೆ ಅನುಕೂಲವಾಗಲಿದೆ ಎಂದು ಹೇಳಿದರು. ಶಾಸಕರಾದ ನಾರಾಯಣ ಸ್ವಾಮಿ ಸೇರಿದಂತೆ ಹಲವು ಶಾಸಕರು ಇದಕ್ಕೆ ಧ್ವನಿಗೂಡಿಸಿ, ಅಪೂರ್ಣಗೊಂಡಿರುವ ಅಂಬೇಡ್ಕರ್ ಭವನಗಳನ್ನು ಪೂರ್ಣಗೊಳಿಸಲು ಅನುದಾನ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಇಂದು ಉತ್ಪಾದಕತೆ, ಹಸಿರು ಬೆಳವಣಿಗೆಯಲ್ಲಿ ಸುಸ್ಥಿರತೆ ಸಮಾವೇಶ

ಮೈಸೂರು, ಜು.5- ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ಉತ್ಪಾದಕತೆ ಮತ್ತು ಹಸಿರು ಬೆಳವಣಿಗೆ ವಿಷಯದ ಕುರಿತು ನಾಳೆ (ಗುರುವಾರ) ಬೆಳಗ್ಗೆ 10 ಗಂಟೆಗೆ ಕರ್ನಾಟಕ ಸುಸ್ಥಿರತೆ ಸಮಾವೇಶವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಆಡಳಿತ ಸಂಸ್ಥೆಯ ಮಹಾನಿರ್ದೇಶಕರಾದ ವಿ. ಮಂಜುಳಾ ವಹಿಸಲಿದ್ದಾರೆ. ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್‌ನ ಮಹಾನಿರ್ದೇಶಕರಾದ ಸಂದೀಪ್ ಕೆನಾಯಕ್, ಐಸಿಆರ್ ಬೋಧನಾ ನಿರ್ದೇಶಕರಾದ ರಾಜೀವ್ ರಂಜನ್ ಮತ್ತು ವಿವಿಧ ವಿಭಾಗದ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಮೈಸೂರು ಆಡಳಿತ ತರಬೇತಿ ಸಂಸ್ಥೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾವಯವ ಸಂಪದ-ಬಾನುಲಿ ಸರಣಿ ಕಾರ್ಯಕ್ರಮ ಉದ್ಘಾಟನೆ

ರೈತ ಸಂಕಷ್ಟಕ್ಕೆ ಸಿಲುಕಿದರೆ, ದೇಶವೂ ಸಂಕಷ್ಟಕ್ಕೆ ಸಿಲುಕುತ್ತದೆ

ಸಾವಯವ ಕೃಷಿಯಲ್ಲಿ ವೈಜ್ಞಾನಿಕ ತಂತ್ರಗಳನ್ನು ಅಳವಡಿಸಿಕೊಳ್ಳಿ: ಡಾ.ಎಸ್.ವಿ.ಸುರೇಶ



ಮೈಸೂರು, ಜು.5-ರೈತ ಸಂಕಷ್ಟಕ್ಕೆ ಸಿಲುಕಿದರೆ, ದೇಶವೂ ಸಂಕಷ್ಟಕ್ಕೆ ಸಿಲುಕುತ್ತದೆ. ಸಮೂಹ ಮಾಧ್ಯಮಗಳು ಹಾಗೂ ಕೃಷಿ ವಿಸ್ತರಣಾ ಚಟುವಟಿಕೆಗಳ ಮೂಲಕ ಸಾವಯವ ಹಾಗೂ ಸಮಗ್ರ ಕೃಷಿ ಪದ್ಧತಿಯ ಬಗ್ಗೆ ಹೆಚ್ಚು ಮಾಹಿತಿ ಪ್ರಚುರಪಡಿಸಿ ಎಂದು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ. ಸುರೇಶ್ ತಿಳಿಸಿದರು.

ನಗರದ ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಸಾವಯವ ಸಂಪದ ಸಮಗ್ರ ಸಾವಯವ ಕೃಷಿ ಬದುಕಿನ ಬೇಸಾಯ ಚಿತ್ರಣ ಕುರಿತ ಬಾನುಲಿ ಸರಣಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 52 ವಾರಗಳ ಸಾವಯವ ಸಂಪದ ಕಾರ್ಯಕ್ರಮ ರೈತರಿಗೆ ಬಹಳ ಉಪಯುಕ್ತವಾದ ರೀತಿಯಲ್ಲಿ ಮೂಡಿಬರಲಿದ್ದು, ಪ್ರತೀ ಬುಧವಾರ ಸಂಜೆ 6.50 ರಿಂದ 7.30 ರವರೆಗೆ ಕೃಷಿರಂಗ ಆಕಾಶವಾಣಿ ಕಾರ್ಯಕ್ರಮದಲ್ಲಿ ಪ್ರಗತಿಪರ ಸಾವಯವ ಕೃಷಿಕರೊಟ್ಟಿಗೆ ಸಂವಾದ, ಸಾವಯವ ಕೃಷಿ ಮಹತ್ವ ಮತ್ತು ಅವಕಾಶಗಳು, ಮಣ್ಣಿನ ಆರೋಗ್ಯ ಮತ್ತು ಪೋಷಕಾಂಶಗಳ ನಿರ್ವಹಣೆ, ಸಾವಯವ ಕೃಷಿಯಿಂದ ಆಗುವ ದೀರ್ಘಾವಧಿ ಲಾಭಗಳು, ವಿಜ್ಞಾನಿಗಳು ಹಾಗೂ ತಜ್ಞರಿಂದ ಮಾಹಿತಿ ಹಾಗೂ ಚರ್ಚೆ, ಸಾವಯವ ಕೃಷಿಯಲ್ಲಿ ಸಿರಿಧಾನ್ಯಗಳ ಮಹತ್ವ ಸೇರಿದಂತೆ ಹೆಚ್ಚಿನ ಮಾಹಿತಿ ಲಭ್ಯವಾಗಲಿದೆ ಎಂದರು.

ಆಕಾಶವಾಣಿ ಮತ್ತು ಸಮೂಹ ಮಾಧ್ಯಮಗಳು ಕಡಿಮೆ ಸಮಯದಲ್ಲಿ ಹೆಚ್ಚು ಜನರ ಮನಮುಟ್ಟುವಂತೆ ಮಾಹಿತಿಯನ್ನು ತಲುಪಿಸುತ್ತವೆ. 1947ರಲ್ಲಿ ಸ್ವತಂತ್ರ ಪಡೆದಾಗ ಮೂರು ಹೊತ್ತಿನ ಊಟಕ್ಕೂ ಪರದಾಡುವ ಪರಿಸ್ಥಿತಿ ದೇಶದಲ್ಲಿತ್ತು. ಅಂದು ಆಹಾರಕ್ಕಾಗಿ ಬೇರೆ ದೇಶಗಳತ್ತ ಮುಖ ಮಾಡಿದ್ದೆವು. ಇಂದು ಮುಂದಿನ ವರ್ಷಕ್ಕೂ ಆಗುವ ಆಹಾರ ಧಾನ್ಯಗಳ ಶೇಖರಣೆ ನಮ್ಮಲ್ಲಿದೆ. ಅಲ್ಲಿಂದ ನಡೆದ ಕೃಷಿ ಕ್ರಾಂತಿ ಹಾಗೂ ಬದಲಾವಣೆಯೇ ಇಂದಿನ ಸ್ಥಿತಿಗೆ ಕಾರಣವಾಗಿವೆ. ಬೆಳೆಗಳ ಉತ್ಪಾದಕತೆ ಮತ್ತು ಉತ್ಪಾದನೆಗಾಗಿ ಕೃಷಿ ವಿಜ್ಞಾನಿಗಳು ಸಂಶೋಧನೆ ಕೈಗೊಂಡು ಹೆಚ್ಚು ಇಳುವರಿ ನೀಡುವ ತಳಿಗಳನ್ನು ರೈತರ ಮುಂದಿಟ್ಟರು. ಬೆಳೆ ಬೆಳೆಯಲು ಅವಶ್ಯಕತೆ ಇರುವ ಪೋಷಕಾಂಶಗಳನ್ನು ಪೂರೈಸಲು ಕೊಟ್ಟಿಗೆ ಗೊಬ್ಬರ ಹಾಕಬೇಕಿತ್ತು ಆದರೆ ಅತಿ ಹೆಚ್ಚು ರಾಸಾಯನಿಕ ಗೊಬ್ಬರಗಳನ್ನು ಬಳಕೆ ಮಾಡುತ್ತಿರುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ. ಇಂದು ನಾವು ಸೇವಿಸುತ್ತಿರುವ ಆಹಾರ ರಾಸಾಯನಿಕಯುಕ್ತವಾಗಿದೆ ಎಂದು ತಿಳಿಸಿದರು. ಇಂದು ಆಹಾರ ಉತ್ಪಾದನೆಯಲ್ಲಿ ನಮ್ಮ ರಾಷ್ಟ್ರ ಸ್ವಾವಲಂಬಿಯಾಗಿದೆ. ಇದರ ಯಶಸ್ಸು ದೇಶದ ಕೃಷಿಕರಿಗೆ ತಲುಪಬೇಕು. ರಾಸಾಯನಿಕ ಗೊಬ್ಬರಗಳ ಬಳಕೆ ಭೂಮಿಯ ಫಲವತ್ತತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಕೃಷಿ ಕೂಲಿ ಕಾರ್ಮಿಕರ ಅಲಭ್ಯತೆಯಿಂದ ಕಳೆನಾಶಕಗಳ ಬಳಕೆ ಹೆಚ್ಚಾಗಿ ಕ್ರಮೇಣ ಇಳುವರಿ ಮೇಲೆ ಪರಿಣಾಮ ಬೀರುತ್ತಿದೆ. ಆದ್ದರಿಂದ ಸಾವಯವ ಕೃಷಿಯ ಅವಶ್ಯಕತೆ ಬಹಳಷ್ಟಿದೆ. ಸಾವಯುವ ಕೃಷಿ ಮಹತ್ವ ಸಾರಲು ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು. ಸಾವಯವ ಕೃಷಿಯಲ್ಲಿ ವೈಜ್ಞಾನಿಕ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ರೈತರ ಆರ್ಥಿಕ ಪರಿಸ್ಥಿತಿಗೆ ಹೊಡೆತ ಬೀಳದಂತೆ ರೈತ ಯೋಜನೆಗಳು ಸಹಾಯಕಾರಿಯಾಗಬೇಕು ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ನಿವೃತ್ತ ವಿಸ್ತರಣಾ ನಿರ್ದೇಶಕರಾದ ಡಾ. ದೇವಕುಮಾರ್ ಮಾತನಾಡಿ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಾವಯವ ಕೃಷಿ ಪದಾರ್ಥಗಳಿಗೆ ಬೇಡಿಕೆಯಿದೆ. ವಿಶ್ವದಲ್ಲಿ 191 ದೇಶಗಳು ಸಾವಯವ ಕೃಷಿ ಮಾಡುತ್ತಿವೆ. ಸಾವಯವ ಕೃಷಿ ಪದಾರ್ಥಗಳನ್ನು ರಫ್ತು ಮಾಡಲು ಹೆಚ್ಚಿನ ಅವಕಾಶಗಳಿವೆ. ಭಾರತ ಮತ್ತು ಆಫ್ರಿಕಾದ ದೇಶಗಳು ಸಾವಯವ ಕೃಷಿ ಪದ್ಧತಿಯಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದು, ವಿಶ್ವದಲ್ಲಿ 37 ಲಕ್ಷ ಜನರು ಸಾವಯವ ಕೃಷಿ ಪದ್ಧತಿಯಲ್ಲಿ ತೊಡಗಿಸಿಕೊಂಡಿದ್ದಾರೆ. 76.4 ಮಿಲಿಯನ್ ಹೆಕ್ಟೇರ್‌ನಲ್ಲಿ ಸಾವಯುವ ಕೃಷಿ ಮಾಡಲಾಗುತ್ತಿದೆ. ಜರ್ಮನ್ ದೇಶವು ಅತಿ ಹೆಚ್ಚು ಸಾವಯವ ಉತ್ಪನ್ನಗಳನ್ನು ಬಳಕೆ ಮಾಡುವ ದೇಶವಾಗಿದೆ ಸಾವಯವ ಕೃಷಿ ಮಾಡುವ ಪಟ್ಟಿಯಲ್ಲಿ ವಿಶ್ವದಲ್ಲಿಯೇ ಭಾರತ 4ನೇ ಸ್ಥಾನದಲ್ಲಿದ್ದು, 2.8 ಮಿಲಿಯನ್ ಹೆಕ್ಟೇರ್ ದೇಶದಲ್ಲಿ ಸಾವಯವ ಕೃಷಿ ಮಾಡಲಾಗುತ್ತಿದೆ. ಭಾರತದಲ್ಲಿ 44.3 ಲಕ್ಷ ರೈತರು ಸಾವಯುವ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ಸಿಕ್ಕಿಂ ರಾಜ್ಯವು ಇಡೀ ದೇಶದಲ್ಲಿಯೇ ಅತೀ ಹೆಚ್ಚು ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿರುವ ರಾಜ್ಯವಾಗಿ ಹೊರಹೊಮ್ಮಿದೆ ಎಂದು ಮಾಹಿತಿ ನೀಡಿದರು.

ತಿಂಗಳಿಗೆ 50 ಸಾವಿರ ಆದಾಯ ಬರುತ್ತಿದೆ

ಸಾವಯವ ಕೃಷಿ ಪದ್ಧತಿಯ ಅನುಸರಣೆಯಲ್ಲೂ ರೈತರು ಉತ್ಪಾದನಾ ಸವಾಲುಗಳು, ಕೊಯ್ಲೋತ್ತರ ಸವಾಲುಗಳು, ಮಾರುಕಟ್ಟೆ ಸವಾಲುಗಳು, ಸಾವಯವ ದೃಢೀಕರಣ ಸವಾಲುಗಳು ಹಾಗೂ ತಾಂತ್ರಿಕ ಸೌಲಭ್ಯದ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಆದರೂ ಪ್ರಾರಂಭದ ಸಮಸ್ಯೆಗಳನ್ನು ಲೆಕ್ಕಿಸದೆ, ಸಾವಯವ ಹಾಗೂ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವಲ್ಲಿ ರೈತರು ಮುಂದಾಗಬೇಕು ಎಂದರು. ಕಾರ್ಯಕ್ರಮದಲ್ಲಿ ರೈತ ಮಹಿಳೆ ಮಿಕ್ಕೆರೆ ಹೇಮಲತಾ ಅವರು ಮಾತನಾಡಿ, ನಾವು ಕಳೆದ ಐದಾರು ವರ್ಷಗಳಿಂದ ಆಕಾಶವಾಣಿ ಕೇಳುತ್ತಿದ್ದೇವೆ. ಎರೆಹುಳು ಗೊಬ್ಬರ ತಯಾರಿಕೆ, ಸಮಗ್ರ ಹಾಗೂ ಸಾವಯವ ಕೃಷಿಗೆ ಮೈಸೂರು ಆಕಾಶವಾಣಿ ನಮಗೆ ಸ್ಫೂರ್ತಿ. ವಿಜ್ಞಾನಿಗಳ ಜೊತೆ ಕೃಷಿ ಬಗ್ಗೆ ಚರ್ಚಿಸಿದ್ದೇವೆ. ಎಲ್ಲರ ಸಹಕಾರದೊಂದಿಗೆ ಇಂದು ಕೋಳಿ ಹಾಗೂ ಹಸು ಸಾಕಾಣಿಕೆ, ಪಂಚಗವ್ಯ, ಜೀವಾಮೃತ ಹಾಗೂ ಘನಜೀವ ತಯಾರಿಸಿ ಮಾರಾಟ ಮಾಡುತ್ತಿದ್ದೇವೆ, ಇದರಿಂದ ತಿಂಗಳಿಗೆ 50,000 ಆದಾಯ ಗಳಿಸುತ್ತಿದ್ದೇನೆ ಎಂದು ಸಂತಸ ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಡಾ. ಬಿ.ಎಸ್. ಚಂದ್ರಶೇಖರ್, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಡಾ. ನಾಗರಾಜು, ಆಕಾಶವಾಣಿ ನಿಲಯದ ಮುಖ್ಯಸ್ಥರು ಹಾಗೂ ಸಹಾಯಕ ನಿರ್ದೇಶಕ ಎಸ್.ಎಸ್.ಉಮೇಶ್, ಕಾರ್ಯಕ್ರಮ ನಿರ್ವಾಹಕ ಎನ್.ಕೇಶವಮೂರ್ತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಅಶೋಕ್ ಕುಮಾರ್ ಡಿ, ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಉಪ ಕೃಷಿ ನಿರ್ದೇಶಕ ಡಾ. ಜಿ.ಹೆಚ್. ಯೋಗೇಶ್, ಹಿರಿಯ ಕ್ಷೇತ್ರ ಅಧೀಕ್ಷಕ ಡಾ. ಸಿ.ರಾಮಚಂದ್ರ ಸೇರಿದಂತೆ ರೈತರು ಉಪಸ್ಥಿತರಿದ್ದರು.

ಹೊಲದಲ್ಲಿ ಬೆಳೆದಿದ್ದ 1.5 ಲಕ್ಷ ಮೌಲ್ಯದ ಟೊಮೆಟೊ ಕಳವು



ಹಳೇಬೀಡು (ಹಾಸನ): ಸಮೀಪದ ಗೋಣಿ ಸೋಮನಹಳ್ಳಿ ಗ್ರಾಮದ ಜಮೀನಿನಲ್ಲಿ ಬೆಳೆದಿದ್ದ 1.5 ಲಕ್ಷ ಮೌಲ್ಯದ ಟೊಮೆಟೊ ಕಳವು ಮಾಡಲಾಗಿದೆ.

ಮಾರುಕಟ್ಟೆಯಲ್ಲಿ ಟೊಮೆಟೊ ದರ ಹೆಚ್ಚಾಗಿದ್ದು, ಇದೀಗ ಹೊಲದಲ್ಲಿ ಕಟಾವಿಗೆ ಬಂದಿದ್ದ ಟೊಮೆಟೊ ಕಳವು ಮಾಡಲಾಗಿದೆ. ಬೆಳೆ ಕಳೆದುಕೊಂಡಿರುವ ಜಮೀನಿನ ಮಾಲೀಕ ಸೋಮಶೇಖರ್ ಅವರ ಪುತ್ರ ಧರಣಿ, ಹಳೇಬೀಡು ಠಾಣೆಯಲ್ಲಿ ದೂರು ನೀಡಿದ್ದಾರೆ.

ಧರಣಿ ಅವರ ತಂದೆ ಸೋಮಶೇಖರ್ ಅವರು ಪಾರ್ಶ್ವವಾಯುವಿನಿಂದ ಬಳಲುತ್ತಿದ್ದರೂ, ಜಮೀನಿನಲ್ಲಿ ಟೊಮೆಟೊ ಕೃಷಿ ಮಾಡಿದ್ದರು. ಮೂರು ದಿನದಿಂದ ಟೊಮೆಟೊ ಕೊಯ್ದು ಮಾರಾಟ ಮಾಡುತ್ತಿದ್ದರು. ಬಾಕಿ ಉಳಿದ ಟೊಮೆಟೋ ಅನ್ನು ಬುಧವಾರ ಕಟಾವು ಮಾಡಲು ನಿರ್ಧರಿಸಿದ್ದರು. ಆದರೆ, ಮಂಗಳವಾರ ರಾತ್ರಿ ಜಮೀನಿಗೆ ನುಗ್ಗಿದ ಕಳ್ಳರು, ತಲಾ 50 ಕೆ.ಜಿ. ತೂಕದ 60 ಬ್ಯಾಗ್‌ನಷ್ಟು ಟೊಮೆಟೊ ಅನ್ನು ಕದ್ದಿದ್ದಾರೆ. ಇದರ ಮೌಲ್ಯ 1.5 ಲಕ್ಷ ಎಂದು ಅಂದಾಜಿಸಲಾಗಿದೆ. ಬುಧವಾರ ಬೆಳಿಗ್ಗೆ ಧರಣಿ ಜಮೀನಿನ ಬಳಿ ಬಂದು ನೋಡಿದಾಗ, ಟೊಮೆಟೊ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ.

ಮೂರು ವರ್ಷಗಳಿಂದ ಯಾವುದೇ ಬೆಳೆಗಳು ಕೈಹಿಡಿದಿರಲಿಲ್ಲ. ಈ ಬಾರಿ ಇದ್ದ 2 ಎಕರೆ ಜಮೀನಿನಲ್ಲಿ ಟೊಮೆಟೊ ಬೆಳೆದಿದ್ದು, ಅರ್ಧದಷ್ಟು ಟೊಮೆಟೊ ಕಳ್ಳರ ಪಾಲಾಗಿದೆ. ಅಲ್ಲದೇ ಟೊಮ್ಯಾಟೊ ಗಿಡಗಳನ್ನು ಮುರಿದು ಹಾಕಿದ್ದು, ಮುಂದೆ ಇಳುವರಿಯೂ ಸಿಗದಂತಾಗಿದೆ' ಎಂದು ಸೋಮಶೇಖರ್ ಅವರ ಪತ್ನಿ ಪಾರ್ವತಮ್ಮ ತೋಡಿಕೊಂಡಿದ್ದು, ಸ್ಥಳಕ್ಕೆ ಹಳೇಬೀಡು ಪೊಲೀಸರು ಭೇಟಿ ನೀಡಿ, ಪರಿಶೀಲಿಸಿದ್ದಾರೆ.

ಟೊಮೆಟೊ ಸೇರಿ ಹಲವು ತರಕಾರಿಗಳ ಬೆಲೆ ದುಬಾರಿ

ತೊಗರಿಬೇಳೆ, ಜೀರಿಗೆ, ಬ್ಯಾಡಗಿ ಮೆಣಸಿನಕಾಯಿ ಬೆಲೆ ಗಗನಕ್ಕೆ

ಮೈಸೂರು,ಜು.5(ಬಿಎಲ್‌ಯು)– ವಾಡಿಕೆಯಷ್ಟು ಮಳೆಯಾಗದ ಕಾರಣ ತರಕಾರಿ ಬೆಲೆಗಳು ಗಗನಕ್ಕೇರಿದೆ. ಅದರಲ್ಲೂ ಟೊಮೆಟೊ ಬೆಲೆ ಕೇಳಿದರೆ ಶಾಕ್ ಆಗುತ್ತದೆ. ದುಬಾರಿ ಬೆಲೆ ಕೊಟ್ಟು ಟೊಮೆಟೊ ಖರೀದಿ ಮಾಡಲು ಗ್ರಾಹಕ ಬೆಚ್ಚುವಂತಾಗಿದೆ. ತರಕಾರಿ ಅಷ್ಟೆ ಅಲ್ಲದೆ ತೊಗರಿಬೇಳೆ, ಜೀರಿಗೆ, ಮೆಣಸಿನಕಾಯಿ ಸೇರಿದಂತೆ ಹಲವು ದಿನಸಿ ಪದಾರ್ಥಗಳ ಬೆಲೆಗಳು ಏರಿಕೆಯಾಗಿದೆ. ಮುಂಗಾರು ಮಳೆಯ ಆರ್ಭಟದೊಂದಿಗೆ ಆಷಾಢ ಮಾಸದಲ್ಲಿ ತರಕಾರಿ ಹೆಚ್ಚು ಇಳುವರಿ ಬರಬೇಕಿತ್ತು ಆದರೆ ಮುಂಗಾರು ಇನ್ನು ಕೂಡ ಚುರುಕುಗೊಂಡಿಲ್ಲ. ಇದರ ಪರಿಣಾಮ ತರಕಾರಿ ಹಾಗೂ ದವಸ ಧಾನ್ಯಗಳ ಬೆಲೆ ದುಬಾರಿಯಾಗುತ್ತಿದೆ.

ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಮೈಸೂರಿನ ನಂಜನಗೂಡು ಭಾಗದಲ್ಲಿ ಹೆಚ್ಚಾಗಿ ಟೊಮೆಟೊ ಬೆಳೆಯಲಾಗುತ್ತದೆ. ಆದರೆ ಈ ಬಾರಿ ಮಳೆ ಕೈ ಕೊಟ್ಟ ಕಾರಣ ಟೊಮೆಟೊ ಬೆಲೆ ಗಗನಕ್ಕೇರಿದೆ. ಒಂದು ಕೆ.ಜಿ.ಗೆ 20 ರಿಂದ 30 ರೂ. ಇದ್ದ ಟೊಮೆಟೊ ಬೆಲೆ ಈಗ 80 ರಿಂದ 100 ರೂ. ಆಗಿದೆ. ಕರ್ನಾಟಕದಿಂದ ತಮಿಳುನಾಡಿಗೆ ಹೆಚ್ಚಾಗಿ ಟೊಮೆಟೊ ರಫ್ತಾಗುತ್ತಿತ್ತು. ಆದರೆ ಕರ್ನಾಟಕದಲ್ಲೇ ಟೊಮೆಟೊಗೆ ಬರ ಬಂದಿದೆ. ಇದರಿಂದ ತಮಿಳುನಾಡಿನಲ್ಲಿ ಟೊಮೆಟೊ ಬೆಲೆ 200 ರೂ.ಇದೆ. ಇದರಿಂದ ಅಲ್ಲಿನ ಸರ್ಕಾರ ಮುಕ್ತ ಮಾರುಕಟ್ಟೆಯಲ್ಲಿ ಟೊಮೆಟೊ ಖರೀದಿಸಿ, ಪಡಿತರ ಅಂಗಡಿಗಳ ಮೂಲಕ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಿದೆ.

ಟೊಮೆಟೊ ಮಾತ್ರವಲ್ಲದೆ ಇನ್ನು ಹಲವು ತರಕಾರಿಗಳ ಬೆಲೆ ದುಬಾರಿಯಾಗಿದೆ. 30ರಿಂದ 40 ರೂ. ಇದ್ದ ಬೀನಿಸ್, ಕ್ಯಾರೆಟ್ ಹಾಗೂ ದಪ್ಪ ಮೆಣಸಿನಕಾಯಿ 80 ರೂ.ಗೆ ಮಾರಾಟವಾಗುತ್ತಿದೆ. 100 ರೂ. ಇದ್ದ ಬೆಳ್ಳುಳ್ಳಿ 150 ರೂ. ಆಗಿದೆ. ಸಮಾಧಾನಕರ ಸಂಗತಿ ಅಂದರೆ ಈರುಳ್ಳಿ, ಬೀಟ್‌ರೂಟ್, ಸೌತೆಕಾಯಿ, ಬದನೆಕಾಯಿ ಬೆಲೆ ಯಥಾಸ್ಥಿತಿ ಇದೆ.

ಈಗ ಆಷಾಢಮಾಸ ಇರುವ ಕಾರಣ ಮದುವೆ, ಗೃಹ ಪ್ರವೇಶ ಸೇರಿದಂತೆ ಕೆಲವು ಶುಭ ಕಾರ್ಯಗಳು ನಡೆಯುವುದಿಲ್ಲ. ಆಷಾಢಮಾಸದ ನಂತರವೂ ತರಕಾರಿ ಇಳುವರಿ ಇಷ್ಟೇ ಕಡಿಮೆ ಇದ್ದರೆ ಬೆಲೆ ಮತ್ತಷ್ಟು ಏರಿಕೆ ಆಗುವುದು ನಿಶ್ಚಿತ. ಆದರೆ ಕೊತ್ತಂಬರಿ, ಸಪ್ಪಸೀಗೆ, ದಂಟು ಸೇರಿದಂತೆ ಎಲ್ಲಾ ರೀತಿಯ ಸೊಪ್ಪುಗಳ ಬೆಲೆ ಅರ್ಧಕ್ಕೆ ಅರ್ಧ ಕಡಿಮೆಯಾಗಿದೆ. ಒಂದು ಕಟ್‌ಗೆ 40 ರೂ. ಇದ್ದ ಸೊಪ್ಪುಗಳ ಬೆಲೆ ಈಗ 20 ರೂ. ಆಗಿದೆ. ಇದು ಸಮಾಧಾನಕರ ಸಂಗತಿಯಾಗಿದೆ. ತರಕಾರಿ ಜೊತೆಗೆ ದಿನಸಿಗಳ ಬೆಲೆ ಕೂಡ ದುಬಾರಿಯಾಗಿದೆ. ತೊಗರಿಬೇಳೆ 130 ರಿಂದ 150 ರೂ., ಜೀರಿಗೆ 600 ರಿಂದ 800 ರೂ., ಬ್ಯಾಡಗಿ ಮೆಣಸಿನಕಾಯಿ 500 ರಿಂದ 650 ರೂ.ಗೆ ಏರಿಕೆಯಾಗಿದೆ. ಸದ್ಯ ಉಳಿದ ದಿನಸಿ ಪದಾರ್ಥಗಳ ಬೆಲೆ ಯಥಾಸ್ಥಿತಿಯಲ್ಲಿದೆ.

ಈಗಾಗಲೇ ಹಲವು ಕಾರಣಗಳಿಂದ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಜನ ಸಾಮಾನ್ಯರಿಗೆ ತರಕಾರಿ ಹಾಗೂ ದಿನಸಿ ಪದಾರ್ಥಗಳ ಏರಿಕೆ ಗ್ರಾಹಕರ ಜೇಬಿಗೆ ಕತ್ತರಿ ಹಾಕಿದಂತಾಗಿದೆ.



ಜು.30ರಂದು ಸಂವಹನ ಟ್ರಸ್ಟ್‌ನಿಂದ ವಿದ್ಯಮಾನ ಸಂವಾದ ಕಾರ್ಯಕ್ರಮ



ಮೈಸೂರು, ಜು.5– 2009ರಲ್ಲಿ ಸ್ಥಾಪನೆಯಾದ ಮೈಸೂರಿನ ಸಂವಹನ ಟ್ರಸ್ಟ್ ಅನೇಕ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ವೈಚಾರಿಕ ಕಾರ್ಯಕ್ರಮಗಳ ಮೂಲಕ ನಿರಂತರ ವಾಗಿ ಸೇವೆ ಸಲ್ಲಿಸುತ್ತಾ ಬಂದಿದೆ. ಪ್ರತಿ ವರ್ಷ ರಾಜ್ಯೋತ್ಸವ ಸಂದರ್ಭದಲ್ಲಿ ಕನ್ನಡದ ಒಬ್ಬ ಹಿರಿಯ ಸಾಹಿತಿಯನ್ನು ಗೌರವಿಸುತ್ತಾ ಬಂದಿದೆ. 'ಮಂಥನ ಮಂಟಪ' ಉಪನ್ಯಾ ಸದ ಮೂಲಕ ಕವಿ–ಕೃತಿಗಳ ಪರಿಚಯ ಮಾಡಿಕೊಟ್ಟಿದೆ. 'ಪುಸ್ತಕ ಓದಿ ಬಹುಮಾನ ಗೆಲ್ಲಿರಿ' ಕಾರ್ಯಕ್ರಮದ ಮೂಲಕ ವಿದ್ಯಾರ್ಥಿ ಗಳನ್ನು ಪುಸ್ತಕ ಓದಿನ ಕಡೆಗೆ ಸೆಳೆದಿದೆ. ಯುವ ಬರಹಗಾರರನ್ನು ಪ್ರೋತ್ಸಾಹಿ ಸಲು 'ಸಂವಹನ ಯುವ ಲೇಖಕ' ಪ್ರಶಸ್ತಿ ನೀಡಿ ಗೌರವಿಸಿದೆ. ಕೊರೊನಾ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದ ಟ್ರಸ್ಟ್, ಜೂ. 27 ರಂದು ಡಿ.ಎನ್. ಲೋಕಪ್ಪ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಟ್ರಸ್ಟ್‌ನ ಕಾರ್ಯ ಚಟುವಟಿಕೆಗಳನ್ನು ಪುನರಾರಂಭಿಸಲು ತೀರ್ಮಾನಿಸಲಾಯಿತು.

'ವಿದ್ಯಮಾನ' ಎಂಬ ಅರ್ಥಪೂರ್ಣ ಹೆಸರಿನಲ್ಲಿ ಅರಿವಿನ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲು ನಿರ್ಧರಿಸಲಾಗಿದೆ. ಕೇಳುಗರ ಸಂವೇದನಾಶೀಲತೆಯನ್ನು ಹೆಚ್ಚಿಸಲು 'ವಿದ್ಯಮಾನ' ನೆರವಾಗಲಿದೆ. ಸಾಹಿತ್ಯ, ಸಂಸ್ಕೃತಿ ಮತ್ತು ವಿಚಾರ ಜಗತ್ತಿನ ನಮ್ಮ ತಿಳಿವಳಿಕೆಯನ್ನು ವಿಸ್ತರಿಸುವ ಮತ್ತು ಆಳಗೊಳಿಸುವ ಕಾರ್ಯವನ್ನು ವಿದ್ಯಮಾನದ ಉಪನ್ಯಾಸಗಳು ನಿಸ್ಸಂದೇಹವಾಗಿಯೂ ಮೂಡಲಿವೆ. ಸೂಕ್ಷ್ಮಮತಿಗಳಾದ ವಿದ್ವಾಂಸರು, ತಜ್ಞ ವಿಮರ್ಶಕರು, ಸಂಸ್ಕೃತಿ ಚಿಂತಕರು ಇದರಲ್ಲಿ ಭಾಗವಹಿಸಲಿದ್ದಾರೆ. ಈ ಎಲ್ಲಾ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು. ಜೊತೆಗೆ ಮಕ್ಕಳಲ್ಲಿ ವೈಚಾರಿಕ ಮತ್ತು ವೈಜ್ಞಾನಿಕ ಅರಿವನ್ನು ಮೂಡಿಸುವುದಕ್ಕಾಗಿ ಶಾಲಾ ಕಾಲೇಜು ಗಳಲ್ಲಿ ವಿದ್ಯಾರ್ಥಿ ಉಪನ್ಯಾಸ ಕಾರ್ಯಕ್ರಮ ಗಳನ್ನು ಏರ್ಪಡಿಸಲಾಗುವುದು. ಚರ್ಚೆ ಯಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸುವರು. ಉಪನ್ಯಾಸದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ವಿಶೇಷ ಬಹುಮಾನಗಳನ್ನು ನೀಡಲಾಗುವುದು. ಇದು ವಿದ್ಯಾರ್ಥಿಗಳಲ್ಲಿ ಅರಿವಿನ ಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮವಾಗಿದೆ. ಕಾರ್ಯಕ್ರಮದ ಮೊದಲ ಭಾಗವಾಗಿ ಜುಲೈ 30 ರಂದು ಬೆಳಗ್ಗೆ 11 ಗಂಟೆಗೆ 'ಬದಲಾಗುತ್ತಿರುವ ಸಾಹಿತ್ಯದ ವಿದ್ಯಮಾನಗಳು' ವಿಚಾರದ ಬಗ್ಗೆ ಹೆಸರಾಂತ ಚಿಂತಕರಾದ ಪುರುಷೋತ್ತಮ ಬಿಳಿಮಲೆ ಅವರಿಂದ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿದೆ.

ಕೆಲವು ಹೊಸ ಸದಸ್ಯರ ಸೇರ್ಪಡೆಯೊಂದಿಗೆ ಟ್ರಸ್ಟ್‌ನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಗೌರವ ಅಧ್ಯಕ್ಷರಾಗಿ ಡಾ.ರಾಗೌ, ಅಧ್ಯಕ್ಷರಾಗಿ ಡಿ.ಎನ್. ಲೋಕಪ್ಪ ಉಪಾಧ್ಯಕ್ಷರಾಗಿ ಪ್ರೊ ಮೊರಬದ ಮಲ್ಲಿಕಾರ್ಜುನ, ಕಾರ್ಯದರ್ಶಿಯಾಗಿ ಜೀನಹಳ್ಳಿ ಎಂ.ಸಿದ್ದಲಿಂಗಪ್ಪ ಖಜಾಂಚಿಯಾಗಿ ಪ್ರೊ.ಎಂ.ನಟರಾಜ್ ಹಾಗೂ ಟ್ರಸ್ಟಿಗಳಾಗಿ ಡಾ.ಎಚ್.ಎಸ್.ರುದ್ರೇಶ್, ಪ್ರೊ ಚಂದ್ರಶೇಖರಯ್ಯ, ಪ್ರೊ.ಪ್ರಭುಸ್ವಾಮಿ, ಡಾ. ಹೆಚ್.ಟಿ. ಶೈಲಜಾ, ಡಾ.ಎಂ.ಎಲ್. ರಾಜೇಂದ್ರ ಪ್ರಸಾದ್, ಹೆಚ್.ಎಂ. ನಾಗಭೂಷಣ, ಡಾ. ಮಹೇಂದ್ರಮೂರ್ತಿ ಮತ್ತು ಓಂಕಾರಪ್ಪ.

ಸಿಎಫ್‌ಟಿಆರ್‌ಐನಲ್ಲಿ ಈಟ್ ರೈಟ್ ವಾಕಥಾನ್

'ಒಂದು ವಾರ ಒಂದು ಪ್ರಯೋಗಾಲಯ' ಆಹಾರ ಸಂಶೋಧನೆಯ ಸಂಭ್ರಮೋತ್ಸವ



ಮೈಸೂರು, ಜು.5(ಎಂಕೆ)– ಮೈಸೂರಿನಲ್ಲಿರುವ ಸಿಎಫ್‌ಟಿಆರ್‌ಐನಲ್ಲಿ ಹಮ್ಮಿಕೊಂಡಿರುವ 'ಒಂದು ವಾರ ಒಂದು ಪ್ರಯೋಗಾಲಯ' ಆಹಾರ ಸಂಶೋಧನೆಯ ಸಂಭ್ರಮೋತ್ಸವದ ಅಂಗವಾಗಿ ಬುಧವಾರ ಈಟ್ ರೈಟ್ ವಾಕಥಾನ್–2023(eat right walkathon) ನಡೆಯಿತು.

ಸಿಎಫ್‌ಟಿಆರ್‌ಐ ಪ್ರಧಾನ ಕಚೇರಿಯಿಂದ ಆರಂಭವಾದ ವಾಕಥಾನ್ ಮುಖ್ಯದ್ವಾರದಿಂದ ಸಿಎಫ್‌ಟಿಆರ್ ಶಾಲೆವರೆಗೆ ಸಾಗಿತು. ವಾಕಥಾನ್‌ನಲ್ಲಿ ಭಾಗವಹಿಸಿದ್ದ ಸಿಎಫ್‌ಟಿಆರ್‌ಐ ಅಧಿಕಾರಿ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸರಿಯಾದ ಆಹಾರ ಆರೋಗ್ಯ ವೃದ್ಧಿಸುವುದರ ಜೊತೆಗೆ ದೇಶದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ ಎಂಬ ಅರಿವು ಮೂಡಿಸಿದರು. ವಾಕಥಾನ್‌ಗೆ ಚಾಲನೆ ನೀಡಿದ ಮೈಸೂರು ಆಕಾಶವಾಣಿ ನಿರ್ದೇಶಕ ಎಸ್.ಎಸ್.ಉಮೇಶ್ ಮಾತನಾಡಿ, ಸಿಎಫ್‌ಟಿಆರ್‌ಐ ಹಾಗೂ ಮೈಸೂರು ಆಕಾಶವಾಣಿ ದೇಶಕ್ಕೆ ಅಪಾರ ಕೊಡುಗೆ ನೀಡುತ್ತಿರುವ ಸಂಸ್ಥೆಗಳಾಗಿವೆ. ಗಡಿ ಕಾಯುವ ಸೈನಿಕರಿಗೆ ಗುಣಮಟ್ಟದ ಆಹಾರ ಪೂರೈಸುವಲ್ಲಿ ಹಾಗೂ ಕೃಷಿಯಲ್ಲಿ ಹೊಸ ಹೊಸ ತಂತ್ರಜ್ಞಾನ ಅಳಡಿಸುವ ಕಾರ್ಯದಲ್ಲಿ ಸಿಎಫ್‌ಟಿಆರ್‌ಐ ಕೊಡುಗೆ ಮಹತ್ತರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉತ್ತಮ ಆರೋಗ್ಯಕ್ಕಾಗಿ ಸರಿಯಾದ ಹಾಗೂ ಪೌಷ್ಠಿಕಾಂಶವುಳ್ಳ ಆಹಾರ ಸೇವನೆ ಜೊತೆಗೆ ಪ್ರತಿನಿತ್ಯ ವಾಕಿಂಗ್ ಮಾಡುವ ಅಭ್ಯಾಸ ಬೆಳೆಸಿಕೊಳ್ಳುವುದು ಒಳ್ಳೆಯದು. ಅದೇ ರೀತಿ ಯಾವ ಸಂದರ್ಭದಲ್ಲಿ ಯಾವ ವೇಗದಲ್ಲಿ ವಾಕಿಂಗ್ ಮಾಡಬೇಕು ಎಂಬುದು ಮುಖ್ಯವಾಗಿದ್ದು, ಇದನ್ನು ಕಲಿಯುವುದು ಅವಶ್ಯವಾಗಿದೆ. ಊಟಕ್ಕೂ ಮುನ್ನ ಹಾಗೂ ಊಟದ ನಂತರ ಮಾಡುವ ವಾಕಿಂಗ್ ಹೇಗಿರಬೇಕು ಎಂಬುದು ಮುಖ್ಯವಾಗಿದೆ ಎಂದು ತಿಳಿಸಿದರಲ್ಲದೆ ಸಿಎಫ್‌ಟಿಆರ್‌ಐ ಕ್ಯಾಂಪಸ್ ಹಸಿರಿನಿಂದ ಆವೃತ್ತವಾಗಿದ್ದು, ಬೆಳಗ್ಗೆ ಹಾಗೂ ಸಂಜೆ ವಾಕಿಂಗ್ ಮಾಡಲು ತುಂಬಾ ಅನುಕೂಲಕರ ವಾತಾವರಣ ಹೊಂದಿದೆ ಎಂದರು. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಮಾತನಾಡಿ, ವಾಕಿಂಗ್ ಒಂದು ದಿನಕ್ಕೆ ಸಿಮೀತವಾಗಬಾರದು. ವಿಶಾಲ ಸಿಎಫ್‌ಟಿಆರ್‌ಐ ಕ್ಯಾಂಪಸ್‌ನಲ್ಲಿ ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ಹೋಗಲು ವಾಹನಗಳನ್ನು ಬಳಸುವುದರ ಬದಲು ವಾಕಿಂಗ್ ಮಾಡಿದರೆ, ವಾಕಿಂಗ್ ಅಭ್ಯಾಸ ಬೆಳೆಯುವುದರ ಜೊತೆಗೆ ಆರೋಗ್ಯವೂ ಉತ್ತಮವಾಗುತ್ತದೆ. ವಾಕಿಂಗ್ ಮಾಡಿ, ಆರೋಗ್ಯ ಕಾಪಾಡಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿಗಳಾದ ಡಾ.ಲಲಿತಾ ಆರ್.ಗೌಡ, ಡಾ.ಅಲೋಕ್ ಕೆ.ಶ್ರೀವತ್ಸ ಎಫ್‌ಎಸ್‌ಎಸ್‌ಎಐನ ಅಧಿಕಾರಿ ಕುಮಾರಸೇನ್, ಇಂಡಿಯನ್ ಡೈರಿ ಅಸೋಸಿಯೇಷನ್ ಮುಖ್ಯಸ್ಥ ಡಾ.ಆರ್.ಎಸ್. ಸೋಧಿ ಮತ್ತಿತರರು ಉಪಸ್ಥಿತರಿದ್ದರು.

ಇಂದು ಸಿರಿಧಾನ್ಯ ದಿನಾಚರಣೆ ಹಾಗೂ ಓಪನ್ ಡೇ ಮತ್ತು ವಸ್ತು ಪ್ರದರ್ಶನ...

'ಒಂದು ವಾರ ಒಂದು ಪ್ರಯೋಗಾಲಯ' ಆಹಾರ ಸಂಶೋಧನೆಯ ಸಂಭ್ರಮೋತ್ಸವದ ಅಂಗವಾಗಿ ನಾಳೆ (ಜು.6) ಸಿರಿಧಾನ್ಯ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಓಪನ್ ಡೇ ಮತ್ತು ವಸ್ತು ಪ್ರದರ್ಶನವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಶೋಧನಾ ಮಂಡಳಿ ಅಧ್ಯಕ್ಷೆ ಪ್ರೊ.ರೇಖಾ ಎಸ್. ಸಿಂಘಾಲ್, ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ. ಕೆಎಸ್‌ಎಂಎಸ್ ರಾಘವ್ ರಾವ್ ಭಾಗವಹಿಸಲಿದ್ದಾರೆ.

ವಿಜೇತರಿಗೆ ಬಹುಮಾನ ವಿತರಣೆ...

ವಿದ್ಯಾರ್ಥಿಗಳೊಂದಿಗೆ ವಿಜ್ಞಾನಿಗಳು ನಡೆಸಿದ್ದ ಸಂವಾದ(ಜಿಜ್ಞಾಸ) ಹಾಗೂ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ವಿಜೇತ ವಿದ್ಯಾರ್ಥಿಗಳ ತಂಡಕ್ಕೆ ಬಹುಮಾನ ವಿತರಣೆ ಮಾಡಲಾಯಿತು. ಸಿಎಫ್‌ಟಿಆರ್‌ಐ ಶಾಲೆಯ ವಿದ್ಯಾರ್ಥಿಗಳಾದ ಅದಿತಿ ಥಾಕೂರ್, ಟಿಜೆಮನೀಶ್ ಹಾಗೂ ಎಸ್.ಸೌಗಂಧಿಕಾ ಪ್ರಥಮ ಬಹುಮಾನ, ಚಾಮರಾಜನಗರ ಕೇಂದ್ರೀಯ ವಿದ್ಯಾಲಯದ ಎಸ್.ಚೈತ್ರ ಎಸ್.ಹರಿಣಾಕ್ಷಿ ಹಾಗೂ ಎಂ.ಸ್ಫೂರ್ತಿ ದ್ವಿತೀಯ, ಮೈಸೂರು ಕೇಂದ್ರೀಯ ವಿದ್ಯಾಲಯದ ಪ್ರದ್ಯುಮ್ನ ಎಂ.ಹರಿತ್, ಅನಿತಾ ನಾಗೇಂದ್ರ ಹಾಗೂ ಎಸ್.ಹೆಚ್.ಧಿತಿ ತೃತೀಯ ಬಹುಮಾನ ಪಡೆದರೆ, ಆರ್‌ಬಿಐ ಕ್ಯಾಂಪಸ್‌ನಲ್ಲಿರುವ ಕೇಂದ್ರೀಯ ವಿದ್ಯಾಲಯದ ಕೆ.ಅಭಿಷೇಕ್, ಬಿ.ಅನುಪ್ರಿಯಾ ಹಾಗೂ ಅರ್ಜುನ್ ಕೆ.ಸಿರಾಜ್ ಸಮಾಧಾನಕರ ಬಹುಮಾನ ಗೆದ್ದುಕೊಂಡರು.

ಪ್ರಶಾಂತ್ ಹಿರೇಮಠ್‌ಗೆ ಜಂಗಮಶೆಟ್ಟಿ ರಂಗ ಪ್ರಶಸ್ತಿ



ಮೈಸೂರು, ಜು. 5–ನಗರದ ಹಿರಿಯ ರಂಗಕರ್ಮಿ ಪ್ರಶಾಂತ್ ಹಿರೇಮಠ್ ಅವರು ಕಲಬುರಗಿಯ ರಂಗ ಸಂಗಮ ವೇದಿಕೆಯ ರಾಜ್ಯ ಮಟ್ಟದ ಎಸ್.ಬಿ.ಜಂಗಮಶೆಟ್ಟಿ ರಂಗ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ರಂಗ ಸಂಗಮ ವೇದಿಕೆಯ ರಾಜ್ಯ ಮಟ್ಟದ ಪ್ರಶಸ್ತಿ ಇದಾಗಿದ್ದು, 10 ಸಾವಿರ ರೂಪಾಯಿ ನಗದು, ಫಲಕವನ್ನು ಪ್ರಶಸ್ತಿ ಒಳಗೊಂಡಿದೆ. ಜುಲೈ 18ರಂದು ಕಲಬುರಗಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಪ್ರಶಸ್ತಿಯ ದಶಮಾನೋತ್ಸವವೂ ಇದಾಗಿದೆ.

ಪ್ರಶಾಂತ್ ಹಿರೇಮಠ ಅವರು ಮೈಸೂರು ರಂಗಾಯಣದ ಕಲಾವಿದರಾಗಿ ನಿವೃತ್ತರಾಗಿದ್ದು, ಈಗಲೂ ನಾಟಕಗಳಲ್ಲಿ ಅಭಿನಯಿಸುವುದರ ಜೊತೆಗೆ ನಾಟಕಗಳನ್ನು ನಿರ್ದೇಶಿಸುತ್ತಿದ್ದಾರೆ ಎಂದು ರಂಗ ಸಂಗಮ ವೇದಿಕೆಯ ಪ್ರಧಾನ ಕಾರ್ಯದರ್ಶಿ ಡಾ.ಸುಜಾತಾ ಜಂಗಮಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.5–ಲಿಂಗಾಯತ ಗೌಡ ಮಹಾಸಭಾ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಲಿಂಗಾಯಿತ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಜು. 11ರ ಮಂಗಳವಾರ ಸಂಜೆ 4 ಗಂಟೆಯೊಳಗೆ ಮೈಸೂರಿನ ಹೊಸಮಠದ ಶ್ರೀ ನಟರಾಜ ಸಭಾ ಭವನದಲ್ಲಿ ಕೂಡಲ ಸಂಗಮ ಶ್ರೀ ಪೀಠದ ಪೀಠಾಧ್ಯಕ್ಷ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿಗಳಿಗೆ ಗುರುವಂದನಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9686205346 ಸಂಪರ್ಕಿಸಬಹುದು.

ಡಿ.ಬನುಮಯ್ಯನವರ 163ನೇ ಜನ್ಮದಿನಾಚರಣೆ



ಮೈಸೂರು, ಜು.5(ಎಂಕೆ)– ಮೈಸೂರಿನ ಕುಂಚಿಟಿಗರ ಸಭಾ ವತಿಯಿಂದ ಧರ್ಮಪ್ರಕಾಶ್ ರಾವ್ ಬಹದ್ದೂರ್ ಡಿ.ಬನುಮಯ್ಯ ಅವರ 163ನೇ ಜನ್ಮದಿನ ಆಚರಿಸಲಾಯಿತು.

ಬನುಮಯ್ಯ ವಿದ್ಯಾಸಂಸ್ಥೆ ಆವರಣದಲ್ಲಿರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ಬಳಿಕ ನಗರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಮಾತನಾಡಿ, ಬನುಮಯ್ಯ ಅವರು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ ಬಹಳಷ್ಟು ಶ್ರಮಿಸಿದ್ದಾರೆ. ಸ್ವಂತ ಜಮೀನನ್ನು ಮಾರಿ ಮೈಸೂರಿನಲ್ಲಿ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಬಡ ಹಾಗೂ ಮಧ್ಯಮವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದ್ದಾರೆ. ಅದರಂತೆ ನಾನು ಸಹ ಇದೇ ಸಂಸ್ಥೆಯ ವಿದ್ಯಾರ್ಥಿಯಾಗಿದ್ದೆ ಎಂದು ಸ್ಮರಿಸಿದರು. ಬನುಮಯ್ಯ ವಿದ್ಯಾಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದ್ದು, ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಡಿ.ಬನುಮಯ್ಯ ಅವರು ತಾವು ಸಂಪಾದಿಸಿದ ಹಣವನ್ನು ಸ್ವಂತಕ್ಕೆ ಇಟ್ಟುಕೊಳ್ಳದೆ ಸಮಾಜಕ್ಕೆ ದಾನ ಮಾಡುವ ಮನೋಭಾವದೊಂದಿಗೆ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದವರು. ಇಂಥ ಮಹನೀಯರನ್ನು ಸ್ಮರಿಸುವುದು ಎಲ್ಲರ ಕರ್ತವ್ಯ ಎಂದರು. ಇದೇ ವೇಳೆ ಬನುಮಯ್ಯ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಲಾಯಿತು. ಕುಂಚಿಟಿಗರ ಸಭಾದ ಅಧ್ಯಕ್ಷ ಎಂ.ಪಿ.ನಾಗರಾಜ್, ಡಿ ಬನುಮಯ್ಯನವರ ಕುಟುಂಬಸ್ಥರು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗದಲ್ಲಿ ಉಚಿತ ಸಂಸ್ಕೃತ ಸಂಭಾಷಣಾ ಶಿಬಿರ



ಮೈಸೂರು, ಜು.5– ಮೈಸೂರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದಲ್ಲಿ ಜುಲೈ 3 ರಿಂದ 14 ರವರೆಗೆ ಹತ್ತು ದಿನಗಳ ಉಚಿತ ಸಂಸ್ಕೃತ ಸಂಭಾಷಣಾ ಶಿಬಿರವನ್ನು ಆಯೋಜಿಸಲಾಗಿದೆ.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ವಿಭಾಗದ ಅಧ್ಯಕ್ಷರಾದ ಪ್ರೊ.ವಿಜಯಕುಮಾರಿ ಕರಿಕಲ್ ಅವರು, ಸಂಸ್ಕೃತಭಾಷೆಯ ಮಹಿಮೆಯನ್ನು ಮತ್ತು ಇತಿಹಾಸವನ್ನು ಸವಿಸ್ತಾರವಾಗಿ ಪ್ರಸ್ತಾಪಿಸಿದರು. ಸಂಸ್ಕೃತ ವಿಭಾಗದ ಬೆಳವಣಿಗೆಗೆ ಅಗತ್ಯವಿರುವ ಎಲ್ಲ ಸಹಕಾರವನ್ನು ನೀಡಿ, ವಿಭಾಗವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆಂದು ನುಡಿದರು. ಮುಖ್ಯ ಅಭ್ಯಾಗತರಾಗಿ ಆಗಮಿಸಿದ್ದ ಅಮೇರಿಕಾ ದೇಶದಲ್ಲಿ ತಂತ್ರಜ್ಞರಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕೃತ ಭಾರತಿಯ ಕಾರ್ಯಕರ್ತ ಎಸ್.ಸುಬ್ರಹ್ಮಣ್ಯ ಅವರು, ಕೃತಕಬುದ್ಧಿಮತ್ತೆ, ಯಂತ್ರಾಧ್ಯಯನ, ಅನುವಾದ ಮುಂತಾದ ಕ್ಷೇತ್ರಗಳಲ್ಲಿ ಸಂಸ್ಕೃತ ತಜ್ಞರಿಗಿರುವ ವಿಪುಲ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ.ಆರ್.ಸುರೇಶ, ಡಾ.ಸುರೇಶ್ ಹೆಗಡೆ, ಡಾ.ಎಸ್.ಎಂ. ಪುಷ್ಪಲತಾ ಹಾಗೂ ಸಂಸ್ಕೃತ ಭಾರತಿಯ ಮೈಸೂರು ವಿಭಾಗದ ಸಂಯೋಜಕರಾದ ಗಣೇಶದತ್ತ, ಶಿಬಿರದ ಸಂಚಾಲಕರಾದ ಶ್ರೀಮತಿ ಪರ್ವತ ವರ್ಧಿನೀ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಹಿಂದುಸ್ತಾನ್ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ರಾಷ್ಟ್ರಮಟ್ಟದ ಅಂತರ ಕಾಲೇಜು ಮೂಕಾಭಿನಯ ಸ್ಪರ್ಧೆಯಲ್ಲಿ ಜಿಎಸ್‌ಎಸ್‌ಎಸ್ ಸಿಂಹ ಸುಬ್ಬ ಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಪಡೆದಿದ್ದಾರೆ. ಖ್ಯಾತ ಚಲನಚಿತ್ರ ನಟರಾದ ಅಭಿಷೇಕ್ ಅಂಬರೀಶ್, ಆದಿ ಲೋಕೇಶ್ ಪ್ರಶಸ್ತಿ ವಿತರಣೆ ಮಾಡಿದರು. ಕಾಲೇಜಿನ ವಿದ್ಯಾರ್ಥಿಗಳಾದ ಸಾಗರ್, ಟಿ.ಡಿ.ಕೃತಿಕಾ, ಶಿವಾನಿ, ಹರ್ಷವರ್ಧನ್, ಹರ್ಷಿತಾ, ಕ್ರಿಸ್ಮ, ಹರ್ಷ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಟಿ.ಎಸ್.ರಾಕೇಶ್ ಮತ್ತು ಗ್ರಂಥಪಾಲಕರಾದ ಎನ್.ಅಂಕರಾಜು ವಿದ್ಯಾರ್ಥಿಗಳಿಗೆ ಪಶಸ್ತಿ ಪತ್ರಗಳನ್ನು ನೀಡಿ, ಅಭಿನಂದಿಸಿದರು.

ಗ್ರಾಹಕರ ಜಾಗೃತಿಯಿಂದ ಶೋಷಣೆ ಮುಕ್ತ ಸಮಾಜ ನಿರ್ಮಾಣ

ಗ್ರಾಹಕ ಪಂಚಾಯತ್ ಪ್ರಾಂತೀಯ ಕಾರ್ಯದರ್ಶಿ ಗಾಯತ್ರಿ ನಾಡಿಗ್



ಮೈಸೂರು, ಜು.5–ಗ್ರಾಹಕ ಜಾಗೃತಿಯಿಂದ ಶೋಷಣೆ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಕರ್ನಾಟಕ ಪ್ರಾಂತದ ಕಾರ್ಯದರ್ಶಿ ಗಾಯತ್ರಿ ನಾಡಿಗ್ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ನಡೆದ ಗ್ರಾಹಕರ ಸಂಘಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹುಟ್ಟಿದ ಮಗುವಿನಿಂದ ಸಾಯುವ ವ್ಯಕ್ತಿಯವರಿಗೆ ಜಗತ್ತಿನಲ್ಲಿ ಎಲ್ಲರೂ ಗ್ರಾಹಕರೇ. ಸಮಾಜದಲ್ಲಿ ಒಬ್ಬರನ್ನೊಬ್ಬರು ಅವಲಂಬಿಸಿರುವುದರಿಂದ ದಿನನಿತ್ಯದ ಜೀವನಕ್ಕೆ ಅವಶ್ಯವಾದ ವಸ್ತುಗಳನ್ನು ಖರೀದಿಸುವಾಗ ನಡೆಯುವ ಮೋಸ, ವಂಚನೆಗೆ ಒಳಗಾಗುವುದನ್ನು ತಡೆಯಲು ಜಾಗೃತರಾಗಬೇಕು. ಪ್ರತಿಯೊಬ್ಬ ಗ್ರಾಹಕರು ಗ್ರಾಹಕರ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು. ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಸಂಘಟನೆ ಬಗ್ಗೆ ಚರ್ಚಿಸಲಾಯಿತು, ಗ್ರಾಹಕ ಪಂಚಾಯತ್ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷರಾದ ಡಾ.ಜಿ.ವಿ.ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಕಾರ್ಯದರ್ಶಿ ರಾಘವೇಂದ್ರ ಸರ್ಕಾರಿ ನಿವೃತ್ತ ನೌಕರರಾದ ಚಂದ್ರಶೇಖರ್, ಎಂ.ಪಿ.ಸುಬ್ಬರಾವ್, ಜಯಕುಮಾರ್, ರಮೇಶ್ ನಾಯ್ಡು, ಮಹಿಳಾ ಪ್ರಮುಖ ನಾಗಮಣಿ ಆನಂದ್, ಶಿವಕುಮಾರ್, ವಿನೋದ್ ಕುಮಾರ್ ಇನ್ನಿತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು. 5–ಶ್ರೀ ಮಲೈ ಮಹದೇಶ್ವರ ಶಿಕ್ಷಣ ನೌಕರರ ಸಂಘದ ವತಿಯಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿನ 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 90 ಮತ್ತು ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನದಲ್ಲಿ ಶೇ. 85, ಕಲಾ, ವಾಣಿಜ್ಯ ವಿಭಾಗಗಳಲ್ಲಿ ಶೇ.90 ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಜು.31 ರೊಳಗೆ ಅಂಚೆ ಮೂಲಕ 526, 4ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಸರ್ದಾರ್ ವಲ್ಲಭಬಾಯ್ ಪಟೇಲ್‌ನಗರ, ಪೊಲೀಸ್ ಲೇಔಟ್, 2ನೇ ಹಂತ, ಮೈಸೂರು ಇಲ್ಲಿಗೆ ಅರ್ಜಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗೆ ಮೊ. 9008087287, 9980154573 ಅನ್ನು ಸಂಪರ್ಕಿಸಲು ಕೋರಲಾಗಿದೆ.

ಪುರಸಭೆಯಲ್ಲಿ ಕೋಟ್ಯಂತರ ರೂ. ಹಗರಣ ಆರೋಪ

ಹೆಚ್.ಡಿ.ಕೋಟೆ ಪುರಸಭೆಯಲ್ಲಿ ಅಕ್ರಮ ಖಾತೆ, ಸಾರ್ವಜನಿಕರ ಕೆಲಸದಲ್ಲಿ ಲೋಪ-ದೋಷ ಪತ್ತೆ

ಡಿಸಿ ಸೂಚನೆ ಮೇರೆಗೆ ನಗರೋತ್ಥಾನ ಅಭಿವೃದ್ಧಿ ಅಧಿಕಾರಿಗಳು ಭೇಟಿ, ಕಡತ ಪರಿಶೀಲನೆ



ಹೆಚ್.ಡಿ.ಕೋಟೆ, ಜು.5– ಪಟ್ಟಣದ ಪುರಸಭೆಯಲ್ಲಿ ಅಕ್ರಮ ಖಾತೆಗಳು ನಡೆದಿದೆ. ಅನುದಾನ ಬಳಕೆ ಹಾಗೂ ಸಾರ್ವಜನಿಕರಿಗೆ ನೀಡುತ್ತಿರುವ ಸೇವೆಯಲ್ಲಿ ಲೋಪದೋಷಗಳಾಗಿದ್ದು ಇದನ್ನು ಸರಿಪಡಿಸಲು ಪುರಸಭೆಗೆ ಮತ್ತಷ್ಟು ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಅಗತ್ಯವಿದೆ ಎಂದು ನಗರೋತ್ಥಾನ ಅಭಿವೃದ್ಧಿ ಅಧಿಕಾರಿ ಶುಭ ತಿಳಿದ್ದಾರೆ.

ಹೆಚ್.ಡಿ. ಕೋಟೆ ಪುರಸಭೆಯ ಇಂಜಿನಿಯರಿಂಗ್, ಕಂದಾಯ, ಸ್ವಚ್ಛತೆ ಸೇರಿದಂತೆ ಹಲವಾರು ವಿಭಾಗಗಳಲ್ಲಿ 10 ಕೋಟಿ ರೂ.ಗೂ ಹೆಚ್ಚು ಹಗರಣಗಳು ನಡೆದಿವೆ ಎಂದು ಆಪಾದಿಸಿ ಹೆಚ್.ಡಿ. ಕೋಟೆ ಪುರಸಭೆ ಸ್ಥಾಯಿ ಸಮಿತಿ ಸಿದ್ಧಪಡಿಸಿದ 378 ಪುಟಗಳ ವರದಿಯೊಂದಿಗೆ ಸಮಿತಿಯ ಅಧ್ಯಕ್ಷ ಐಡಿಯಾ ವೆಂಕಟೇಶ್ ಅವರು ಜಿಲ್ಲಾಧಿಕಾರಿಗೆ ದೂರು ನೀಡಿದ್ದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ನಗರೋತ್ಥಾನ ಅಭಿವೃದ್ಧಿ ಅಧಿಕಾರಿಗಳ ತಂಡ ಪುರಸಭೆಗೆ ಭೇಟಿ ನೀಡಿ ಕಡತ ಪರಿಶೀಲನೆ ನಡೆಸಿದ ನಂತರ ಈ ವಿಷಯ ತಿಳಿಸಿದರು.

> ಪುರಸಭಾ ಅಧಿಕಾರಿಗಳಿಗೆ ಪ್ರತಿ ತಿಂಗಳು ಸಂಬಳ ನೀಡುತ್ತಿರುವುದು ಜನತೆಯ ಹಣ ಕಾಪಾಡಿ, ಅವರುಗಳ ಕೆಲಸ ಮಾಡಿಕೊಡಲು. ಬೇಜವಾಬ್ದಾರಿತನ ತೋರಿದರೆ, ಅಂತಹ ಅಧಿಕಾರಿಗಳನ್ನು ನಾಲಾಯಕ್ ಅಧಿಕಾರಿಗಳು ಎಂದು ಪರಿಗಣಿಸಬೇಕಾಗುತ್ತದೆ.
>
> – **ಶುಭ**, ನಗರೋತ್ಥಾನ ಅಭಿವೃದ್ಧಿ ಅಧಿಕಾರಿ.

ಇಂದು ಪುರಸಭೆಯಲ್ಲಿ 50 ರಷ್ಟು ಕಡತಗಳನ್ನು ಪರಿಶೀಲನೆ ನಡೆಸಲಾಗಿದ್ದು, ಪುರಸಭೆಯ ಅಧಿಕಾರಿಗಳು ಸಾಕಷ್ಟು ಲೋಪಗಳು ಎಸಗಿರುವುದು ಮತ್ತು ಅಕ್ರಮ ಖಾತೆ ನಡೆಸಿರುವುದು ಕಂಡು ಬಂದಿದೆ ಎಂದ ಅವರು, ಇವೆಲ್ಲವನ್ನು ಸರಿಪಡಿಸಲು ಇನ್ನಷ್ಟು ಕಡತಗಳು ಪರಿಶೀಲನೆ ನಡೆಸುವ ಅಗತ್ಯವಿದೆ ಎಂದರಲ್ಲದೆ, ನಾಳೆಯೇ ಕಡತಗಳನ್ನು ಪರಿಶೀಲಿಸುವುದಾಗಿ ತಿಳಿಸಿದರು.

ಅಧಿಕಾರಿಗಳು ಕೆಲಸ ಮಾಡಬೇಕಾದರೆ ಯಾವುದೇ ಕೆಲಸವಾಗಲಿ ಇದು ನನ್ನ ಸ್ವಂತ ಕೆಲಸ ಎಂಬ ಪರಿಜ್ಞಾನವನ್ನು ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ತರಾಟೆಗೆ ತೆಗೆದುಕೊಂಡರು. ಕಂದಾಯ ಅಧಿಕಾರಿ ಜಯಶೀಲ ಅವರಿಗೆ ತರಾಟೆ ತೆಗೆದುಕೊಂಡ ನಗರೋತ್ಥಾನ ಅಭಿವೃದ್ಧಿ ಅಧಿಕಾರಿ ಶುಭ, ಜನತೆಗಳ ಜೊತೆಯಲ್ಲಿ ಸರಿಯಾಗಿ ಸ್ಪಂದಿಸದೆ ಬೇಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದೀರಿ ಹಾಗೂ ಇತರೆ ಬೇರೆ ತರದ ಆರೋಪಗಳು ಕೇಳಿ ಬರುತ್ತಿದೆ ಅದನ್ನು ಸರಿಪಡಿಸಿಕೊಳ್ಳದಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪುರಸಭೆ ವ್ಯಾಪ್ತಿಯಲ್ಲಿ ಬರುವ 23 ವಾರ್ಡ್‌ಗಳಲ್ಲಿ, ನೀರು ಸರಬರಾಜು ಆಗುತ್ತಿದ್ದು, ಎಲ್ಲಾ ವಾರ್ಡ್‌ಗಳಲ್ಲೂ ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ ಎಂದು ಆರೋಪಗಳು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ನೀರನ್ನು ಪರೀಕ್ಷಿಸಿ ಶುದ್ಧ ಕುಡಿಯುವ ನೀರನ್ನು ಕೊಡಬೇಕು ಎಂದು ತಿಳಿಸಿದ ಅವರು, ಕಸ ವಿಲೇವಾರಿ ಹಾಗೂ ಚರಂಡಿ ಶುದ್ಧೀಕರಣಕ್ಕೆ ಆದ್ಯತೆ ನೀಡಲಾಗುವುದು ಎಂದರು.

ಇದಕ್ಕೂ ಮುನ್ನ ಪುರಸಭಾ ಸಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್, ಸದಸ್ಯರುಗಳಾದ ಆಸಿಫ್ ಇಕ್ಬಾಲ್, ಮಧುಕುಮಾರ್, ಪ್ರೇಮ್‌ಸಾಗರ್, ಸೋಮಶೇಖರ್, ನಂಜಪ್ಪ ಇವರುಗಳು, ನಗರೋತ್ಥಾನ ಅಭಿವೃದ್ಧಿ ಅಧಿಕಾರಿ ಶುಭ ಅವರನ್ನು ಭೇಟಿ ಮಾಡಿ ಪುರಸಭೆ ಅಭಿವೃದ್ಧಿ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಹಾಗೂ ನಡೆಯುತ್ತಿರುವ ಅಕ್ರಮಗಳಿಗೆ ಕಡಿವಾಣ ಹಾಕಬೇಕು ಎಂದು ಮನವಿ ಮಾಡಿದರು.

ಪುರಸಭಾ ಮುಖ್ಯಾಧಿಕಾರಿ ಪಿ. ಸುರೇಶ್, ಪ್ರಥಮ ದರ್ಜೆ ಸಹಾಯಕ ಮೃತ್ಯುಂಜಯ, ವ್ಯವಸ್ಥಾಪಕ ಮುರುಗೇಶ್, ನರಸು ಕುಂಡ್ರೆ, ಪುರಸಭಾ ಸಿಬ್ಬಂದಿಗಳಾದ ಸಂತೋಷ್, ಹರೀಶ್, ಜಯಶೀಲ, ರಘು, ಪರಮೇಶ್, ರೇಷ್ಮಾ, ರಕ್ಷಿತ್ ಅವರುಗಳು ಈ ವೇಳೆ ಉಪಸ್ಥಿತರಿದ್ದರು.

ಹೆಚ್.ಡಿ. ಕೋಟೆ ಪುರಸಭೆಯಲ್ಲಿ 10 ಕೋಟಿ ರೂ.ಗೂ ಹೆಚ್ಚು ಹಗರಣವಾಗಿದೆ ಎಂದು ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್ ಅವರು ಮಂಗಳವಾರ ಸಭೆ ನಡೆಸಿ ನೀಡಿದ್ದ ಮಾಹಿತಿಯನ್ನು ಬುಧವಾರದ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಚಿದರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ತಿ.ನರಸೀಪುರ, ಜು.5– ತಾಲೂಕಿನ ಚಿದರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಚಿಕ್ಕ ಕಲ್ಲುಣಿ ಗ್ರಾಮದ ಚೌಡಯ್ಯ ಹಾಗೂ ಉಪಾಧ್ಯಕ್ಷರಾಗಿ ಹೊಸಕೊಪ್ಪಲು ಗ್ರಾಮದ ಹೆಚ್.ಟಿ. ಮಹದೇವ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದ ಸಹಕಾರ ಸಂಘದ ಕಚೇರಿಯಲ್ಲಿ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಸಂಬಂಧ ಕರೆಯಲಾಗಿದ್ದ ಚುನಾವಣಾ ಸಭೆಯಲ್ಲಿ ನಾಮಪತ್ರ ಸಲ್ಲಿಸಲು ನೀಡಲಾಗಿದ್ದ ಸಮಯದಲ್ಲಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಕ್ರಮವಾಗಿ ಚೌಡಯ್ಯ ಹಾಗೂ ಹೆಚ್.ಟಿ. ಮಹದೇವ ಇಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾಗಿ ಆಗಮಿಸಿದ್ದ ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ ಇಬ್ಬರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ಕಳೆದ ಭಾನುವಾರವಷ್ಟೇ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆದು 12 ಮಂದಿ ಸದಸ್ಯರು ಮುಂದಿನ 5 ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಿಗದಿಪಡಿಸಲಾಗಿತ್ತು.

ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ನಿರ್ದೇಶಕರಾದ ಚಂದ್ರು, ಜಿ.ವಿಜಯಕುಮಾರ್, ಆರ್.ಜಿ.ಶಿವಮೂರ್ತಿ, ಮಹದೇವ, ಸಿದ್ದು, ಇಂದ್ರೇಶ್, ಗೌರಮ್ಮ, ಪಾರ್ವತಮ್ಮ, ಬಿ.ಲಕ್ಷ್ಮಿ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಆಯ್ಕೆಯಾಗಿದ್ದ ಸಿ.ಎಸ್.ನವೀನ್ ಕುಮಾರ್ ಭಾಗವಹಿಸಿ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಅವಿರೋಧ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಕಚೇರಿಯ ಹೊರಗೆ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಈ ವೇಳೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಚೌಡಯ್ಯ ತಮ್ಮ ಆಯ್ಕೆಗೆ ಸಹಕರಿಸಿದ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿದರು.

ಜಿಲ್ಲಾ ಬ್ಯಾಂಕ್ ಪ್ರತಿನಿಧಿ ರಮೇಶ್, ಸಿಇಓ ರಾಜೇಂದ್ರ ಪ್ರಸಾದ್, ಮಲ್ಲೇಶ್ ಕುಮಾರ್, ಕಲ್ಲುಣಿ ಆನಂದ್, ನವೀನ್ ಸಿದ್ದಪ್ಪ ಚಂದ್ರಶೇಖರ್, ಸತೀಶ್, ಬಸವರಾಜು, ನಂಜೇಗೌಡ, ಮಹದೇವ ಗೌಡ, ಸಿದ್ದರಾಜು, ರವಿಕುಮಾರ್, ಜೈಶಂಕರ್, ಕೆಂಪೇಗೌಡ, ನಂಜೇಗೌಡ, ಪುಟ್ಟಸ್ವಾಮಿಗೌಡ, ನಂಜುಂಡೇಗೌಡ, ಮಾದೇಶ್, ದೊಡ್ಡಪುರ ಲಕ್ಷ್ಮಣ, ಯೋಗಾನಂದ, ನಾಗೇಶ್ ಸೇರಿದಂತೆ ಗ್ರಾಮದ ಮುಖಂಡರು, ಯಜಮಾನರು ಹಾಜರಿದ್ದರು.

ಬೆಟ್ಟದಪುರ ಸುತ್ತ-ಮುತ್ತ ಚಿರತೆ ಕಾಟ, ಆತಂಕದಲ್ಲಿ ಗ್ರಾಮಸ್ಥರು



ಬೆಟ್ಟದಪುರ, ಜು.5– ಬೆಟ್ಟದಪುರ ಸುತ್ತಮುತ್ತ ಚಿರತೆಯ ಚಿರತೆ ಕಾಟ ಹೆಚ್ಚಾಗಿದ್ದು ರೈತರು ಮತ್ತು ಗ್ರಾಮಸ್ಥರು ಆತಂಕದಲ್ಲಿ ಜೀವನ ನಡೆಸುವಂತಾಗಿದೆ.

ಬೆಟ್ಟದಪುರ ಮುಖ್ಯ ರಸ್ತೆಯ ಪಕ್ಕದಲ್ಲಿ ಸಿಡಿಲು ಮಲ್ಲಿಕಾರ್ಜುನ ಸ್ವಾಮಿಯ ಬೆಟ್ಟವಿರುವುದರಿಂದ ಅಲ್ಲಿರುವ ಗುಹೆಗಳಲ್ಲಿ ಚಿರತೆಗಳು ವಾಸಿಸುತ್ತಿದ್ದು, ಮರಿಗಳೊಂದಿಗೆ ಓಡಾಡುತ್ತಿರುವುದನ್ನು ನೋಡಿ ರೈತರು ಬೆಚ್ಚಿ ಬಿದ್ದಿದ್ದಾರೆ. ಜೊತೆಗೆ ಎಲ್ಲಾ ಕಡೆ ಚಿರತೆಯ ಹೆಜ್ಜೆ ಗುರುತುಗಳು ಕಂಡು ಬರುತ್ತಿವೆ.

ಈಗ ತಂಬಾಕು ಬೇಯಿಸುವ ಕಾಲವಾಗಿರುವುದರಿಂದ ರೈತರು ಜಮೀನಿನಲ್ಲಿ ತಂಬಾಕು ಮನೆಗಳನ್ನು ಮಾಡಿಕೊಂಡಿದ್ದಾರೆ. ಗ್ರಾಮಸ್ಥರಿಗೆ ಭಯ ಉಂಟಾಗಿದೆ. ಕೂಡಲೇ ಅರಣ್ಯ ಇಲಾಖೆ ಚಿರತೆ ಇರುವ ಜಾಗದಲ್ಲಿ ಬೋನ್ ಇಟ್ಟು ಸಾರ್ವಜನಿಕರು ಮತ್ತು ರೈತರಿಗೆ ನೆಮ್ಮದಿಯಿಂದ ತಿರುಗಾಡಲು ಮತ್ತು ವ್ಯವಸಾಯ ಮಾಡಲು ಅನುಕೂಲ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಹಳ್ಳಿ ಹೈಕಳಲ್ಲಿ ಐಕ್ಯೂ ಹೆಚ್ಚಿರುತ್ತೆ: ಸಾಹಿತಿ ಬನ್ನೂರು ರಾಜು



ಸರಗೂರು, ಜು.5– ನಾವು ನಗರ ಪ್ರದೇಶದ ಮಕ್ಕಳಿಗೆ ಹೋಲಿಸಿದಲ್ಲಿ ಗ್ರಾಮೀಣ ಪರಿಸರದ ಮಣ್ಣಿನ ಸೊಗಡಿನ ಹಳ್ಳಿ ಹೈಕಳಲ್ಲಿ ಸಹಜವಾಗಿಯೇ ಬೌದ್ಧಿಕ (ಐಕ್ಯೂ) ಸಾಮರ್ಥ್ಯ ಹೆಚ್ಚಾಗಿರುತ್ತದೆ ಎಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಸರಗೂರು ತಾಲೂಕಿನ ಮುತ್ತಿಗೆ ಚಿಕ್ಕತಳಲು (ಎಂ.ಸಿ.ತಳಲು) ಗ್ರಾಮದ ಸರ್ಕಾರಿ ಪ್ರೌಢಶಾಲೆ ಮತ್ತು ಮೈಸೂರಿನ ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗ ಸಂಯುಕ್ತವಾಗಿ ಶಾಲೆಯ ಆವರಣದಲ್ಲಿ ಏರ್ಪಡಿಸಿದ್ದ ವಿಶ್ವ ವಿಖ್ಯಾತ ವಿಜ್ಞಾನಿ ಮೇರಿ ಕ್ಯೂರಿ ಅವರ ಪುಣ್ಯಸ್ಮರಣೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಹಳ್ಳಿಯೆಂದರೆ ಅದೂ ಕೂಡ ಕಾಡಿನೊಳಗಿನ ಹಳ್ಳಿ ಎಂದರೆ ಪ್ರಕೃತಿದತ್ತವಾಗಿ ಪರಿಶುದ್ಧ ವಾತಾವರಣದಲ್ಲಿ ಎಲ್ಲವೂ ದೊರೆಯುವ ನಿಸರ್ಗದ ಸ್ವರ್ಗವಾಗಿದ್ದು ಇಲ್ಲಿ ಹುಟ್ಟಿ ಬೆಳೆವ ಮಕ್ಕಳು ಜನ್ಮತಃ ವಿಶೇಷ ಶಕ್ತಿಯುಳ್ಳ ಬುದ್ಧಿವಂತರಾಗಿರುತ್ತಾರೆಂದರು.

ಇಂತಹ ವಿಶೇಷ ಪ್ರತಿಭಾ ಶಕ್ತಿಯುಳ್ಳ ಮಕ್ಕಳು ತಾವು ಏನಾಗಬೇಕೆಂಬುದರ ಬಗ್ಗೆ ಸರಿಯಾದ ಗುರಿಯನ್ನು ಮುಂದಿಟ್ಟುಕೊಂಡು ಹಿಂದೆ ಗುರುಗಳ ಮಾರ್ಗದರ್ಶನವನ್ನು ಪಡೆದುಕೊಂಡು ಸಾಗಿದರೆ ತಮ್ಮ ಜೀವನದಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು. ಮೇರಿ ಕ್ಯೂರಿ ಅಂತಹ ಮೇಧಾವಿ ವಿಜ್ಞಾನಿಯೂ ಆಗಬಹುದು. ವಿಶ್ವೇಶ್ವರಯ್ಯನವರಂತೆ ಮಹಾಮೇಧಾವಿ ಇಂಜಿನಿಯರ್ ಸಹ ಆಗಬಹುದು. ಹೀಗೆ ಎಂಥಾ ಅದ್ಭುತವನ್ನಾದರೂ ಸಾಧಿಸಬಹುದು ಎಂದರು.

ಖ್ಯಾತ ಸಂಖ್ಯಾಶಾಸ್ತ್ರಜ್ಞ ಎಸ್.ಜಿ.ಸೀತಾರಾಂ ಅವರು ಮೇರಿ ಕ್ಯೂರಿಯ ಬದುಕು ಸಾಧನೆ ಸಿದ್ಧಿಯ ಬಗ್ಗೆ ಸುದೀರ್ಘ ಉಪನ್ಯಾಸ ನೀಡಿ ಮೇರಿ ಕ್ಯೂರಿ ಅವರದು ಗಂಡ, ಮಗಳು, ಅಳಿಯ ಸೇರಿದಂತೆ ಇಡೀ ಸಂಸಾರವೇ ನೊಬೆಲ್ ಕುಟುಂಬವಾಗಿತ್ತು ವಿಜ್ಞಾನ ಲೋಕಕ್ಕೆ ಅವರು ಮಾಡಿದ ತ್ಯಾಗ, ಕೊಟ್ಟ ಕೊಡುಗೆ ಅನನ್ಯವಾದದ್ದು. ವಿಜ್ಞಾನ ಲೋಕದ ರೇಡಿಯಮ್ ತಾರೆಯಾದ ಅವರು ನೊಬೆಲ್ ಪ್ರಶಸ್ತಿ ಪುರಸ್ಕೃತೆ ಮಾತ್ರವಲ್ಲ, ಅವರೇ ಒಂದು ನೊಬೆಲ್ ಆಗಿದ್ದರು ಎಂದರು.

ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷರೂ ಆದ ವಿಶ್ರಾಂತ ಶಿಕ್ಷಕ ಎ.ಸಂಗಪ್ಪ ಅವರು ಪ್ರಸ್ತುತ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಸ್ಥಾನ ಗಳಿಸಿರುವ ಶಾಲೆಯ ವಿದ್ಯಾರ್ಥಿಗಳಾದ ಸುನೀತಾ, ಪುಣ್ಯವತಿ, ಅಶೋಕ್, ಮಾನಸ ಅವರುಗಳನ್ನು ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.

ಹಾಗೆಯೇ ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಾದ ಭಾಷಣದಲ್ಲಿ ಜಯಶ್ರೀ (ಪ್ರ), ಎಂ.ದಿವ್ಯ (ದ್ವಿ), ಪ್ರಕಾಶ್ (ತೃ) ಮತ್ತು ಗಾಯನದಲ್ಲಿ ಅಂಜಲಿ(ಪ್ರ), ಕೆ.ಪೂರ್ಣಿಮಾ(ದ್ವಿ), ಮೊಹಮದ್ ಜಬ್ಬರ್(ತೃ) ಹಾಗೂ ಚಿತ್ರಕಲೆಯಲ್ಲಿ ನಯನ (ಪ್ರ), ಆಕಾಶ್(ದ್ವಿ), ಚಂದು(ತೃ) ವಿದ್ಯಾರ್ಥಿಗಳಿಗೆ ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ರಾಜು ಬಹುಮಾನ ವಿತರಿಸಿದರು.

ಶಾಲಾ ವಿದ್ಯಾರ್ಥಿಗಳು ಒಟ್ಟಾಗಿ ಸಾಮೂಹಿಕವಾಗಿ ಸರ್ವಧರ್ಮ ಪ್ರಾರ್ಥನಾ ಗೀತೆಯನ್ನು ಹಾಡಿದರೆ ಗಣ್ಯರೆಲ್ಲರೂ ಮೇರಿ ಕ್ಯೂರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಶಿಕ್ಷಕಿ ಹೆಚ್. ಎಸ್.ಶಾರದಾ ಅವರು ಪ್ರಾಸ್ತಾವಿಕ ಭಾಷಣ ಮಾಡಿ ತಮ್ಮ ಶಾಲೆ ಮತ್ತು ತಮ್ಮ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆ ಅಭಿಮಾನದಿಂದ ಹೇಳಿಕೊಂಡು ಗಣ್ಯರೆಲ್ಲರಿಗೂ ಪರಿಚಯಿಸಿಕೊಟ್ಟರು. ಶಿಕ್ಷಣಪರ ಕಾಳಜಿಯುಳ್ಳ ಗ್ರಾಮದ ಮುಖಂಡರಾದ ಭವಾನೀಶ್, ಗ್ರಾಪಂ ಸದಸ್ಯ ಪ್ರಕಾಶ್ ಚಂದ್ರ, ಶಿಕ್ಷಕರಾದ ಗುರುಸ್ವಾಮಿ, ಮದನ್, ಅಶೋಕ್, ಶ್ರೀಕಂಠ, ಶೃತಿ ಹಾಗೂ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

ತಿ.ನರಸೀಪುರ ಬಿಇಓ ಆಗಿ ಶೋಭಾ ಸುರೇಶ್ ಅಧಿಕಾರ ಸ್ವೀಕಾರ



ತಿ.ನರಸೀಪುರ, ಜು.5– ನೂತನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಜಿ.ಶೋಭಾ ಸುರೇಶ್ ಅವರು ಬುಧವಾರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಅಧಿಕಾರ ವಹಿಸಿಕೊಂಡರು.

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಜಿ.ಶೋಭಾ ಸುರೇಶ್ ಅವರನ್ನು ರಾಜ್ಯ ಸರ್ಕಾರ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ವರ್ಗಾವಣೆ ಮಾಡಿದ ಹಿನ್ನೆಲೆಯಲ್ಲಿ ಇಂದು ಕಚೇರಿಯ ಸಿಬ್ಬಂದಿಗಳು ಹಾಗೂ ವಿವಿಧ ಶಿಕ್ಷಕ ಸಂಘಟನೆಗಳ ಪದಾಧಿಕಾರಿಗಳ ಸಮ್ಮುಖದಲ್ಲಿ ಇಲಾಖೆಯ ಬಿಇಓ ಜವಾಬ್ದಾರಿಯನ್ನು ವಹಿಸಿಕೊಂಡರು.

ಈ ವೇಳೆ ಜಿ.ಶೋಭಾ ಸುರೇಶ್ ಮಾತನಾಡಿ, ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ಎಲ್ಲರೊಂದಿಗೆ ಒಡನಾಟವಿರುವ ನರಸೀಪುರದಲ್ಲಿ ಬಿಇಓ ಆಗಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿರುವುದು ಹೆಮ್ಮೆ ಎನಿಸುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ತಾಲೂಕಿನ ಶಿಕ್ಷಣ ಇಲಾಖೆ ಜವಾಬ್ದಾರಿ ನೀಡಿರುವುದರಿಂದ ಕಚೇರಿ ಆಡಳಿತ ವರ್ಗ ಹಾಗೂ ಶಿಕ್ಷಕರ ಸಹಕಾರವನ್ನು ಪಡೆದುಕೊಂಡು ಶೈಕ್ಷಣಿಕ ಪ್ರಗತಿಗೆ ನಿಷ್ಠೆಯಿಂದ ದುಡಿಯುತ್ತೇನೆ ಎಂದು ತಿಳಿಸಿದರು.

ನೂತನ ಬಿಇಓ ಅವರನ್ನು ಹಲವರು ಸನ್ಮಾನಿಸಿ, ಅಭಿನಂದಿಸಿದರು. ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಅರುಣ್ ಕುಮಾರ್, ಆನಂದ್, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ಕಾರ್ಯದರ್ಶಿ ಸುಬ್ರಹ್ಮಣ್ಯ, ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಕುಪ್ಯ ಪುಟ್ಟಸ್ವಾಮಿ, ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ಶಿವಣ್ಣ, ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ ಶ್ರೀಧರ್, ಗ್ರಾಮೀಣ ಸಂಘದ ಅಧ್ಯಕ್ಷ ಟಿಟಿಟಿ ನಾಗರಾಜು, ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಶಿಕ್ಷಕರಾದ ಎ.ಗಜೇಂದ್ರ, ಪ್ರಸಾದ್, ಕುಮಾರಸ್ವಾಮಿ ಹಾಗೂ ಇನ್ನಿತರರು ಹಾಜರಿದ್ದರು.

ಬನ್ನಿಕುಪ್ಪೆಯಲ್ಲಿ ನನ್ನ ಗಿಡ ನನ್ನ ಹೆಮ್ಮೆ ಕಾರ್ಯಕ್ರಮ



ಹುಣಸೂರು, ಜು.5– ತಾಲೂಕಿನ ಬನ್ನಿಕುಪ್ಪೆ ಗ್ರಾಮದಲ್ಲಿ ಹುಣಸೂರು ಪ್ರಾದೇಶಿಕ ಅರಣ್ಯ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ಬನ್ನಿಕುಪ್ಪೆ ಸಂಯುಕ್ತ ಆಶ್ರಯದಲ್ಲಿ ಪ್ರೌಢಶಾಲಾ ಆವರಣದಲ್ಲಿ ನನ್ನ ಗಿಡ ನನ್ನ ಹೆಮ್ಮೆ ಕಾರ್ಯಕ್ರಮ ದಡಿಯಲ್ಲಿ ಅರಣ್ಯ ಹಣ್ಣಿನ ಸಸಿಗಳನ್ನು ನೆಡುವುದರ ಮೂಲಕ ವನಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ನಾಗೇಗೌಡ, ಉಪಪ್ರಾಂಶುಪಾಲೆ ಲಕ್ಷ್ಮಿಕಾಂತ್, ಗ್ರಾ.ಪಂ ಕಾರ್ಯದರ್ಶಿ ವೇದಮೂರ್ತಿ.ಸಿ.ಎಸ್, ಪ್ರಾದೇಶಿಕ ವಲಯ ಅರಣ್ಯ ಅಧಿಕಾರಿಗಳಾದ ಹರೀಶ್, ಸಹನಾ ಪಾಟೀಲ್, ಪ್ಯಾರಿಜಾನ್, ಸಂಪತ್‌ಕುಮಾರ್, ದೇವಯ್ಯ, ಗ್ರಾ.ಪಂ ಸದಸ್ಯ ಗೋವಿಂದನಾಯಕ, ಸಿ.ಡಿ.ಸಿ ಸಮಿತಿ ಸದಸ್ಯ ಮಹದೇವಸ್ವಾಮಿ ಹಾಗೂ ಅರಣ್ಯ ರಕ್ಷಕರು, ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪೋಷಕರ ಕನಸು ನನಸು ಮಾಡುವತ್ತ ಚಿತ್ತ ಹರಿಸಿ



ಹುಣಸೂರು, ಜು.5– ಇಂತಹ ವುಮೆನ್ ಫೆಸ್ಟ್ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಹುರುಪು-ಉತ್ಸಾಹ, ಎನರ್ಜಿ ತುಂಬಲಿದೆ. ವಿದ್ಯಾರ್ಥಿಗಳು ತಮಗೆ ನೀಡಿರುವ ಸ್ವಾತಂತ್ರವನ್ನು ಸದ್ಬಳಕೆ ಮಾಡಿಕೊಳ್ಳಬೇಕೆ ಹೊರತು ಸ್ವೇಚ್ಛಾಚಾರಕ್ಕೆ ಬಳಸಿಕೊಳ್ಳಬಾರದು. ನಿಮ್ಮ ಮತ್ತು ಪೋಷಕರ ಕನಸು ನನಸಾಗಿಸುವ ಕಡೆ ಗುರಿ ಇರಬೇಕೆಂದು ಮೈಸೂರಿನ ಕಲಾವಿದೆ, ಸಂಶೋಧಕಿಯಾದ ಡಾ. ಶ್ವೇತಾ ಮಡಪ್ಪಾಡಿ ತಿಳಿಸಿದರು.

ಪಟ್ಟಣದ ಮಹಿಳಾ ಸರ್ಕಾರಿ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ಐದು ದಿನಗಳ ವುಮೆನಿಸ್ಟ್-ವುಮೆನ್ಸ್ ಫೆಸ್ಟ್ ಸಂಭ್ರಮದ ಕಾರ್ಯಕ್ರಮವನ್ನು ಡೋಲು ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಕಾಲೇಜು ಗಗನಕುಸುಮವಾಗಿತ್ತು, ಹಳ್ಳಿಯಲ್ಲಂತೂ ಪ್ರೌಢಶಾಲೆಗೆ ಹೋಗುವುದೂ ಸಹ ಕಷ್ಟ ಸಾಧ್ಯವಾಗಿತ್ತು. ಸರಕಾರಗಳು ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿದ್ದರಿಂದಾಗಿ ಪ್ರತಿಹಳ್ಳಿಯಲ್ಲಿ ಪದವೀಧರ ವಿದ್ಯಾರ್ಥಿಗಳಿದ್ದಾರೆ ಎಂದರು.

ಪೋಷಕರ ಕನಸು ನನಸಾಗಿಸಿ: ನಿಮ್ಮ ಸಾಧನೆ ವೇಳೆ ಕಾಲೆಳೆಯುವರು, ಅಪಮಾನ, ಚಾಲೆಂಜ್ ಮಾಡುವವರಿರುತ್ತಾರೆ. ಇದನ್ನು ಮೆಟ್ಟಿ ನಿಲ್ಲಬೇಕು. ಸಣ್ಣ ವಿಚಾರಗಳಿಗೂ ಹೆಚ್ಚಿನ ಗಮನ ಕೊಡಿ, ನಿಮ್ಮ ಪೋಷಕರು ಹಲವಾರು ಕನಸುಗಳನ್ನಿಟ್ಟುಕೊಂಡು ಶಿಕ್ಷಣ ಕೊಡಿಸುತ್ತಿರುವುದನ್ನು ಅರಿತು ಓದಿನ ಕಡೆಗೂ ಆದ್ಯತೆ ನೀಡಿ. ಸ್ವಲ್ಪ ಎಚ್ಚರ ತಪ್ಪಿದರೂ ಬದುಕಿನಲ್ಲಿ ನಿರಾಶರಾಗುತ್ತೀರಿ. ಪ್ರೀತಿ-ಪ್ರೇಮದಿಂದ ದೂರವಾಗಿರಿ. ಸಾಧನೆಯ ನಂತರ ಆಯ್ಕೆ ನಿಮ್ಮದಾಗಿರಲಿ. ಮಹಿಳಾ ಸಬಲೀಕರಣದ ಈ ವೇಳೆ ಹೆಣ್ಣು ಮಕ್ಕಳಲ್ಲಿ ಗಟ್ಟಿತನ ಬರಬೇಕೆಂದು ಆಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪುಟ್ಟಶೆಟ್ಟಿ ಮಾತನಾಡಿ, ಕಾಲೇಜಿನಲ್ಲಿ ನಡೆಯುತ್ತಿರುವ ಐದು ದಿನಗಳ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಿ. ಇದೇ ರೀತಿ ಪಠ್ಯದ ಕಡೆಗೂ ಗಮನ ಹರಿಸಬೇಕೆಂದು ಸೂಚಿಸಿದರು.

ಕಾಲೇಜಿನ ಮಹಿಳಾ ಸಬಲೀಕರಣ ಸಮಿತಿ ಸಂಚಾಲಕಿ ವುಮನ್ ಫೆಸ್ಟ್ ಆಯೋಜಕಿ ಡಾ.ಸಿ.ಎನ್. ಕಾವ್ಯ ಅವರು ವಿದ್ಯಾರ್ಥಿನಿಯರಿಗಾಗಿ ಹಮ್ಮಿಕೊಂಡಿರುವ ಐದು ದಿನದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಸಿಸಿಡಿ ಉಪಾಧ್ಯಕ್ಷ ಮೋದೂರು ಮಹೇಶಾರಾಧ್ಯ, ಸದಸ್ಯರಾದ ಶಿವಕುಮಾರ್ ವಿ.ರಾವ್, ಸಾಂಸ್ಕೃತಿಕ ಸಮಿತಿಯ ಸಂಚಾಲಕ ಬಸವಲಿಂಗಸ್ವಾಮಿ, ಪ್ರಾಧ್ಯಾಪಕ ಡಾ. ನಂಜುಂಡಸ್ವಾಮಿ ಮಾತನಾಡಿದರು. ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿನಿಯರು ಸಂಭ್ರಮದಲ್ಲಿ ಮಿಂದೆದ್ದರು.

ನಗರಸಭೆ ಸದಸ್ಯ ಶ್ರೀನಾಥ್, ಸಿಡಿಸಿ ಸದಸ್ಯರಾದ ರಾಜಶೇಖರ್, ಜ್ಯೋತಿ ವಿಶ್ವನಾಥ್ ಸೇರಿದಂತೆ ಅಧ್ಯಾಪಕರು ಭಾಗವಹಿಸಿದ್ದರು.

ಕಾರ್ಯಕ್ರಮಕ್ಕಾಗಮಿಸಿದ ಡಾ. ಶ್ವೇತಾ ಮಡಪ್ಪಾಡಿ ಹಾಗೂ ಗಣ್ಯರನ್ನು ಜೋಡೆತ್ತಿನ ಗಾಡಿಯಲ್ಲಿ, ಕಳಸ ಹೊತ್ತ ವಿದ್ಯಾರ್ಥಿನಿಯರ ಕಲರವದೊಂದಿಗೆ ವೇದಿಕೆಗೆ ಕರೆತರಲಾಯಿತು. ಮತ್ತೊಂದೆಡೆ ಯಕ್ಷಗಾನ ವೇಷಭೂಷಣ ತೊಟ್ಟಿದ್ದ ವಿದ್ಯಾರ್ಥಿನಿಯರು ಇಡೀ ಕಾರ್ಯಕ್ರಮಕ್ಕೆ ಮೆರಗು ನೀಡಿದರು.

ಶೈಲಜಾ ನಿಧನ



ಪಿರಿಯಾಪಟ್ಟಣ, ಜು.5 – ತಾಲೂಕಿನ ಬೆಟ್ಟದಪುರ ಹೋಬಳಿ ಕೂಣಸೂರು ಗ್ರಾಮದ ಭುವನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಶಿವಣ್ಣನವರ ಧರ್ಮಪತ್ನಿ ಶ್ರೀಮತಿ ಶೈಲಜಾ (48) ಇಂದು ಬೆಳಗ್ಗೆ ಅನಾರೋಗ್ಯದಿಂದ ನಿಧನ ಹೊಂದಿದರು.

ದಿವಂಗತರು ಪತಿ ಶಿವಣ್ಣ, ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಗ್ರಾಮದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮಾಜಿ ಜಿಪಂ ಸದಸ್ಯ ಕೆ.ಸಿ.ರಾಜಶೇಖರಯ್ಯ, ತಾಪಂ ಮಾಜಿ ಉಪಾಧ್ಯಕ್ಷ ಯೋಗೇಶ್, ಗ್ರಾಪಂ ಸದಸ್ಯರಾದ ಮಂಜು, ರವಿ ಭುವನಹಳ್ಳಿ, ವಿಎಸ್‌ಎಸ್ ಮಾಜಿ ಅಧ್ಯಕ್ಷ ಮಲ್ಲೇಶ್, ಗ್ರಾಪಂ ಮಾಜಿ ಅಧ್ಯಕ್ಷ ಪಶುಪತಿ, ಶಿವಪ್ಪ, ಜೋಗನಹಳ್ಳಿ ಗ್ರಾಪಂ ಸದಸ್ಯ ದೇವರಾಜ್, ಭುವನಹಳ್ಳಿ ಜೆಡಿಎಸ್ ಕಾರ್ಯಕರ್ತ ಬಿ.ವಿ.ಗಿರೀಶ್, ಕೂರ್ಗಲ್ಲು ಶಿವಕುಮಾರಸ್ವಾಮಿ ಸೇರಿದಂತೆ ಇನ್ನು ಹಲವರು ಇವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಮೈಸೂರು-570008, ಜೆ.ಪಿ.ನಗರ, "ಎ" ಬ್ಲಾಕ್, 16ನೇ ಕ್ರಾಸ್, ಮನೆ ನಂ.139 ರಲ್ಲಿ ವಾಸವಾಗಿರುವ ಲೇಟ್.ಚಿಕ್ಕೇಗೌಡ ರವರ ಮಗನಾದ ಶ್ರೀ.ಮೋಹನ್ ಕುಮಾರ್ ಡಿ.ಸಿ. ರವರಿಂದ ಮೈಸೂರು, ರಾಮಕೃಷ್ಣ ನಗರ, 'ಐ" ಬ್ಲಾಕ್, ಸ್ವಾಮಿ, ವಿವೇಕಾನಂದ ರಸ್ತೆ, ಮನೆ ನಂ.3 ರಲ್ಲಿ ವಾಸವಾಗಿರುವ ಶ್ರೀ.ಗಣೇಶ್ ರವರ ಮಗನಾದ ಶ್ರೀ.ರಾಕೇಶ್ ಜಿ. ಆದ ನನ್ನ ಕಕ್ಷಿಗಾರರು ಷೆಡ್ಯೂಲ್ ಸ್ವತ್ತುಗಳನ್ನು ಖರೀದಿಸಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕುಬಾಧ್ಯತೆ ಇದ್ದಲ್ಲಿ ಈ ದಿನದಿಂದ 15 (ಹದಿನೈದು) ದಿನದೊಳಗೆ ತಮ್ಮ ಲಿಖಿತ ತಕರಾರುಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 15 (ಹದಿನೈದು)ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತುಗಳನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 15 (ಹದಿನೈದು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳ ವಿವರ: ಐಟಂ ನಂ.1:- ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಬೆಟ್ಟದಬೀಡು ಗ್ರಾಮದ ಸರ್ವೆ ನಂ.119, ಹೊಸ ಸರ್ವೆ ನಂ.124 ರ ವಿಸ್ತೀರ್ಣ 1 ಎಕರೆ 34 ಗುಂಟೆ ಜಮೀನಿಗೆ ಚಕ್ಕುಬಂದಿ

ಪೂರ್ವಕ್ಕೆ: ಶಂಭುಗೌಡ ರವರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ.118/3 ರ ಜಮೀನು (ಐಟಂ ನಂ.2 ಸ್ವತ್ತು), ಉತ್ತರಕ್ಕೆ : ನಿಂಗೇಗೌಡ ರವರ ಜಮೀನು, ದಕ್ಷಿಣಕ್ಕೆ: ರಸ್ತೆ.

ಐಟಂ ನಂ.2:- ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಬೆಟ್ಟದಬೀಡು ಗ್ರಾಮದ ಸರ್ವೆ ನಂ.118/3 ರ ವಿಸ್ತೀರ್ಣ 0–15 ಗುಂಟೆ ಜಮೀನಿಗೆ ಚೆಕ್ಕುಬಂದಿ:- ಪೂರ್ವಕ್ಕೆ: ಸರ್ವೆ ನಂ.124 ರ ಜಮೀನು (ಐಟಂ ನಂ.1 ರ ಜಮೀನು), ಪಶ್ಚಿಮಕ್ಕೆ: ಸರ್ವೆ ನಂ.118/2ರ ರಾಜಕುಮಾರ್ ಜಿ. ರವರ ಜಮೀನು, ಉತ್ತರಕ್ಕೆ: ಸರ್ವೆ ನಂ.124 ರ ಮೋಹನ್ ಕುಮಾರ್ ಡಿ.ಸಿ. ರವರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ.124 ರ ಮೋಹನ್ ಕುಮಾರ್ ಡಿ.ಸಿ. ರವರ ಜಮೀನು.

Sd/- S.PRADEEP KUMAR, M.BA,LLB. Roll No. KAR/1332/2012, ADVOCATE, #2917/A, 1st Floor, Opp. TTL College, Kantharaja Urs Road, Saraswathipuram MYSURU-570 009. Mob.: 9740315184